



# ಕರ್ನಾಟಕ ಸ್ಕೌಟ್ ಮತ್ತು ಗೈಡ್

ತಿಂಗಳ ವಾರ್ತಾಪತ್ರಿಕೆ

# Karnataka Scout & Guide

Monthly News Magazine

Vol -20 | Issue-03 | March 2023 | ₹ 10/-


**2023ನೇ ಸಾಲಿನ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿ ಸಂಭ್ರಮಿಸುತ್ತಿರುವ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್‌ಗಳು**












12 ಮಾರ್ಚ್ 2023ರಂದು ಡಾ. ಆನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜರುಗಿದ 104ನೇ ರಾಜ್ಯ ಪರಿಷತ್ ಸಭೆಯ ಉದ್ಘಾಟನೆಯನ್ನು ನಾಡೋಜ ಡಾ॥ ಗೊ.ರು. ಚನ್ನಬಸಪ್ಪರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ರಾಜ್ಯ ಆಯುಕ್ತರುಗಳಾದ ಶ್ರೀ ಎಂ.ಎ. ಖಾಲಿದ್, ಶ್ರೀಮತಿ ಗೀತಾನಟರಾಜ್, ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕೋಶಾಧಿಕಾರಿ ಶ್ರೀ ಪ್ರಭುದೇವ ಜೆ. ಚಿಗಟೇರಿ, ಜಂಟಿ ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಬಿ.ಕೆ. ಬಸವರಾಜ್, ಶ್ರೀಮತಿ ಬಿ.ಎ. ರಾಮಲತಾ, ಉಪಾಧ್ಯಕ್ಷರುಗಳಾದ ಶ್ರೀ ಹೆಚ್.ಎಂ. ಸಿದ್ದರಾಮಸ್ವಾಮಿ, ಶೀಮತಿ ಆಶಾ ಪ್ರಸನ್ನಕುಮಾರ್, ಶ್ರೀಮತಿ ಪುಷ್ಪವಲ್ಲಿ ಉಪಸ್ಥಿತರಿದ್ದರು.



11 ಫೆಬ್ರವರಿ 2023ರಂದು ಬೆಳಗಾವಿ ಜಿಲ್ಲಾ ಸಂಸ್ಥೆಯ "ನವೀಕೃತ ಜಿಲ್ಲಾ ಕೇಂದ್ರ ಕಛೇರಿ" ಉದ್ಘಾಟನಾ ಸಮಾರಂಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಶ್ರೀ ಗಜಾನನ ಮನ್ನಿಕೇರಿ, ಜಂಟಿ ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಧಾರವಾಡ ಹಾಗೂ ಬೆಳಗಾವಿ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಮೋಹನ್ ಕುಮಾರ್ ಹಂಚಾಟೆ, ಉಪನಿರ್ದೇಶಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದರು.

ಪೋಷಕರು
ಪಿ.ಜಿ.ಆರ್. ಸಿಂಧ್ಯ

ಗೌರವ ಅಧ್ಯಕ್ಷರು
ಡಾ. ಗೊ.ರು. ಚನ್ನಬಸಪ್ಪ

ಅಧ್ಯಕ್ಷರು
ಕೊಂಡಜ್ಜಿ ಬ. ಷಣ್ಮುಖಪ್ಪ

ಸಂಪಾದಕರು
ಕೆ. ಗಂಗಪ್ಪಗೌಡ

ಸಹಸಂಪಾದಕರು
ಎನ್. ಶ್ರೀನಿವಾಸನ್

ಸಂಚಾಲಕರು
ಬಿ.ಎಸ್. ರವೀಂದ್ರ

ಸದಸ್ಯರು
ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide

MONTHLY NEWS MAGAZINE

Vol: 20 Issue : 03 March 2023

## ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...04
ಹುಟ್ಟು ಸಾವು ...05
ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ - ಶ್ರದ್ಧಾಂಜಲಿ ...06
ಈಶಾ ಫೌಂಡೇಶನ್‌ನಲ್ಲಿ ಸೇವಾ ಶಿಬಿರ ...07
104ನೇ ರಾಜ್ಯ ಪರಿಷತ್ ಸಭೆ ...08
ಎ.ಎಸ್.ಒ.ಸಿ, ಡಿ.ಒ., ಎಸ್.ಜಿ.ವಿ.ಗಳ ಸಭೆ ...12
ಬೇಸಿಗೆ ಶಿಬಿರದ ಆದೇಶ ಪ್ರತಿ ...13
ಜಿಲ್ಲಾ ವಾರ್ತೆಗಳು ...14
ಎಂ.ಆರ್.ಶ್ರೀ - ವಾರ್ತಾಪತ್ರಿಕೆಯ ಪ್ರಥಮ ಸಂಪಾದಕರು ...35
ಯುಗಾದಿ ...36
ಶ್ರದ್ಧಾಂಜಲಿ ...37



# ರಾಜ್ಯ ಮುಖ್ಯ ಆಯುಕ್ತರ ನುಡಿ

ಸಮಸ್ತ ಸ್ಕೌಟ್ಸ್ ಮತ್ತು ಗೈಡ್ಸ್ ಬಂಧುಗಳಿಗೆ ಶುಭಾಶಯಗಳು,

ಮೊಟ್ಟಮೊದಲಿಗೆ, ನನ್ನ ಮೇಲೆ ವಿಶ್ವಾಸವಿಟ್ಟು, ಮೂರನೇ ಅವಧಿಗೆ ರಾಜ್ಯ ಮುಖ್ಯ ಅಯುಕ್ತನಾಗಿ ಮುಂದುವರೆಯಲು ನನ್ನ ಅವಿರೋಧ ಆಯ್ಕೆಗೆ ಸಹಕಾರ ನೀಡಿ, ಸಂಸ್ಥೆಯ ಸೇವೆ ಮಾಡುವ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಸಮಸ್ತ ಸ್ಕೌಟ್ಸ್ – ಗೈಡ್ಸ್ ಬಂಧುಗಳಿಗೆ ಹೃತ್ಪೂರ್ವಕವಾದ ಧನ್ಯವಾದಗಳು. ನಮ್ಮ ಮನವಿಯ ಮೇರೆಗೆ, ಸಂಸ್ಥೆಯ ಉಪಾಧ್ಯಕ್ಷರಾಗಿ ಮುಂದುವರೆದು ಎಂದಿನಂತೆ ನಮಗೆ ಮಾರ್ಗದರ್ಶನ ಮಾಡುತ್ತಿರುವ ಚಳುವಳಿಯ ಹಿರಿಯ ನಾಯಕರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪರನ್ನೊಳಗೊಂಡಂತೆ ವಿವಿಧ ಹುದ್ದೆಗಳಿಗೆ ಅವಿರೋಧವಾಗಿ ಆಯ್ಕೆಯಾಗಿರುವ / ಚುನಾಯಿತರಾಗಿರುವ ಎಲ್ಲರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಮಾರ್ಚ್ 12 ರಂದು ದೊಡ್ಡಬಳ್ಳಾಪುರದಲ್ಲಿ ನಡೆದ "ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ 104ನೇ ವಾರ್ಷಿಕ ಮಹಾ ಸಭೆ" ಯಶಸ್ವಿಯಾಗಿ ಜರುಗಿದೆ. ಸುಮಾರು 250ಕ್ಕೂ ಹೆಚ್ಚಿನ ಸಂಖ್ಯೆಯ ಗೌರವಾನ್ವಿತ ಸದಸ್ಯರುಗಳು ಭಾಗವಹಿಸಿ, ಚಳವಳಿಯ ಬೆಳವಣಿಗೆಗೆ ಸಲಹೆ ಸೂಚನೆಗಳನ್ನು ಹಾಗೂ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವುಗಳೆಲ್ಲವನ್ನೂ ನಾನು ಗೌರವದಿಂದ ಸ್ವೀಕರಿಸಿದ್ದೇನೆ. ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪಗೌಡ ಮತ್ತು ಜಂಟಿ ರಾಜ್ಯ ಕಾರ್ಯದರ್ಶಿ (ಸ್ಕೌಟ್ಸ್) ಶ್ರೀ ಬಿ.ಕೆ. ಬಸವರಾಜ ರವರ ನೇತೃತ್ವದಲ್ಲಿ ರಾಜ್ಯ ಸಂಸ್ಥೆಯ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಚುನಾವಣೆ ಪ್ರಕ್ರಿಯೆಗಳನ್ನು ಹಾಗೂ ವಾರ್ಷಿಕ ಮಹಾಸಭೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಎಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

2022–23ನೇ ಸಾಲಿನ ಎಸ್.ಎಸ್.ಎಲ್.ಸಿ., ಮುಖ್ಯ ಪರೀಕ್ಷೆಗಳು ಇದೇ ಮಾರ್ಚ್ 31 ರಿಂದ ನಡೆಯಲಿವೆ. ಎಸ್.ಎಸ್.ಎಲ್.ಸಿ ಪರೀಕ್ಷೆಯು ವಿದ್ಯಾರ್ಥಿ ಜೀವನದ ಒಂದು ಪ್ರಮುಖ ಘಟ್ಟ. ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸದ ಗುರಿ ತೀರ್ಮಾನವಾಗುವ ಮಹತ್ವದ ತಿರುವು. ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸುವ ಸಾಮರ್ಥ್ಯ ಎಲ್ಲಾ ವಿದ್ಯಾರ್ಥಿಗಳಲ್ಲಿ ಮೂಡಲಿ. ಯಾವುದೇ ಆತಂಕ ಹಾಗೂ ಭಯ ಇಲ್ಲದೆ, ಎಲ್ಲಾ ವಿದ್ಯಾರ್ಥಿ ಮಿತ್ರರು ಆತ್ಮವಿಶ್ವಾಸದಿಂದ ಪರೀಕ್ಷೆ ಬರೆದು ಉತ್ತಮ ಫಲಿತಾಂಶವನ್ನು ಪಡೆಯಲಿ ಎಂದು ರಾಜ್ಯ ಸಂಸ್ಥೆ ಹಾರೈಸುತ್ತದೆ.

ನಮ್ಮ ಸಂಸ್ಥೆಯ ಮಹತ್ವಪೂರ್ಣ ಮತ್ತು ಮಕ್ಕಳನ್ನು ಆಕರ್ಷಿಸುವ ಚಟುವಟಿಕೆಗಳಲ್ಲಿ ಒಂದಾದ ಬೇಸಿಗೆ ಶಿಬಿರಗಳು ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಈಗಾಗಲೇ ಪ್ರಾರಂಭಗೊಂಡು, ಸಕಾರಾತ್ಮಕವಾದ ಪ್ರತಿಕ್ರಿಯೆ ಪಡೆಯುತ್ತಿವೆ. ನಮ್ಮ ಸಂಸ್ಥೆಯಿಂದ ಆಯೋಜಿಸಲಾಗುವ ಬೇಸಿಗೆ ಶಿಬಿರಗಳಲ್ಲಿ ಮಕ್ಕಳಿಗೆ ಮನರಂಜನೆ, ಕಲೆ, ಸಂಸ್ಕೃತಿಯ ಪರಿಚಯ ಹಾಗೂ ಶಾರೀರಿಕ ಚಟುವಟಿಕೆಗಳ ಜೊತೆಗೆ, ನಮ್ಮ ತರಬೇತುದಾರರು ಸ್ಕೌಟ್ಸ್ ಗೈಡ್ಸ್ ಧ್ಯೇಯಗಳಾದ ಪರಿಸರ ಪ್ರಜ್ಞೆ, ಸಮುದಾಯ ಸೇವೆ, ಸಚ್ಚಾರಿತ್ರ್ಯ ಮತ್ತು ಮೌಲ್ಯಾಧಾರಿತ ಶಿಕ್ಷಣವನ್ನು ಕಲಿಸುತ್ತಿರುವ ಕಾರಣ ಅವುಗಳು ಯಶಸ್ಸನ್ನು ಕಾಣುತ್ತಿವೆ ಮತ್ತು ಅರ್ಥಪೂರ್ಣಗೊಳ್ಳುತ್ತಿವೆ. ಕಳೆದ ವರ್ಷ ಕೋವಿಡ್ ಮಹಾಮಾರಿಯ ನೆರಳು ಮತ್ತು ಆತಂಕವಿದ್ದರೂ ಸಹ ರಾಜ್ಯಾದ್ಯಂತ ಒಂದೂವರೆ ಲಕ್ಷದಷ್ಟು ಮಕ್ಕಳು ನಮ್ಮ ಬೇಸಿಗೆ ಶಿಬಿರಗಳಲ್ಲಿ ಭಾಗವಹಿಸಿದ್ದು ನಮಗೆ ಹೆಮ್ಮೆ ತಂದಿದೆ. ಅಲ್ಲದೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮೆಚ್ಚಿಕೊಂಡಿದ್ದಾರೆ. ಇದರ ಪರಿಣಾಮವಾಗಿ ಈ ಸಾಲಿನ ಬೇಸಿಗೆ ಶಿಬಿರಗಳಿಗೆ ಎಂದಿನಂತೆ ಶಿಕ್ಷಣ ಇಲಾಖೆ ಸಕಾಲಕ್ಕೆ ಅನುಮತಿ ನೀಡಿರುವುದರೊಂದಿಗೆ ಇಲಾಖೆಯಿಂದ ಲಭ್ಯವಿರುವ ಎಲ್ಲ ರೀತಿಯ ಪ್ರೋತ್ಸಾಹವನ್ನು ನೀಡಲು ಮುಂದಾಗಿದೆ. ಜಿಲ್ಲಾಡಳಿತಗಳು ಮತ್ತು ಜಿಲ್ಲಾ/ ತಾಲ್ಲೂಕು ಶಿಕ್ಷಣ ಇಲಾಖೆಯ ಸಹಕಾರ ಸಂಪೂರ್ಣವಾಗಿದೆ. ಇಂತಹ ಅವಕಾಶವನ್ನು ಎಲ್ಲರೂ ಸದುಪಯೋಗಪಡಿಸಿಕೊಂಡು, ಬೇಸಿಗೆ ಶಿಬಿರಗಳನ್ನು ಮತ್ತಷ್ಟು ಅರ್ಥಪೂರ್ಣವಾಗಿ ಆಯೋಜಿಸಬೇಕೆಂದು ಮನವಿ ಮಾಡುತ್ತೇನೆ.

ಕಳೆದ ವರ್ಷದ ಕೊನೆಯಲ್ಲಿ, ಪ್ರಪಂಚದ ಗಮನ ಸೆಳೆದ ಮೂಡುಬಿದರೆ ಆಳ್ವ ಶಿಕ್ಷಣ ಸಂಸ್ಥೆಯಲ್ಲಿ ಏರ್ಪಡಿಸಿದ್ದ "ಅಂತರಾಷ್ಟ್ರೀಯ ಸ್ಕೌಟ್ಸ್–ಗೈಡ್ಸ್ ಸಾಂಸ್ಕೃತಿಕ ಜಾಂಬೋರಿ"ಯಲ್ಲಿ ನಾವೆಲ್ಲ ಹೆಚ್ಚಿನ ಸಮಯವನ್ನು ತೊಡಗಿಸಿಕೊಂಡಿದ್ದರೂ ಸಹಿತ, 2022–23ನೇ ಸಾಲಿಗೆ ನಾವು ಸಿದ್ದಪಡಿಸಿಕೊಂಡಿದ್ದ ರೂಪುರೇಷೆಯಂತೆ ಸಾಕಷ್ಟು ಶಿಬಿರ, ಕಾರ್ಯಕ್ರಮ ಮತ್ತು ತರಬೇತಿಗಳನ್ನು ಸಾಧ್ಯವಾದಷ್ಟು ಅನುಷ್ಠಾನಗೊಳಿಸುವ ಪ್ರಯತ್ನ ಮಾಡಿದ್ದೇವೆ. ಚಳುವಳಿಯ ಆತ್ಮವಿಶ್ವಾಸವನ್ನು ಹೆಚ್ಚಿಸುವ ಪ್ರಯತ್ನ ಮಾಡಿದ ಎಲ್ಲರಿಗೂ ಅಭಿನಂದನೆಗಳು.

ಸಂಸ್ಥೆಗೆ ಲಭ್ಯವಿರುವ ಸೀಮಿತ ಅನುದಾನ ಮತ್ತು ಆದಾಯದ ಮೂಲಗಳನ್ನು ಗಣನೆಗೆ ತೆಗೆದುಕೊಂಡು, 2023–24ನೇ ಸಾಲಿನ ಕಾರ್ಯಕ್ರಮಗಳ ಯೋಜನೆಗಳ ರೂಪುರೇಷೆಗಳನ್ನು ರಚಿಸಲಾಗುತ್ತಿದೆ. ಇದರ ಸಂಬಂಧವಾಗಿ ಮಾರ್ಚ್ 27ರಂದು ನಡೆದ ಪ್ರಮುಖರ ಸಭೆಯಲ್ಲಿ ಹಲವಾರು ಉತ್ತಮ ಸಲಹೆಗಳು ಬಂದಿವೆ. ಅವುಗಳನ್ನು ಕ್ರೋಢೀಕರಿಸಿ ಯೋಜನೆಯನ್ನು ಸಿದ್ದಪಡಿಸಿದ ನಂತರ ಪ್ರತಿಗಳನ್ನು ಎಲ್ಲಾ ಸ್ಥಳೀಯ ಸಂಸ್ಥೆಗಳಿಗೂ ಕಳಿಸಿಕೊಡಲಾಗುತ್ತದೆ. ಅದರಂತೆ, ನಮ್ಮೆಲ್ಲರ ಸಂಘಟಿತ ಪ್ರಯತ್ನದಿಂದ ಈ ಸಾಲಿನ ಯೋಜನೆಗಳು ಯಶಸ್ವಿಯಾಗುವ ಭರವಸೆಯನ್ನು ಇಟ್ಟುಕೊಂಡಿದ್ದೇನೆ.

ಶ್ರವಣಬೆಳಗೊಳ ಎಂದರೆ ನೆನಪಾಗುವುದು ಬಾಹುಬಲಿಯ ಮಹಾನ್ ಮೂರ್ತಿ ಹಾಗೂ ಪೂಜ್ಯ ಸ್ವಸ್ತಿಶ್ರೀ ಭಟ್ಟಾರಕ ಸ್ವಾಮೀಜಿ ಅವರು. ಬಾಹುಬಲಿಗೆ ಪ್ರತಿ 12 ವರ್ಷಕ್ಕೊಮ್ಮೆ ನಡೆಯುವ ಮಹಾಮಸ್ತಕಾಭಿಷೇಕಕ್ಕೆ ಆಧುನಿಕತೆಯ ಸ್ಪರ್ಶ ಕೊಟ್ಟವರು. ಪೂಜ್ಯರು 2018ರಲ್ಲಿ ನಡೆದ ಮಹಮಸ್ತಕಾಭಿಷೇಕದಲ್ಲಿ ನಮ್ಮ ಸ್ಕೌಟ್ಸ್–ಗೈಡ್ಸ್, ರೇಂಜರ್ಸ್–ರೋವರ್ಸ್‌ಗಳಿಗೆ ಸೇವೆ ಮಾಡುವ ಅವಕಾಶ ನೀಡಿ, ಆ ಮೂಲಕ ವಿಶ್ವದಾದ್ಯಂತ ಕರ್ನಾಟಕ ರಾಜ್ಯ ಸ್ಕೌಟ್ಸ್ ಗೈಡ್ಸ್ ಹೆಸರು ಮೇಳೈಸಲು ಕಾರಣರಾದವರು. ಸ್ವಾಮೀಜಿಯವರು ಇತ್ತೀಚಿಗೆ ವಿಧಿವಶರಾಗಿದ್ದಾರೆ. ಭಾರತ್ ಸ್ಕೌಟ್ಸ್–ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯು ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತಾ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇವೆ.

ಸ್ಕೌಟ್ ಮತ್ತು ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

"ಉಳಿದ ಅಹಾರವನ್ನು ಎಸೆಯುವ ಬದಲು ಹಸಿದವರಿಗೆ ವಿತರಿಸಿ
ವ್ಯರ್ಥವಾಗುವ ಅನ್ನ ಹಸಿದವರಿಗದೇ ಚಿನ್ನ"

# ಹುಟ್ಟು-ಸಾವು

ನಾಡೋಜ ಡಾ. ಗೊ.ರು. ಚನ್ನಬಸಪ್ಪ
ಗೌರವಾಧ್ಯಕ್ಷರು, ಪ್ರಕಟಣೆಗಳ ಸಮಿತಿ
ಭಾರತ್ ಸ್ಕೌಟ್ಸ್-ಗೈಡ್ಸ್, ಕರ್ನಾಟಕ

ಒಂದು ಸ್ವಾರಸ್ಯದ ಪ್ರಸಂಗ: ಓರ್ವ ತಾಯಿ ತನ್ನ ಎಂಟು ವರ್ಷದ ಮಗನನ್ನು ಕುರಿತು ಒಂದು ಪ್ರಶ್ನೆ ಕೇಳುತ್ತಾಳೆ. ಆ ಪ್ರಶ್ನೆ ಕೇಳುವಾಗ ಅಕ್ಕ ಪಕ್ಕದ ಮನೆಯ ತಾಯಂದಿರೂ ಇರುತ್ತಾರೆ. ತನ್ನ ಮಗನಿಗೆ ಶಾಲೆಯೆಂದರೆ ಬಹಳ ಇಷ್ಟ ಎನ್ನುವುದನ್ನು ಆ ಅಕ್ಕ-ಪಕ್ಕದವರಿಗೆ ತಿಳಿಸಿ ಅಭಿಮಾನ ಪಡಬೇಕೆಂಬ ಆಸೆ ಅವಳದು. ಮಗನ ಬೆನ್ನ ಮೇಲೆ ಕೈಯಿಟ್ಟು ಮುದ್ದು ಮಾಡಿ, 'ಮಗೂ, ನಿನಗೆ ಶಾಲೆಗೆ ಹೋಗಿ ಬರುವುದೆಂದರೆ ಬಲು ಇಷ್ಟವಲ್ಲವೆ?' ಎಂದು ಕೇಳುತ್ತಾಳೆ. ಅವನಿಂದ 'ಹೌದು' ಎಂಬ ಉತ್ತರ ಬರಲಿ ಎಂಬುದು ಅವಳ ನಿರೀಕ್ಷೆಯಾಗಿರುತ್ತದೆ. ಆದರೆ ಅವನು 'ಹೋಗಿ ಬರುವುದೇನೋ ಇಷ್ಟ. ಆದರೆ ಅಲ್ಲಿ ಇರುವುದೇ ಕಷ್ಟ' ಎಂದು ಬಿಡುತ್ತಾನೆ. ಅಲ್ಲಿದ್ದವರೆಲ್ಲ ನಕ್ಕು ಬಿಡುತ್ತಾರೆ. ತನ್ನ ಮಗನಿಗೆ ಓದಿನಲ್ಲಿ ಆಸಕ್ತಿ ಹೆಚ್ಚು ಎಂದು ನೆರೆಯವರಿಗೆ ತೋರಿಸಬೇಕೆಂದಿದ್ದ ಅವಳ ಆಸೆ ಮುರುಟಿಹೋಗಿ ಬಿಡುತ್ತದೆ.

ನಮ್ಮ ಬದುಕೂ ಹೀಗೆಯೇ. ನಾವೂ ಈ ಲೋಕಕ್ಕೆ ಬಂದು ಹೋಗುತ್ತೇವೆ. ಆ ಎರಡೂ ನಮ್ಮ ಕೈಯಲ್ಲಿಲ್ಲ. ಆದರೆ ನಮ್ಮ ಕಷ್ಟವಿರುವುದು ಈ ಬಂದು ಹೋಗುವ ಮಧ್ಯದ ಬದುಕಿನಲ್ಲಿ. ನಾವು ಬಯಸಿ ಬಂದಿಲ್ಲ. ನಮ್ಮನ್ನು ಯಾರು ಏಕೆ ಇಲ್ಲಿಗೆ ಕಳುಹಿಸಿದರೋ ತಿಳಿಯದು. ಆದರೆ ಹೆತ್ತವರಷ್ಟು ಗೊತ್ತು. ನಾವು ಬಯಸಿ ಬಾರದಿದ್ದರೂ ಇಲ್ಲಿಗೆ ಬಂದ ಮೇಲೆ ನಮ್ಮ ಬಯಕೆಗಳು ಆರಂಭವಾಗುತ್ತವೆ. ಆ ಬಯಕೆಗಳೋ ಒಂದೆರಡಲ್ಲ. ಸಾವಿರ ಸಾವಿರ. ಒಂದು ಕೈಗೂಡಿದರೆ ಮತ್ತೊಂದರ ಬಯಕೆ. ಆ ಬಯಕೆ ಅಥವಾ ಆಸೆಗಳ ಈಡೇರಿಕೆಗಾಗಿ ನಾವು ಏನೆಲ್ಲ ಪ್ರಯತ್ನ ಮಾಡುತ್ತೇವೆ. ನಮ್ಮ ಗುರಿಯೆಲ್ಲ ಆಸೆಯ ಪೂರೈಕೆ. ನಮ್ಮ ಆಸೆಯ ಪೂರೈಕೆಯ ಸಾಹಸದಲ್ಲಿ ಯಾರಿಗೆ ಸಂಕಷ್ಟವೊದಗಿದರೂ ನಮಗೆ ಅದರ ಪರಿವೆ ಇರುವುದಿಲ್ಲ. ನಮ್ಮ ಆಸೆ ಕೈಗೂಡಿದರಾಯಿತು.

ಆಸೆಯ ಹುಟ್ಟು ಎಂತಹುದೆಂದರೆ ಅದು ಕೈಗೂಡಿದಂತೆಲ್ಲ ಹೊಸ ಹೊಸ ಆಸೆ ಹುಟ್ಟಿಸುತ್ತದೆ. ಕೊನೆಗೆ ಅದೇ ಒಂದು ಚಿಂತೆಯಾಗಿ ಕಾಡುತ್ತದೆ. ಹೀಗೆ ಬದುಕಿನುದ್ದಕ್ಕೂ ಬಯಕೆಯ ಈಡೇರಿಕೆಗಾಗಿ ನಮ್ಮ ಹೋರಾಟ ನಡೆಯುತ್ತದೆ. ಸಮಾಧಾನವೆನ್ನುವುದು ಅಲ್ಲಿ ಸುಳಿಯಲೂ ಅವಕಾಶವಿಲ್ಲ. ಹಾಗಾಗಿ ಅಸಹನೆ, ಅಸಂತೃಪ್ತಿ, ಅಸಮಾಧಾನಗಳ ಜೇಡನ ಬಲೆಯಲ್ಲಿ ಸಿಕ್ಕಿಕೊಳ್ಳುತ್ತೇವೆ. ವಿಲಿವಿಲಿ ಒದ್ದಾಡುತ್ತೇವೆ. ಈ ಒದ್ದಾಟ ನಡೆಯುತ್ತಿರುವಂತೆಯೇ ನಾವು ಹೋಗುವ ಕಾಲ ಹತ್ತಿರವಾಗುತ್ತದೆ. ಇಟ್ಟುಕೊಂಡ ಆಸೆ ಈಡೇರದೆ, ಈಡೇರಿದರೂ ಅದನ್ನು ಅನುಭವಿಸುವ ಶಕ್ತಿ ಇಲ್ಲದೆ ಪರಿತಪಿಸುತ್ತೇವೆ.

ಆಸೆಯ ಈಡೇರಿಕೆಗಾಗಿ ಹೋರಾಡುವ ಭರದಲ್ಲಿ ಬಂದುದೂ ನೆನಪಿರುವುದಿಲ್ಲ; ಹೋಗಲೂ ಮನಸ್ಸಿರುವುದಿಲ್ಲ. ಆದರೆ ಮೈಮನಗಳು ಬಳಲಿ ಶಕ್ತಿ ಕುಂದಿದಾಗ ಹೋಗಬೇಕೆಂಬ ಬಯಕೆ ಕಾಣಿಸಿಕೊಳ್ಳುತ್ತದೆ. ಬದುಕಿದ್ದಾಗಿನ ಬಯಕೆಗಳೇ ಬೇರೆ. ಆದರೆ ಇದು ಬದುಕಿನಿಂದ ಬಿಡುಗಡೆಯಾಗುವ ಬಯಕೆ.

ಪರ್ಷಿಯಾದ ಕವಿ ಹಾದಿ ಹೇಳುವಂತೆ 'ನಾವು ಈ ಜಗತ್ತಿಗೆ ಬರುವಾಗ ಅಳುತ್ತಾ ಬರುತ್ತೇವೆ. ಜಗತ್ತೆಲ್ಲ ನಗುತ್ತಿರುತ್ತದೆ'. ಅಂತೆಯೇ ನಾವು ಈ ಜಗತ್ತನ್ನು ಬಿಟ್ಟು ಹೋಗುವಾಗ ನಗುತ್ತ ಹೋಗಬೇಕು. ಜಗತ್ತು ಅಳುತ್ತಿರಬೇಕು.' ಹಾಗೆ ಆಗಬೇಕಾದರೆ ಈ ಬಂದು ಹೋಗುವ ಮಧ್ಯದಲ್ಲಿರುವ ಬದುಕು ಬಂಧುರವಾಗಿರಬೇಕು. ಶಾಲೆಗೆ ಬಂದು ಹೋಗುವುದು ಹೇಗೆ ಇಷ್ಟವೋ, ಶಾಲೆಯಲ್ಲಿರುವುದೂ ಇಷ್ಟವಾಗಬೇಕು; ಅದು ಕಷ್ಟವಾಗಬಾರದು. ಹಾಗೆಯೇ ನಮಗೂ ಈ ಬದುಕು ಇಷ್ಟವಾಗಬೇಕು. ಹಾಗೆ ಬದುಕು ಇಷ್ಟವಾಗುವುದು ಯಾವಾಗ? ಅದರ ಅವಧಿ ಸದ್ವಿನಿಯೋಗವಾದಾಗ. ಅದು ಉದ್ದಕ್ಕೂ ಸ್ವಂತದ ಚಿಂತೆಯಲ್ಲಿದ್ದರೆ ಸಾಲದು. ಇತರರ ನೋವು ನಲಿವುಗಳಲ್ಲೂ ಅದು ಪಾಲುಗೊಳ್ಳಬೇಕು; ಸಹಭಾಗಿಯಾಗಬೇಕು. ಸುತ್ತಣ ಸಮುದಾಯದೊಂದಿಗೆ ಬೆರೆಯದ ಬದುಕು ಅರ್ಥಹೀನ; ವ್ಯರ್ಥ.

ಸ್ವಾರ್ಥ ಸಾಧನೆಯಿಂದ ಇತರರ ಹಿತ ಬಲಿಯಾಗುತ್ತದೆ. ಸ್ವಹಿತದ ಸಾಧನೆಯಾದರೂ ಯಾವುದೇ ಅಪರಾಧ ಪ್ರಜ್ಞೆ ಸ್ವಾರ್ಥಿಯನ್ನು ಬಾಧಿಸುತ್ತಲೇ ಇರುತ್ತದೆ. ಅದನ್ನು ಅವನು ತೋರಗೊಡದಿರಬಹುದು. ಆದರೆ ಅಂತರಂಗದಲ್ಲಿ ಚಿಂತೆಯ ಬೆಂಕಿ ಉರಿಯುತ್ತಲೇ ಇರುತ್ತದೆ. ಇನ್ನು ಆ ಉರಿಯಲ್ಲಿ ಅವನಿಗೆ ಸಮಾಧಾನವಿರುವುದಾದರೂ ಹೇಗೆ?

ಬದುಕಿನಲ್ಲಿ ನೆಮ್ಮದಿ ಇರಬೇಕೆಂದರೆ ಲೋಕಹಿತದ ಕಾರ್ಯದಲ್ಲಿ ನಾವು ತೊಡಗಿಸಿಕೊಳ್ಳಬೇಕು. ನಾವು ಬದುಕಬೇಕು; ಇತರರೂ ಬದುಕಲು ನೆರವಾಗಬೇಕು. ನಂತರ ಅಂತ್ಯದ ಕರೆ ಬಂದಾಗ ನೆಮ್ಮದಿಯಿಂದ ನಿರ್ಗಮಿಸಬೇಕು. ಹೆಚ್ಚೇನು, ಸಾರ್ಥಕ ಬದುಕು ನಡೆಸಿದವರು ಆ ಕರೆಗಾಗಿ ಕಾಯುತ್ತ ನಿಂತಿರುತ್ತಾರೆ.

# ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ

## ಜೈನ ಮಠ, ಶ್ರವಣಬೆಳಗೊಳ



ಶ್ರವಣಬೆಳಗೊಳದ ಜೈನ ಮಠದ ಶ್ರೀ ಚಾರುಕೀರ್ತಿ ಭಾಟ್ಟಾರಕ ಸ್ವಾಮೀಜಿರವರು ಮಾರ್ಚ್ 22 ರಂದು ವಿಧಿವಶರಾಗಿದ್ದಾರೆ. ಅವರ ಶಿಕ್ಷಣ ಕೇವಲ ಜೈನ ಧರ್ಮಶಾಸ್ತ್ರಕ್ಕೆ ಸೀಮಿತವಾಗಿರದೆ, ಇತಿಹಾಸ ತಜ್ಞರು. ತತ್ವಜ್ಞಾನಿಗಳು. ಶ್ರೇಷ್ಠ ವಾಗ್ಮಿಗಳೂ ಆಗಿದ್ದರು. ಪೀಠದಲ್ಲಿ ಇದ್ದುಕೊಂಡೇ ಮಠದ ಸಮಸ್ತ ಕಾರ್ಯನಿರ್ವಹಣೆಯೊಂದಿಗೆ ಸಂಶೋಧನೆ, ಗ್ರಂಥ ರಚನೆಯಲ್ಲಿ ಕ್ರಿಯಾಶೀಲರಾಗಿದ್ದರು. 1970ರಲ್ಲಿ ಶ್ರವಣಬೆಳಗೊಳ ಮಠದ ಪೀಠಾಧಿಪತಿಯಾದ ಸ್ವಾಮೀಜಿ, 1981ರಲ್ಲಿ ಗೊಮ್ಮಟೇಶ್ವರನ ಸಹಸ್ರಾಬ್ದಿ ಮಹಾಮಸ್ತಕಾಭಿಷೇಕವನ್ನು ಯಶಸ್ವಿಯಾಗಿ ನೆರವೇರಿಸಿದ್ದಕ್ಕಾಗಿ, ಅಂದಿನ ಪ್ರದಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ರವರು ಶ್ರೀಗಳಿಗೆ 'ಕರ್ಮಯೋಗಿ' ಎಂಬ ಬಿರುದು ನೀಡಿ ಗೌರವಿಸಿದರು. 7 ಮಹಾಮಸ್ತಾಬಿಷೇಕಗಳನ್ನು ಅವಿಸ್ಮರಣೀಯಗೊಳಿಸಿರುವ ಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ. ಆರೋಗ್ಯ ಮತ್ತು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದ ಸ್ವಾಮೀಜಿರವರು ಶ್ರವಣಬೆಳಗೊಳದ ಸುತ್ತಮುತ್ತಲಿನ ಗ್ರಾಮಗಳನ್ನು ದತ್ತು ಸ್ವೀಕರಿಸಿ, ಪ್ರಾಥಮಿಕ ಸೌಲಭ್ಯಗಳನ್ನು ಕಲ್ಪಿಸಿರುತ್ತಾರೆ.

ಸ್ಕೌಟ್ಸ್-ಗೈಡ್ಸ್ ಚಳುವಳಿಯನ್ನು ಅಪಾರವಾಗಿ ಮೆಚ್ಚುಕೊಂಡಿದ್ದ ಶ್ರೀಗಳು, 2018ರಲ್ಲಿ ನಡೆದ ಮಹಮಸ್ತಕಾಭಿಷೇಕದಲ್ಲಿ ರಾಜ್ಯದ ಸ್ಕೌಟ್ಸ್-ಗೈಡ್ಸ್, ರೇಂಜರ್ಸ್-ರೋವರ್ಸ್‌ಗಳಿಗೆ ಸೇವೆ ಮಾಡುವ ಅವಕಾಶ ನೀಡುವ ಮೂಲಕ ವಿಶ್ವದಾದ್ಯಂತ ಕರ್ನಾಟಕ ರಾಜ್ಯ ಸ್ಕೌಟ್ಸ್-ಗೈಡ್ಸ್ ಹೆಸರು ಮೇಳೈಸಲು ಕಾರಣರಾಗಿದ್ದಾರೆ.

ಪೂಜ್ಯರ ಅಗಲಿಕೆ ನಾಡಿಗೆ ತುಂಬಲಾರದ ನಷ್ಟವಾಗಿದ್ದು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯು ಪೂಜ್ಯರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

– ರಾಜ್ಯ ಕಾರ್ಯದರ್ಶಿ

ಅಭಿನಂದನೆಗಳು



ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ಶ್ರೀ ವಿವೇಕಾನಂದ ಪದವಿ ಕಾಲೇಜಿನ ರೇಂಜರ್ **ಕುಮಾರಿ ಶ್ರಮ್ಯ ರೈ** ಅವರ ತಾಯಿ ಕೆಯ್ಯೂರು ಗ್ರಾಮ ಪಂಚಾಯಿತಿ ಸದಸ್ಯೆ ಶ್ರೀಮತಿ ಮಮತ ರೈ ಅವರಿಗೆ ತಮ್ಮ ತೋಟದಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಆಕಸ್ಮಿಕವಾಗಿ ಹಾವೊಂದು ಕಚ್ಚಿತು. ಈ ವೇಳೆ ಸಮಯ ಪ್ರಜ್ಞೆಯಿಂದ **ಕು॥ ಶ್ರಮ್ಯರೈ** ಘಟನಾ ಸ್ಥಳಕ್ಕೆ ಧಾವಿಸಿ ಹಾವಿನ ವಿಷವನ್ನು ತನ್ನ ಬಾಯಿಯಿಂದ ಕಚ್ಚಿ ತೆಗೆದು ತಮ್ಮ ತಾಯಿಯನ್ನು ಪ್ರಾಣಾಪಾಯದಿಂದ ರಕ್ಷಿಸಿದ್ದಾರೆ. ನಂತರ ಕೂಡಲೇ ಸ್ಥಳೀಯ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡಲಾಗಿದೆ. ಇವರ ಧೈರ್ಯವನ್ನು ಮೆಚ್ಚಿ ಸ್ಥಳೀಯರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಇವರಿಗೆ ಭಾರತ್ ಸ್ಕೌಟ್ಸ್-ಗೈಡ್ಸ್ ರಾಜ್ಯ ಸಂಸ್ಥೆಯಿಂದ ತುಂಬು ಹೃದಯದ ಅಭಿನಂದನೆಗಳು.

– ರಾಜ್ಯ ಕಾರ್ಯದರ್ಶಿ

# ಈಶಾ ಫೌಂಡೇಶನ್‌ನಲ್ಲಿ ರೋವರ್ಸ್-ರೇಂಜರ್ಸ್‌ಗಳಿಂದ "ಸೇವಾ ಶಿಬಿರ"

ಫೆಬ್ರವರಿ 18 ಮತ್ತು 19ರಂದು ಚಿಕ್ಕಬಳ್ಳಾಪುರ ಜಿಲ್ಲೆಯ "ಈಶಾ ಫೌಂಡೇಶನ್"ನಲ್ಲಿ ಮಹಾ ಶಿವರಾತ್ರಿ ಪ್ರಯುಕ್ತ ಏರ್ಪಡಿಸಿದ್ದ ಸೇವಾ ಶಿಬಿರವನ್ನು ರಾಜ್ಯ ಸಂಸ್ಥೆಯಿಂದ ನಡೆಸಲಾಯಿತು.

ನಿರಂತರ 48 ಗಂಟೆಗಳ ಸೇವೆಯನ್ನು ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಸುಮಾರು 2 ಲಕ್ಷ ಭಕ್ತಾದಿಗಳು ಭಾಗವಹಿಸಿದ್ದು. ಎಲ್ಲಾ ಕಡೆಯಲ್ಲಿ ನಮ್ಮ ರೋವರ್ಸ್-ರೇಂಜರ್ಸ್‌ಗಳು ಸೇವೆಸಲ್ಲಿಸಿ ಎಲ್ಲರ ಪ್ರಶಂಸೆಗೆ ಕಾರಣರಾದರು.

ಬೆಂಗಳೂರು ಉತ್ತರ ಜಿಲ್ಲೆಯ ಎ.ಎಸ್.ಓ.ಸಿ. ಶ್ರೀ ನಿತಿನ್ ಅಮೀನ್, ಸೇವಾ ಶಿಬಿರದ ಮುಂದಾಳತ್ವ ವಹಿಸಿದ್ದರು. ಸಹನಾಯಕರಾಗಿ ಬೆಂಗಳೂರು ದಕ್ಷಿಣ ಜಿಲ್ಲೆಯ ಎ.ಎಸ್.ಓ.ಸಿ. ಶ್ರೀ ಪಿ. ಚಂದ್ರು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಸ್.ಜಿ.ವಿ. ಶ್ರೀ ಅರುಣ್ ಕುಮಾರ್, ಕೋಲಾರ ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ್, ಚಿಕ್ಕಬಳ್ಳಾಪುರ ಜಿಲ್ಲೆಯ ಎಸ್.ಜಿ.ವಿ. ಶ್ರೀ ಮೊಹಮ್ಮದ್ ನೌಫಲ್ ಹಾಗೂ ಇತರ ರೋವರ್ ಸ್ಕೌಟ್ ಲೀಡರ್ಸ್, ರೇಂಜರ್ ಲೀಡರ್ಸ್‌ಗಳು ಸಹಕರಿಸಿದರು. ಬೆಂಗಳೂರು ಉತ್ತರ ಜಿಲ್ಲೆ-120, ಬೆಂಗಳೂರು ದಕ್ಷಿಣ ಜಿಲ್ಲೆ-70, ಬೆಂಗಳೂರು ಗ್ರಾಮಾಂತರ-30, ಕೋಲಾರ-35, ಚಿಕ್ಕಬಳ್ಳಾಪುರ-40, ಒಟ್ಟು 300 ರೋವರ್ಸ್-ರೇಂಜರ್ಸ್ ಸೇವೆ ಸಲ್ಲಿಸಿದರು.



# 104ನೇ ರಾಜ್ಯ ಪರಿಷತ್ ಸಭೆ




ಮಾರ್ಚ್ 12 ರಂದು ಬೆಳಗ್ಗೆ 11.30ಕ್ಕೆ ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ 104ನೇ ರಾಜ್ಯ ಪರಿಷತ್ ಸಭೆಯು ಹಿರಿಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಭೆಯು ಸ್ಕೌಟ್-ಗೈಡ್ ಪ್ರಾರ್ಥನೆ, ನಾಡಗೀತೆಯುನ್ನು ಹಾಡುವುದರ ಮೂಲಕ ಅಧಿಕೃತವಾಗಿ ಪ್ರಾರಂಭವಾಯಿತು. ಶ್ರೀ ಬಿ.ಕೆ. ಬಸವರಾಜ, ರಾಜ್ಯ ಜಂಟಿ ಕಾರ್ಯದರ್ಶಿಗಳು (ಸ್ಕೌಟ್ಸ್) ಇವರು ಎಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಮಹಾಸಭೆಯನ್ನು ಉದ್ಘಾಟಿಸಿದ ಸಾಹಿತಿ ಹಾಗೂ ಭಾರತ್ ಸ್ಕೌಟ್ಸ್-ಗೈಡ್ಸ್‌ನ ಪ್ರಕಟಣಾ ಸಮಿತಿ ಅಧ್ಯಕ್ಷರಾದ ನಾಡೋಜ ಡಾ. ಗೊ.ರು. ಚನ್ನಬಸಪ್ಪರವರು ಮಾತನಾಡಿ, "ಜೀವನದಲ್ಲಿ ಶಿಸ್ತು ಸಂಯಮ ರೂಢಿಸಿಕೊಳ್ಳುವಲ್ಲಿ ಸ್ಕೌಟ್ಸ್-ಗೈಡ್ಸ್‌ನ ಪಾತ್ರ ಮಹತ್ವದ್ದಾಗಿದ್ದು, ಸ್ಕೌಟ್ಸ್-ಗೈಡ್ಸ್ ಮಹತ್ತರವಾದ ಚಳವಳಿಯಾಗಿ ರೂಪುಗೊಳ್ಳಬೇಕಿದೆ. ಸ್ಕೌಟ್ಸ್-ಗೈಡ್ಸ್‌ನ ಮಹಾಸಭೆಯಲ್ಲಿ ಮಂಡಿಸುವ ವರದಿ, ವಾರ್ಷಿಕ ಲೆಕ್ಕಪತ್ರಗಳು ಪಾರದರ್ಶಕವಾಗಿದ್ದು, ಅತ್ಯಂತ ಪ್ರಾಮಾಣಿಕ ಸಂಸ್ಥೆಯಾಗಿದೆ. ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳ ಘಟಕಗಳ ಅಸ್ತಿತ್ವಗಳ ಕುರಿತಂತೆ ವಿವರಿಸಿ, 50 ವರ್ಷಗಳ ಸ್ಕೌಟ್ಸ್-ಗೈಡ್ಸ್‌ನ ತಮ್ಮ ಒಡನಾಟವನ್ನು ಸ್ಮರಿಸಿ, ಸಂಘಟನೆಯ ವಿವಿಧ ಹಂತದ ಪದಾಧಿಕಾರಿಗಳು ತಮ್ಮ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ಸಂಘಟನೆಯ ಬಲವರ್ಧನೆಗೆ ಶ್ರಮಿಸಬೇಕಿದೆ ಎಂದರು.

ಅವರು 50 ವರ್ಷಗಳ ಹಿಂದೆ ತಾನೇ ಬರೆದ ಕವನವನ್ನು ವಾಚನ ಮಾಡುವ ಮೂಲಕ ಮಾತನಾಡಿ, ಜಾಗತಿಕ ಮಹಾ ಸಂಸ್ಥೆಯೂ ಭಾರತ್ ಸ್ಕೌಟ್-ಗೈಡ್ಸ್‌ನ ಚಳುವಳಿಯ ಅಂಗವಾದ ಕರ್ನಾಟಕ ಶಾಖೆಯ ಸದಸ್ಯರೆಲ್ಲ ವರ್ಷಕ್ಕೊಮ್ಮೆ ಸಮಾವೇಶಗೊಂಡು ಹಿಂದಿನ ವರ್ಷದಲ್ಲಿ ನಡೆದಂತಹ ದಾರಿಯ ದೂರವನ್ನು ಅಳೆದು ನೋಡಿ, ಆಕಸ್ಮಿಕವಾಗಿ ಸಂಭವಿಸಿರಬಹುದಾದ ಲೋಪದೋಷಗಳನ್ನು ಸರಿಪಡಿಸಿಕೊಂಡು ಮುಂದಿನ ವರ್ಷದ ಹೆಜ್ಜೆ ಇಡುವ ಸಂಕಲ್ಪದ ಸಂದರ್ಭ ಈ 104ನೇ ರಾಜ್ಯ ಪರಿಷತ್ ಮಹಾಸಭೆ ಎಂದರು.

ಈ ಮಹಾಸಭೆಯ ಮುಖ್ಯ ಕೆಲಸವೆಂದರೆ ಸಂಸ್ಥೆಯ ವಾರ್ಷಿಕ ಪ್ರಗತಿ ಮತ್ತು ಪರಿಶೋಧಿತ ಲೆಕ್ಕಪತ್ರಗಳನ್ನು ಅಂಗೀಕಾರ ಅನೇಕ ಸಂಘ ಸಂಸ್ಥೆಗಳಿಗಿಂತ ಕರ್ನಾಟಕ ಸ್ಕೌಟ್ಸ್-ಗೈಡ್ಸ್ ಸಂಸ್ಥೆಯು ತನ್ನ ವಾರ್ಷಿಕ ಮಹಾಸಭೆಯ ಮುಂದೆ ಮಂಡಿಸುವ ವರದಿಯಷ್ಟು ವಿಸ್ತೃತವಾದ, ಸಮಗ್ರವಾದ ವರದಿಯನ್ನು ಬೇರೆ ಯಾವ ಸಂಸ್ಥೆಯಲ್ಲೂ ನಾನು ಕಂಡಿಲ್ಲ ಎಂದರು. ಒಂದು ಪ್ರಾತಿನಿಧಿಕ ಸಂಸ್ಥೆಯ ವಾರ್ಷಿಕ ವರದಿ ಎಷ್ಟು ಪರಿಪೂರ್ಣವಾಗಿ, ಪಾರದರ್ಶಕವಾಗಿ ಇರಬೇಕೆಂಬುದಕ್ಕೆ ನಿಮ್ಮ ಕೈ ಸೇರಿರುವ ವರದಿ ಸಾಕ್ಷಿಯಾಗಿದ್ದು ಒಂದು ವೇಳೆ ಈ ವರದಿಯಲ್ಲಿ ಲೋಪ ದೋಷಗಳಿದ್ದರೆ ಈ ಮಹಾಸಭೆಯಲ್ಲಿ ಸರಿಪಡಿಸಲಿಕ್ಕೆ ಅವಕಾಶವಿದೆ ಎಂದು ಹೇಳಿದರು.

ಈ ವರದಿಯಲ್ಲಿ ಸಂಸ್ಥೆಯ ರಾಜ್ಯ ಮತ್ತು ಜಿಲ್ಲಾ ಪದಾಧಿಕಾರಿಗಳು, ಸಂಸ್ಥೆಯ ಪದಾಧಿಕಾರಿಗಳು, ಕಾರ್ಯ ಚಟುವಟಿಕೆಗಳ ಚಿತ್ರಗಳು, ತರಬೇತಿಗಳು, ಜಿಲ್ಲಾ ವರದಿಗಳು, ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೇಂಜರ್ಸ್-ರೋವರ್ಸ್‌ಗಳ ಸಂಖ್ಯೆಗಳು ಕಳೆದ ಸಭೆಯಲ್ಲಿ ಕೈಗೊಂಡ ವರದಿ,

23–24ನೇ ಸಾಲಿನ ಯೋಜಿತ ಕಾರ್ಯಕ್ರಮಗಳು ಸೇರಿದಂತೆ ಆಯಾ ವರ್ಷಗಳ ಸಂಪೂರ್ಣ ವರದಿಯನ್ನು ಈ ಮುದ್ರಿತ ಪುಸ್ತಕದಲ್ಲಿ ತಿಳಿಸಿರುವುದು ಉತ್ತಮ ಬೆಳವಣಿಗೆ ಎಚಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ ಅವರು 3ನೇ ಬಾರಿ ರಾಜ್ಯ ಮುಖ್ಯ ಆಯುಕ್ತರಾಗಿ ಅವಿರೋಧವಾಗಿ ಆಯ್ಕೆ ಆಗಿರುವುದಕ್ಕೆ ಎಲ್ಲರೂ ಎದ್ದು ನಿಂತು ಅಭಿನಂದಿಸಿದರು. ನಂತರ ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ, ರಾಜ್ಯ ಸಂಸ್ಥೆಯ ಸಮಗ್ರ ಅಭಿವೃದ್ಧಿಗೆ ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಸಂಸ್ಥೆಯ ಪದಾಧಿಕಾರಿಗಳ ಸಹಕಾರ ಬಹಳ ಅಗತ್ಯ, ಅದಕ್ಕಾಗಿ ಎಲ್ಲರೂ ಸೇರಿ 2023–24ನೇ ಸಾಲಿನ ಕಾರ್ಯಕ್ರಮ, ಚಟುವಟಿಕೆ ಮತ್ತು ತರಬೇತಿಗಳನ್ನು ಯೋಜಿಸಿ ಕರ್ನಾಟಕ ರಾಜ್ಯವನ್ನು ಉತ್ತಮವಾಗಿ ಬೆಳೆಸೋಣ ಎಂದು ಕೋರಿದರು.

ನಂತರ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು 104ನೇ ರಾಜ್ಯ ಪರಿಷತ್ ಸಭೆಯ ಕಾರ್ಯಸೂಚಿಯಂತೆ ಕ್ರಮವಾಗಿ ಎಲ್ಲ ವಿಷಯಗಳನ್ನು ಮಂಡಿಸಿ ಸಭೆಯ ಅನುಮೋದನೆಯನ್ನು ಪಡೆದರು. ಅದೇ ರೀತಿ ಶ್ರೀ ಪ್ರಭುದೇವ ಜೆ. ಚಿಗಟೇರಿ, ರಾಜ್ಯ ಕೋಶಾಧಿಕಾರಿಗಳು ಜಮಾ–ಖರ್ಚಿನ ವಿವರಗಳನ್ನು ಸಭೆಗೆ ವಿವರಿಸಿ ಸಭೆಯ ಅನುಮೋದನೆ ಪಡೆದರು. ಮಧ್ಯಾಹ್ನದ ಭೋಜನದ ನಂತರ, 2021–22ನೇ ಸಾಲಿನಲ್ಲಿ ಜಿಲ್ಲಾ ಸಂಸ್ಥೆಗಳ ಸಮಗ್ರ ಅಭಿವೃದ್ಧಿಯನ್ನು ಮನಗಂಡು ಪ್ರಶಸ್ತಿ ಪತ್ರಗಳನ್ನು ಹಾಗೂ ಪರ್ಯಾಯ ಫಲಕಗಳನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರು ವಿತರಿಸಿದರು.

2022–27 ರವರೆಗೆ ರಾಜ್ಯ ಸಂಸ್ಥೆಯ ಪದಾಧಿಕಾರಿಗಳಾಗಿ ಆಯ್ಕೆ ಆಗಿರುವ ಹಾಗೂ ಚುನಾಯಿತ ಪ್ರತಿನಿಧಿಗಳ ಹೆಸರು ಮತ್ತು ಅವರುಗಳ ವಿವರಗಳನ್ನು ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಪ್ರಕಟಿಸಿದರು. ರಾಜ್ಯ ಸಂಸ್ಥೆ ಹಾಗೂ ಕಾರ್ಯಕಾರಿ ಸಮಿತಿಗೆ ಆಯ್ಕೆ ಆಗಿರುವವರನ್ನು ಅಭಿನಂದಿಸಿ ಅವರುಗಳಿಗೆ ರಾಜ್ಯ ಮುಖ್ಯ ಆಯುಕ್ತರು ಗೌರವ ಸಮರ್ಪಣೆಯನ್ನು ಮಾಡಿ ಎಲ್ಲರೂ ಸೇರಿ ಸಂಸ್ಥೆಯ ಸಮಗ್ರ ಅಭಿವೃದ್ಧಿಗೆ ಶ್ರಮಿಸೋಣ ಎಂದು ತಿಳಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಶ್ರೀ ಪಿ. ವಿಶ್ವನಾಥ್, ಶ್ರೀ ಕೆ.ವಿ. ಶಂಕರಪ್ಪ, ಶ್ರೀ ಎಂ.ಎಂ. ಲೋಂಡೆ, ಶ್ರೀ ಹೆಚ್.ಡಿ. ರಮೇಶ್‌ಶಾಸ್ತ್ರಿ, ಶ್ರೀ ಮುರಘರಾಜೇಂದ್ರ ಜೆ. ಚಿಗಟೇರಿ, ಶ್ರೀ ಎಂ.ಎನ್. ಷಡಕ್ಷರಿ, ಶ್ರೀಮತಿ ಸರೋಜ.ಪಿ, ಶ್ರೀಮತಿ ಮೈಥಿಲಿ ರಾವ್, ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್) ಇವರು ಮಾತನಾಡಿ ಸ್ಕೌಟಿಂಗ್ ಗುಣಾತ್ಮಕವಾಗಿ ಅಭಿವೃದ್ಧಿ ಪಡಿಸಲು ಎಲ್ಲಾ ಹಂತದಲ್ಲಿ ಶಿಸ್ತನ್ನು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ ಕರ್ನಾಟಕದಲ್ಲಿ ಚಳುವಳಿಯು ಉತ್ತಮವಾಗಿ ಮುಂದುವರೆದಿದ್ದರೂ, ನಾವು ಇನ್ನೂ ತಲುಪದ ಹಲವಾರು ಶಾಲಾ/ಕಾಲೇಜುಗಳನ್ನು ಭೇಟಿ ಮಾಡಿ ಎಲ್ಲಾ ಕಡೆ ದಳಗಳನ್ನು ತೆರೆಯಬೇಕು, ಅದಕ್ಕಾಗಿ ಕಾರ್ಯದರ್ಶಿಗಳು, ಆಯುಕ್ತರುಗಳು, ಜಿಲ್ಲಾ ಮುಖ್ಯ ಆಯುಕ್ತರುಗಳು, ಸಂಘಟಕರುಗಳು ಹಾಗೂ ದಳ ನಾಯಕರುಗಳು ಎಲ್ಲರೂ ಸೇರಿ ಸಂಸ್ಥೆಯ ಬೆಳವಣಿಗೆಗಾಗಿ ಹೆಚ್ಚಿನ ಸಮಯವನ್ನು ನೀಡುವಂತೆ ವಿನಂತಿಸಿದರು. ಮುಂದಿನ 5 ವರ್ಷಗಳಲ್ಲಿ ಕರ್ನಾಟಕದ ಸ್ಕೌಟಿಂಗ್–ಗೈಡಿಂಗ್ ಸಮಗ್ರವಾಗಿ ಬೆಳೆದು ದೇಶಕ್ಕೆ ಮಾದರಿ ರಾಜ್ಯವನ್ನಾಗಿಸಲು ಇಂದಿನಿಂದಲೇ ಕೆಲಸ ಪ್ರಾರಂಭಿಸೋಣ ಎಂದು ತಿಳಿಸಿದರು.




ರಾಷ್ಟ್ರೀಯ ಶಿಕ್ಷಣ ನೀತಿಗೆ ಪೂರಕವಾಗಿ, ಭಾರತ್ ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳಲ್ಲಿ, ಬದಲಾವಣೆ ತರಲಾಗುತ್ತಿದೆ ಎಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ತಿಳಿಸಿದರು. ಪ್ರಾಯೋಗಿಕ ಶಿಕ್ಷಣಕ್ಕೆ ಒತ್ತು ನೀಡಿ, ಅದಕ್ಕೆ ಪೂರಕವಾಗಿ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತಿದೆ ಎಂದು ಹೇಳಿದರು.

ಸ್ಕೌಟ್ಸ್–ಗೈಡ್ಸ್‌ನಲ್ಲಿ ಶಿಸ್ತು ಮತ್ತು ಸಮಯ ಪ್ರಜ್ಞೆಗೆ ಹೆಚ್ಚು ಒತ್ತು ಕೊಡಬೇಕು. ನಮ್ಮಲ್ಲಿ ನಾವು ಪರಿವರ್ತನೆಗೊಳ್ಳದಿದ್ದರೆ ಯಶಸ್ಸು ಸಿಗುವುದು ದುರ್ಲಭವಾಗುತ್ತದೆ. ರಾಷ್ಟ್ರ ಪ್ರೇಮ, ಶಿಸ್ತು ಸಮಾಜಮುಖಿ ಕೆಲಸಗಳು ಮೊದಲಾದ ಸ್ಕೌಟ್ಸ್–ಗೈಡ್ಸ್‌ನ ಮೂಲ ಆಶಯಗಳನ್ನು ಉಳಿಸಿಕೊಂಡು ಇಂದಿನ ಶಿಕ್ಷಣ ನೀತಿಗೆ ಪೂರಕವಾಗಿ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲಾಗುತ್ತಿದ್ದು, ಸ್ಕೌಟ್ಸ್–ಗೈಡ್ಸ್‌ನ ಸ್ವಯಂ ಸೇವಕರುಗಳ ಪಾತ್ರ ಹೆಚ್ಚಾಗಿದೆ ಎಂದರು.





ಸಭೆಯ ಅಧ್ಯಕ್ಷತೆವಹಿಸಿದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ ಮಾತನಾಡಿ ಚುನಾಯಿತ ಪ್ರತಿನಿಧಿಗಳಿಗೆ ಅಭಿನಂದಿಸಿ, 104ನೇ ಸಭೆಯ ಯಶಸ್ವಿಯಾಗಿ ಜರುಗಿದೆ, ಮುಂದಿನ ಅವಧಿಗೆ ಎಲ್ಲರ ಸೇವೆಯು ಅಗತ್ಯವಿದ್ದು, ಉತ್ತಮವಾಗಿ ಸಂಸ್ಥೆಯನ್ನು ಬೆಳೆಸೋಣ ಎಂದು ಆಶಿಸಿದರು..

ವೇದಿಕೆಯಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಉಪಾಧ್ಯಕ್ಷರು ಹಾಗೂ ಸಭೆಯ ಅಧ್ಯಕ್ಷರು, ನಾಡೋಜ ಡಾ॥ ಗೊ.ರು. ಚನ್ನಬಸಪ್ಪ, ಅಧ್ಯಕ್ಷರು, ಪ್ರಕಟಣಾ ಸಮಿತಿ, ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್ಸ್), ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್ಸ್), ಶ್ರೀ ಚಿನ್ನಸ್ವಾಮಿರೆಡ್ಡಿ, ರಾಜ್ಯ ಆಯುಕ್ತರು (ವ.ಸಂ), ಶ್ರೀ ಪ್ರಭುದೇವ ಜೆ. ಚಿಗಟೇರಿ, ರಾಜ್ಯ ಕೋಶಾಧಿಕಾರಿ, ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ, ಶ್ರೀ ಬಿ.ಕೆ. ಬಸವರಾಜ, ರಾಜ್ಯ ಜಂಟಿ ಕಾರ್ಯದರ್ಶಿ (ಸ್ಕೌಟ್ಸ್), ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಜಂಟಿ ಕಾರ್ಯದರ್ಶಿ (ಗೈಡ್ಸ್) ರವರುಗಳು ಉಪಸ್ಥಿತರಿದ್ದರು ಹಾಗೂ ಸಭೆಯಲ್ಲಿ ರಾಜ್ಯದ ವಿವಿದ ಜಿಲ್ಲೆಗಳಿಂದ ಬಂದಿದ್ದ ಎಲ್ಲರೂ ಭಾಗವಹಿಸಿ ಯಶಸ್ವಿಗೊಳಿಸಿದರು.

**ನಂತರ 2021-22 ಸಾಲಿನಲ್ಲಿ ಉತ್ತಮ ಕಾರ್ಯನಿರ್ವಹಿಸಿದ ಜಿಲ್ಲೆಗಳಿಗೆ ಪರ್ಯಾಯ ಫಲಕ ಮತ್ತು ಪ್ರಶಸ್ತಿಗಳನ್ನು ನೀಡಲಾಯಿತು.**

## ರಾಜ್ಯ ಮಟ್ಟದ ಪ್ರಶಸ್ತಿಗಳು



ಪ್ರಥಮ ಸ್ಥಾನ - ಬೆಳಗಾವಿ
**ಅಬ್ದುಲ್ ಗಫಾರ್ ಪರ್ಯಾಯ ಫಲಕ**



ದ್ವಿತೀಯ ಸ್ಥಾನ - ದಕ್ಷಿಣ ಕನ್ನಡ
**ಜಸ್ಟೀಸ್ ಶಂಕರನಾರಾಯಣರಾವ್ ಪರ್ಯಾಯ ಫಲಕ**



ತೃತೀಯ ಸ್ಥಾನ - ಹಾಸನ
**ಮೇಜರ್ ವೈ.ವಿ.ಕೆ. ಮೂರ್ತಿ ಪರ್ಯಾಯ ಫಲಕ**

## ವಿಭಾಗ ಮಟ್ಟದ ಪರ್ಯಾಯ ಫಲಕ - ಪ್ರಶಸ್ತಿಗಳು

### ಬೆಂಗಳೂರು ವಿಭಾಗ



ಪ್ರಥಮ ಸ್ಥಾನ - ದಾವಣಗೆರೆ
**ವಿ.ಪಿ. ದೀನದಯಾಳು ನಾಯ್ಡು ಪರ್ಯಾಯ ಫಲಕ**



ದ್ವಿತೀಯ ಸ್ಥಾನ - ಶಿವಮೊಗ್ಗ



ತೃತೀಯ ಸ್ಥಾನ - ತುಮಕೂರು

## ಮೈಸೂರು ವಿಭಾಗ



ಪ್ರಥಮ ಸ್ಥಾನ - ಚಿಕ್ಕಮಗಳೂರು

ಜೆ.ಬಿ. ಮಲ್ಲಾರಾಧ್ಯ ಪರ್ಯಾಯ ಫಲಕ



ದ್ವಿತೀಯ ಸ್ಥಾನ - ಕೊಡಗು



ತೃತೀಯ ಸ್ಥಾನ - ಮೈಸೂರು

## ಬೆಳಗಾವಿ ವಿಭಾಗ



ಪ್ರಥಮ ಸ್ಥಾನ - ವಿಜಯಪುರ

ಕೊಂಡಜ್ಜಿ ಬಸಪ್ಪ ಪರ್ಯಾಯ ಫಲಕ



ದ್ವಿತೀಯ ಸ್ಥಾನ - ಬಾಗಲಕೋಟೆ



ತೃತೀಯ ಸ್ಥಾನ - ಗದಗ

## ಕಲಬುರಗಿ ವಿಭಾಗ



ಪ್ರಥಮ ಸ್ಥಾನ - ಬಳ್ಳಾರಿ

ಪ್ರೊ. ಪಿ. ಶಿವಶಂಕರ್ ಪರ್ಯಾಯ ಫಲಕ



ದ್ವಿತೀಯ ಸ್ಥಾನ - ರಾಯಚೂರು



ತೃತೀಯ ಸ್ಥಾನ - ಕೊಪ್ಪಳ

### ಅಭಿನಂದೆಗಳು



26 ಫೆಬ್ರವರಿ 2023 ರಂದು ರಾಯಚೂರು ಶ್ರೀವೀರಶೈವ ಕಲ್ಯಾಣ ಮಂಟಪದಲ್ಲಿ ನಡೆದ ಜಿಲ್ಲಾ ಮಟ್ಟದ "ಕನ್ನಡ ಜಾನಪದ ಮಹಿಳಾ ಸಮ್ಮೇಳನ" ಕಾರ್ಯಕ್ರಮದಲ್ಲಿ ರಾಯಚೂರು ಜಿಲ್ಲಾ ಮುಖ್ಯ ಆಯುಕ್ತರಾದ**ಶ್ರೀಮತಿ ಅಜೀಜಾ ಸುಲ್ತಾನಾ** ಅವರಿಗೆ **"ರಾಜ್ಯ ಮಟ್ಟದ ರಾಣಿ ರುದ್ರಮ್ಮದೇವಿ"** ಪ್ರಶಸ್ತಿ ಲಭಿಸಿದೆ.

ಭಾರತ್ ಸ್ಕೌಟ್-ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಿಂದ ಇವರಿಗೆ ಅಭಿನಂದನೆಗಳು.

– ರಾಜ್ಯ ಕಾರ್ಯದರ್ಶಿ



# ಎ.ಎಸ್.ಒ.ಸಿ, ಡಿ.ಒ., ಎಸ್.ಜಿ.ವಿ.ಗಳ ಸಭೆ

ರಾಜ್ಯ ಸಂಸ್ಥೆಯಿಂದ ರಾಜ್ಯ ಮಟ್ಟದ ಸಹಾಯಕ ರಾಜ್ಯ ಸಂಘಟನಾ ಆಯುಕ್ತರು, ಜಿಲ್ಲಾ ಸಂಘಟಕರುಗಳು ಮತ್ತು ಸ್ಕೌಟ್–ಗೈಡ್ ಸ್ವಯಂ ಸೇವಕರುಗಳ ಸಭೆಯನ್ನು ಮಾರ್ಚ್ 10 ರಿಂದ 12ರ ವರೆಗೆ ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು.

ಸದರಿ ಸಭೆಯಲ್ಲಿ 2022–23ನೇ ಸಾಲಿನ ಸ್ಕೌಟ್/ಗೈಡ್ ಗಣತಿಯ ಬಗ್ಗೆ, ಜಿಲ್ಲಾ/ಸ್ಥಳೀಯ ಸಂಸ್ಥೆಯ ನವೀಕರಣ ಶುಲ್ಕ ಪಾವತಿಸುವ ಬಗ್ಗೆ, 2022–23ನೇ ಸಾಲಿನ ಬೇಸಿಗೆ ಶಿಬಿರದ ಲೆಕ್ಕಪತ್ರಗಳು, ವರದಿ ಮತ್ತು ಸಲಹೆಗಳ ಬಗ್ಗೆ, ಧ್ವಜಚೀಟಿ ಮತ್ತು ಸಾಮಾಗ್ರಿ ಮಳಿಗೆ ಬಾಕಿಯ ಬಗ್ಗೆ, ಮೂಲ ತರಬೇತಿ ಶಿಬಿರದ ಪಟ್ಟಿಯ ಬಗ್ಗೆ, 2023–24ನೇ ವಾರ್ಷಿಕ ಯೋಜನೆಯ ಸಲಹೆಗಳ ಬಗ್ಗೆ, ತಾಲ್ಲೂಕು/ಜಿಲ್ಲಾ/ರಾಜ್ಯ ಮಟ್ಟದ ವಿವಿಧ ಪರೀಕ್ಷಾ ಶಿಬಿರಗಳ ಬಗ್ಗೆ, ಬೇಸಿಗೆ ಶಿಬಿರದ ಸಿದ್ಧತೆ ಮತ್ತು ಅನುಷ್ಠಾನದ ಬಗ್ಗೆ, ಪ್ರವಾಸದ ವರದಿಯನ್ನು ರಾಜ್ಯ ಸಂಸ್ಥೆಗೆ ಕಳುಹಿಸುವ ಬಗ್ಗೆ, ವಿವಿಧ ವರದಿ ಸಲ್ಲಿಕೆಯ ಬಗ್ಗೆ, ಎಲ್ಲಾ ವಿಧದ ಪ್ರಮಾಣ ಪತ್ರ ಅಥವಾ ರಾಜ್ಯ ಸಂಸ್ಥೆಯಿಂದ ಕಳುಹಿಸಿರುವ ಯಾವುದೇ ಅಂಶಗಳನ್ನು ಶಾಲೆ/ಕಾಲೇಜು/ಕಛೇರಿ ಮತ್ತು ಪದಾಧಿಕಾರಿಗಳಿಗೆ ವಿತರಣೆ ಮಾಡುವ ಬಗ್ಗೆ, ಆಡಳಿತಾತ್ಮಕ ವಿಷಯಗಳು, ರಜೆ ಪಡೆಯುವ ಬಗ್ಗೆ, ವಾರ್ಷಿಕ ಕಾರ್ಯನಿರ್ವಹಣಾ ವರದಿ, ತರಬೇತಿ, ಒ.ವೈ.ಎಂ.ಎಸ್. ನೊಂದಾವಣಿ ಬಗ್ಗೆ ಹಾಗೂ ಇತರೆ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಮೇಲಿನ ಎಲ್ಲಾ ಅಂಶಗಳ ಆಧಾರದ ಮೇಲೆ 2023–24ನೇ ಸಾಲಿನಲ್ಲಿ ಜಿಲ್ಲೆಗಳು ಸಮಗ್ರವಾಗಿ ಅಭಿವೃದ್ಧಿ ಹೊಂದುವಲ್ಲಿ ಕಾರ್ಯನಿರ್ವಹಿಸುವ ಬಗ್ಗೆ ರಾಜ್ಯ ಕಾರ್ಯದರ್ಶಿಯವರು, ಸಹಾಯಕ ಕಾರ್ಯದರ್ಶಿ, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್ & ಗೈಡ್ಸ್), ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್ಸ್ ಮತ್ತು ಗೈಡ್ಸ್), ರೇಂಜರಿಂಗ್ ವಿಭಾಗದ ಉಸ್ತುವಾರಿ, ಪರೀಕ್ಷಾ ವಿಭಾಗ ಉಸ್ತುವಾರಿಗಳು ಸಂಘಟಕರುಗಳಿಗೆ ಮಾಹಿತಿ ನೀಡಿ ಪ್ರೋತ್ಸಾಹಿಸಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಗಣತಿ, 2023 ಬೇಸಿಗೆ ಶಿಬಿರದ ಆಯೋಜನೆ ಹಾಗೂ ಸಮಗ್ರವಾಗಿ ಘಟಕ ನಡೆಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ವೈಯಕ್ತಿಕವಾಗಿ ಎಲ್ಲರಿಗೂ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಡುವ ಮೂಲಕ ಸಂಘಟಕರೊಂದಿಗೆ ಚರ್ಚಿಸಿದರು ಮತ್ತು ಮುಂದಿನ ದಿನಗಳಲ್ಲಿ ಉತ್ತಮವಾಗಿ ಕಾರ್ಯಚಟುವಟಿಕೆಗಳನ್ನು ಜಿಲ್ಲಾ ಹಾಗೂ ಸ್ಥಳೀಯ ಮಟ್ಟದಲ್ಲಿ ಆಯೋಜಿಸುವಲ್ಲಿ ಕ್ರಮಕೈಗೊಳ್ಳುವ ಬಗ್ಗೆ ಪ್ರೋತ್ಸಾಹಿಸಿ ಮಾರ್ಗದರ್ಶನ ನೀಡಿದರು. ಇದೇ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದಕ್ಕಾಗಿ ವೈಯಕ್ತಿಕವಾಗಿ ಸಂಘಟಕರುಗಳಿಗೆ ಪ್ರಶಂಸನಾ ಪತ್ರವನ್ನು ನೀಡುವ ಮೂಲಕ ಅಭಿನಂದಿಸಿ ಗೌರವಿಸಿದರು.

ಸಂಘಟಕರುಗಳ ಸಭೆಯು ಉತ್ತಮ ಮಾಹಿತಿ ಮತ್ತು ಪ್ರಾತ್ಯಕ್ಷಿತೆಯೊಂದಿಗೆ ಯಶಸ್ವಿಯಾಗಿ ನೆರವೇರಿತು.



# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಿಂದ ಬೇಸಿಗೆ ಶಿಬಿರಗಳನ್ನು ಆಯೋಜಿಸಲು ಆದೇಶದ ಪ್ರತಿ

ಕರ್ನಾಟಕ ಸರ್ಕಾರ

ಸಂಖ್ಯೆ :ಇಪಿ 23 ಎಂಪಿಇ 2023.

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:18.03.2023.

ಇವರಿಂದ :
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.
ಬಹುಮಹಡಿ ಕಟ್ಟಡ, ಬೆಂಗಳೂರು-560001.

ಇವರಿಗೆ :
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು-01.

ಮಾನ್ಯರೆ,

ವಿಷಯ : ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಿಂದ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರಗಳನ್ನು ಆಯೋಜಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಇವರ ದಿ:08.03.2023 ರ ಪತ್ರ

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ2023 ರ ಏಪ್ರಿಲ್ ಮತ್ತು ಮೇ ತಿಂಗಳ ಬೇಸಿಗೆ ರಜೆಯ ಸಮಯದಲ್ಲಿ ಆಯಾಯ ಶಾಲಾ ಹಂತ ಅಥವಾ ಕ್ಲಸ್ಟರ್ ಹಂತದಲ್ಲಿ 3 ರಿಂದ 7 ದಿನಗಳ ಅವಧಿಯಲ್ಲಿ " ಬೇಸಿಗೆ ಶಿಬಿರ " ವನ್ನು ಆಯೋಜಿಸಿ ಸ್ಕೌಟಿಂಗ್- ಗೈಡಿಂಗ್ ಕೌಶಲ್ಯಗಳಾದ ಪ್ರಥಮ ಚಿಕಿತ್ಸೆ ಪಯನರಿಂಗ್, ಮ್ಯಾಪಿಂಗ್, ಎಸ್ಟಿಮೇಷನ್, ಶಿವಿರಾಗ್ನಿ , ಸರ್ವಧರ್ಮ ಪ್ರಾರ್ಥನೆ ಇತ್ಯಾದಿ ತರಬೇತಿಗಳನ್ನು ನೀಡಲು ಉದ್ದೇಶಿಸಲಾಗಿದ್ದು, ಈ ಕಾರ್ಯಕ್ರಮವನ್ನು ಆಯೋಜಿಸಲು ಸರ್ಕಾರದ ಅನುಮತಿ ಕೋರಿರುತ್ತಾರೆ.

ಪ್ರಸ್ತಾವೆಯನ್ನು ಪರಿಶೀಲಿಸಿದ ನಂತರ 2023 ರ ಏಪ್ರಿಲ್ ಮತ್ತು ಮೇ ತಿಂಗಳ ಬೇಸಿಗೆ ರಜೆಯ ಸಮಯದಲ್ಲಿ ಆಯಾಯ ಶಾಲಾ ಹಂತ ಅಥವಾ ಕ್ಲಸ್ಟರ್ ಹಂತದಲ್ಲಿ 3 ರಿಂದ 7 ದಿನಗಳ ಅವಧಿಯಲ್ಲಿ " **ಬೇಸಿಗೆ ಶಿಬಿರ** " ಆಯೋಜಿಸಲು ಅನುಮತಿ ನೀಡಿದೆ.

ಪ್ರಸ್ತಾಪಿಸಲಾದ **"ಬೇಸಿಗೆ ಶಿಬಿರ"** ಚಟುವಟಿಕೆಗಳಿಗೆ ಸಹಕಾರ ಮತ್ತು ಪ್ರೋತ್ಸಾಹ ನೀಡುವ ಬಗ್ಗೆ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕ್ರಮವಹಿಸಲು ಅಗತ್ಯ ಸುತ್ತೋಲೆ ಹೊರಡಿಸುವಂತೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

**Signed by Girija B H**
**Date: 18-03-2023 11:12:22**
(ಬಿ. ಹೆಚ್ ಗಿರಿಜಾ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ)
ಶಾಲಾ ಶಿಕ್ಷಣ ಮತು ಸಾಕ್ಷರತಾ ಇಲಾಖೆ.

ಪ್ರತಿ.
ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಮುಖ್ಯ ಕಚೇರಿ, ನಂ.39 ಶಾಂತಿ ಗೃಹ, ಪ್ಯಾಲೆಸ್ ರಸ್ತೆ, ಬೆಂಗಳೂರು.-560001.



# ಜಿಲ್ಲಾ ವಾರ್ತೆಗಳು

## ಬೆಳಗಾವಿ

* ಫೆಬ್ರವರಿ 22 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ ನಿಪ್ಪಾಣಿ ಇವರ ಸಹಯೋಗದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪಕರ ಜನ್ಮ ದಿನಾಚರಣೆ ಕಾರ್ಯಕ್ರಮವು ಜರುಗಿತು. ಇದರ ಅಂಗವಾಗಿ ಪಥಸಂಚಲನಕ್ಕೆ ಕ್ಷೇತ್ರ ಸಮನ್ವಯಾಧಿಕಾರಿಗಳು ಶ್ರೀ ಆರ್.ಎಂ. ಕಾಗೆ ಹಸಿರು ನಿಶಾನೆ ಮೂಲಕ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ 580ಕ್ಕೂ ಹೆಚ್ಚು ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಹಾಗೂ ಸ್ಕೌಟರ್ ಮತ್ತು ಗೈಡರ್‌ಗಳು ಭಾಗವಹಿಸಿದ್ದರು. ನಂತರ ಮಕ್ಕಳಿಗೆ ದ್ವಿತೀಯ ಸೋಪಾನ ಪರೀಕ್ಷೆ ನಡೆಸಲಾಯಿತು.



* ಫೆಬ್ರವರಿ 11 ರಂದು ಬೆಳಗಾವಿ ಜಿಲ್ಲೆಯ ನವೀಕೃತ ಜಿಲ್ಲಾ ಕೇಂದ್ರ ಕಾರ್ಯಾಲಯದ ಉದ್ಘಾಟನೆಯನ್ನು ರಾಜ್ಯ ಮುಖ್ಯ ಆಯುಕ್ತರು, ಸನ್ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ ನೆರವೇರಿಸಿದರು. ನಂತರ ತಮ್ಮ ಹಿತನುಡಿಯಲ್ಲಿ ಭಾರತ ದೇಶದಲ್ಲಿ ಶೈಕ್ಷಣಿಕ ಕ್ರಾಂತಿಯಾಗಬೇಕಾದರೆ ಅನೇಕ ನಾಯಕರುಗಳು ಕೊಡುಗೆ ನೀಡಿದ್ದಾರೆ. ಅಂತಹವರ ಸಾಲುಗಳಲ್ಲಿ ಅಗ್ರಗಣ್ಯರಾಗಿ ಭಾರತದ ಉಪ ರಾಷ್ಟ್ರಪತಿಗಳಾದ ಶ್ರೀ ಬಿ.ಡಿ. ಜತ್ತಿಯವರು. ಅಂಥವರು ಈ ಕಟ್ಟಡದ ಅಡಿಪಾಯ ಹಾಕಿದವರು ಎಂದರು. ಜಾಂಬೂರಿ ಉತ್ಸವಕ್ಕೆ ತೆರಳಲು ವಿದ್ಯಾರ್ಥಿಗಳಿಗೆ ವಿಶೇಷ ಬಸ್ಸಿನ ಅನುವು ಮಾಡಿಕೊಟ್ಟ ಬೆಳಗಾವಿ ಜಿಲ್ಲೆಯ ಎಲ್ಲಾ ಶಾಸಕರು, ಬಿ.ಇ.ಓ.ಗಳಿಗೂ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದರು. ಧಾರವಾಡ ಅಪರ ಆಯುಕ್ತರ ಕಾರ್ಯಾಲಯದ ಜಂಟಿ ನಿರ್ದೇಶಕ ಹಾಗೂ ಜಿಲ್ಲಾ ಮುಖ್ಯ ಆಯುಕ್ತ ಮತ್ತು ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಗಜಾನನ ಮಣ್ಣಿಕೇರಿ ಮಾತನಾಡಿ "ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸ್ಕೌಟ್ ಮತ್ತು ಗೈಡ್ ಸಹಾಯಕಾರಿಯಾಗಲಿದೆ. ಅಖಂಡ ಬೆಳಗಾವಿ ಜಿಲ್ಲೆಗೆ ಬಹುದೊಡ್ಡ ಕಛೇರಿ ಸುಂದರವಾಗಿ ನವೀಕೃತಗೊಂಡು ಜಿಲ್ಲಾ ಕೇಂದ್ರ ಕಾರ್ಯಾಲಯದ ನಿರ್ಮಾಣವಾಗಲು ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರ ವಿಶೇಷ ಕಾಳಜಿ ಎಲ್ಲರಿಗೂ ಮೆಚ್ಚುಗೆಯಾಗಿದೆ" ಎಂದರು. ಸಾಂಸ್ಕೃತಿಕ ಜಾಂಬೂರಿ ಉತ್ಸವದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಅನುಭವದ ಅನಿಸಿಕೆ ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಶ್ರೀ ಬಸವರಾಜ ನಾಲತವಾಡ, ಉಪ ನಿರ್ದೇಶಕರು(ಆ) ಶಾ.ಶಿ.ಸಾ. ಇಲಾಖೆ ಬೆಳಗಾವಿ(ದ) ಶ್ರೀ ಮೋಹನ ಕುಮಾರ ಹಂಚಾಟಿ, ಉಪ ನಿರ್ದೇಶಕರು(ಆ) ಶಾ.ಶಿ.ಸಾ. ಇಲಾಖೆ ಶೈ. ಚಿಕ್ಕೋಡಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ವೈ.ಜಿ. ಭಜಂತ್ರಿ, ಶ್ರೀ ಎಸ್.ಪಿ. ದಾಸಪ್ಪನವರ, ಶ್ರೀ ಆರ್.ಟಿ. ಬಳಿಗಾರ, ಶ್ರೀ ಎ.ಎನ್. ಫ್ಯಾಟಿ, ಶ್ರೀ ಎಸ್.ಸಿ. ಕರಿಕಟ್ಟಿ, ಶ್ರೀ ಎಮ್.ಎನ್. ದಂಡಿನ, ಶ್ರೀ ಜಿ.ಬಿ. ಬಳಗಾರ, ಶ್ರೀ ಎ.ಜಿ. ಮಣ್ಣಿಕೇರಿ, ಶ್ರೀಮತಿ ಪಿ.ಬಿ. ಹಿರೇಮಠ, ಶ್ರೀಮತಿ ಆರ್.ಎಂ. ಮಠದ ಹಾಗೂ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷರುಗಳು ಉಪಸ್ಥಿತರಿದ್ದರು. ಶ್ರೀಮತಿ ಪ್ರಭಾವತಿ ಪಾಟೀಲ ಜಿಲ್ಲಾ ಆಯುಕ್ತರು (ಗೈ) ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಡಿ.ಬಿ. ಅತ್ತಾರ ನಿರೂಪಿಸಿದರು. ಶ್ರೀ ವಿಠ್ಠಲ ಎಸ್.ಬಿ. ವಂದಿಸಿದರು.



* ಫೆಬ್ರವರಿ 21 ರಂದು ಗೋಕಾಕ್ ತಾಲ್ಲೂಕಿನ ಮಮದಾಪೂರದ ಚಿಂತಾಮಣಿ ಪಾವಟೆ ಪ್ರೌಢ ಶಾಲೆಯಲ್ಲಿ ಬೆಡನ್ ಪೋವೆಲ್ ಹಾಗೂ ಲೇಡಿ ಬೆಡನ್ ಪೋವೆಲ್‌ರವರ ಹುಟ್ಟು ಹಬ್ಬದ ನಿಮಿತ್ತ ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಕಾರ್ಯಕ್ರಮ ನಡೆಯಿತು. ನಂತರ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು. ಇದೇ ವೇಳೆ ಎಸ್.ಎಸ್.ಎಲ್.ಸಿ. ಮುಗಿಸಿ ಶಾಲೆಯಿಂದ ಹೋಗುವ ಸ್ಕೌಟ್–ಗೈಡ್ಸ್ ಮಕ್ಕಳಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿತು. ಸಮಾರಂಭದ



ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಆರ್. ಕಮತ ಇವರು ವಹಿಸಿದ್ದರು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎ.ಎನ್. ತೋಟಗಿ ಹಾಗೂ ಶಾಲೆಯ ಶಿಕ್ಷಕರುಗಳು ಉಪಸ್ಥಿತರಿದ್ದರು. ಎ.ಎಸ್.ಓ.ಸಿ. ಸ್ಕೌಟ್ ಶ್ರೀ ಡಿ.ಬಿ. ಅತ್ತಾರ ಸ್ಕೌಟಿಂಗ್ ಮತ್ತು ಗೈಡಿಂಗ್ ಬಗೆಗೆ ಮಾಹಿತಿ ನೀಡಿದರು. ಸದರಿ ಶಾಲೆಯಿಂದ ಜಾಂಬೂರಿಯಲ್ಲಿ ಭಾಗವಹಿಸಿದ ಸ್ಕೌಟ್ ಮಕ್ಕಳಿಗೆ ಅಭಿನಂದನೆ ಸಲ್ಲಿಸಲಾಯಿತು. ಮುಂದಿನ ದಿನಗಳಲ್ಲಿ ಹಂತ ಹಂತದ ಪರೀಕ್ಷೆಗಳಿಗೆ ಮಕ್ಕಳನ್ನು ತಯಾರಿ ಮಾಡುವಂತೆ ತಿಳಿಸಲಾಯಿತು. ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ಸ್ಕೌಟ್–ಗೈಡ್ ಹಾಗೂ ಶಾಲೆಯ ಇತರೆ ಮಕ್ಕಳು ಭಾಗವಹಿಸಿದ್ದರು.

## ಬೆಂಗಳೂರು ಗ್ರಾಮಾಂತರ

* ಫೆಬ್ರವರಿ 11 ರಿಂದ 12ರ ವರೆಗೆ ಜಿಲ್ಲಾ ಮುಖ್ಯ ಆಯುಕ್ತ ಶ್ರೀ ನಾಗರಾಜರವರ ಮಾರ್ಗದರ್ಶನದಲ್ಲಿ ಹೊಸಕೋಟೆ ಸ್ಥಳೀಯ ಸಂಸ್ಥೆಯ ವತಿಯಿಂದ ತಾಲ್ಲೂಕು ಮಟ್ಟದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಸರ್ಕಾರಿ ಬಾಲಕಿಯರ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಹೊಸಕೋಟೆ ಟೌನ್ ಇಲ್ಲಿ ಆಯೋಜಿಸಲಾಯಿತು. ಈ ಸಂದರ್ಭದಲ್ಲಿ ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಡಿ.ವಿ. ಮುನಿಸ್ವಾಮಿ, ಪ್ರೀ–ಎಲ್.ಟಿ, ಸ್ಕೌಟ್ಸ್–ಗೈಡ್ಸ್ ಸ್ವಯಂಸೇವಕರು ಹಾಗೂ ಗೈಡ್ ವಿಭಾಗದ ನಾಯಕರಾಗಿ ಶ್ರೀಮತಿ ಕಲ್ಪನಾ ಆರ್. ಸವಣೂರು ಕಾರ್ಯನಿರ್ವಹಿಸಿದರು ಹಾಗೂ ಶ್ರೀ ಬಿ.ಕೆ. ಮೋಹನ್‌ಬಾಬು, ಜಿಲ್ಲಾ ಆಯುಕ್ತರು (ಸ್ಕೌ) ಶ್ರೀಮತಿ ಗುಲಾಬ್ ಜಾನ್, ಸ್ಥಳೀಯ ಸಂಸ್ಥೆಯ ಅಧ್ಯಕ್ಷರು, ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರುಗಳಾದ ಶ್ರೀ ಡಿ. ರಾಜಕುಮಾರ್, ಶ್ರೀ ಇಮ್ತಿಯಾಜ್ ಪಾಷಾ, ದಾನಿಗಳಾದ ಶ್ರೀ ಮಂಜುಸಿಂಗ್, ಶ್ರೀ ಅಫ್ರೋಜ್ ಸಹಕಾರವನ್ನು ನೀಡಿದರು. ಸದರಿ ಶಿಬಿರದಲ್ಲಿ 45 ಸ್ಕೌಟ್ಸ್, 40 ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ಫೆಬ್ರವರಿ 17ರಂದು ಶ್ರೀ ನಾಗರಾಜ, ಜಿಲ್ಲಾ ಮುಖ್ಯ ಆಯುಕ್ತರು ಇವರ ನೇತೃತ್ವದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆಯ ವತಿಯಿಂದ ತೃತೀಯ ಚರಣ್ ಕಬ್ ಮತ್ತು ಸುವರ್ಣ ಪಂಕ್ ಬುಲ್ ಬುಲ್ ಪರೀಕ್ಷಾ ಶಿಬಿರವನ್ನು ಲಿಟ್ಲ್ ಏಂಜಲ್ಸ್ ನಳಂದಾ ಶಾಲೆ, ದೊಡ್ಡಬಳ್ಳಾಪುರ ಇಲ್ಲಿ ಆಯೋಜಿಸಲಾಯಿತು. ಕಬ್ ವಿಭಾಗದ ಶಿಬಿರದ ನಾಯಕರಾಗಿ ಶ್ರೀಮತಿ ಅನಿತಾ ಹೆಚ್. ಡಬ್ಲ್ಯೂ.ಬಿ(ಕ) ಹಾಗೂ ಬುಲ್‌ಬುಲ್ ವಿಭಾಗದಲ್ಲಿ ಶ್ರೀಮತಿ ವಿನುತಾ ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಶ್ರೀ ವೆಂಕಟರಾಜು ಜಿಲ್ಲಾ ಸಹಾಯಕ ಆಯುಕ್ತರು (ರೋ), ಶ್ರೀ ಅರುಣ್‌ಕುಮಾರ್ ಹೆಚ್.ಕೆ. ಉಪಸ್ಥಿತರಿದ್ದರು. ಸದರಿ ಶಿಬಿರದಲ್ಲಿ 83 ಕಬ್ಸ್, 84 ಬುಲ್ ಬುಲ್‌ಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ಫೆಬ್ರವರಿ 22 ರಂದು "ಸಂಸ್ಥಾಪಕರ ದಿನಾಚರಣೆ, ವಿಶ್ವ ಭ್ರಾತೃತ್ವ ದಿನ ಹಾಗೂ ವಿಶ್ವಚಿಂತಕರ ದಿನಾಚರಣೆಯ" ಅಂಗವಾಗಿ ಸರ್ವಧರ್ಮ ಪ್ರಾರ್ಥನೆ, ದಿನಕ್ಕೊಂದು ಒಳ್ಳೆಯ ಕೆಲಸ, ಸಸಿ ನೆಡುವ ಕಾರ್ಯಕ್ರಮ, ಸ್ವಚ್ಛತೆ ಕಾರ್ಯ ಹಾಗೂ ಇತರೆ ಸಾಮಾಜಿಕ ಕಾರ್ಯಗಳನ್ನು ನಡೆಸುವುದರ ಮೂಲಕ ಶಾಲಾ ಹಾಗೂ ಸ್ಥಳೀಯ ಸಂಸ್ಥೆಗಳ ಹಂತದಲ್ಲಿ ಆದರಿಸಲಾಯಿತು.

* ಮಾರ್ಚ್ 15ರ ಬುಧವಾರದಂದು ನೆಲಮಂಗಲ ಸ್ಥಳೀಯ ಸಂಸ್ಥೆಯ ವತಿಯಿಂದ 2ನೇ ಹಂತದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ವಿದ್ಯಾ ಸ್ಫೂರ್ತಿ ಅಂತಾರಾಷ್ಟ್ರೀಯ ಶಾಲೆ, ಚಂದನಹೊಸಹಳ್ಳಿ, ದಾಬಸ್‌ಪೇಟೆ ಇಲ್ಲಿ ಆಯೋಜಿಸಲಾಯಿತು. ಅಧ್ಯಕ್ಷತೆಯನ್ನು ಶ್ರೀ ದಿಲೀಪ್, ಶಾಲಾ ಪ್ರಾಂಶುಪಾಲರು ವಹಿಸಿದ್ದರು, ಉದ್ಘಾಟನೆಯನ್ನು ಶಿಬಿರದ ನಾಯಕರು ಹಾಗೂ ಇತರ ಗಣ್ಯರು ನೆರವೇರಿಸಿದರು. ಈ ಸಂದರ್ಭದಲ್ಲಿ ಶಿಬಿರದ ನಾಯಕರಾಗಿ ಶ್ರೀ ಬಾಲಗಂಗಾಧರ ಹೆಚ್.ಡಬ್ಲ್ಯೂ.ಬಿ(ಸ್ಕೌ), ಶ್ರೀಮತಿ ಆರ್ ವಿಜಯಕುಮಾರಿ, ಹೆಚ್.ಡಬ್ಲ್ಯೂ.ಬಿ(ಗೈ) ರವರು ಕಾರ್ಯನಿರ್ವಹಿಸಿದರು.






ಮಾರ್ಚ್ 08ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಸ್ಥಳೀಯ ಸಂಸ್ಥೆಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ತಾಲ್ಲೂಕು ವೈದ್ಯಾಧಿಕಾರಿಗಳಾದ ಡಾ. ನೀತು ರಾಣಿ, ಜಿಲ್ಲಾ ಮುಖ್ಯ ಆಯುಕ್ತ ಶ್ರೀ ನಾಗರಾಜ್, ಜಿಲ್ಲಾ ಸ್ಕೌಟ್ ಆಯುಕ್ತ ಶ್ರೀ ಬಿ.ಕೆ. ಮೋಹನ್ ಬಾಬು ಇತರ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಸ್ಕೌಟರ್ಸ್-ಗೈಡರ್ಸ್, ಸ್ಕೌಟ್ಸ್-ಗೈಡ್ಸ್‌ಗಳು ಭಾಗವಹಿಸಿದ್ದರು.

## ಬೆಂಗಳೂರು ದಕ್ಷಿಣ

* ಫೆಬ್ರವರಿ 25 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಬಸವನಗುಡಿ ಸ್ಥಳೀಯ ಸಂಸ್ಥೆಯ ಮಹಿಳಾ ಮಂಡಲಿ ವಿದ್ಯಾ ಸಂಸ್ಥೆ ವತಿಯಿಂದ ಆಯೋಜಿಸಿದ ಶಿಬಿರಾಗ್ನಿ ಕಾರ್ಯಕ್ರಮವನ್ನು ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಉದ್ಘಾಟಿಸಿ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು. ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ಶಾಲೆಯ ಆಡಳಿತ ಮಂಡಳಿಯವರು, ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ಶಾಲಾ ಶಿಕ್ಷಕರು, ಕಬ್ಸ್-ಬುಲ್‌ಬುಲ್ಸ್, ಸ್ಕೌಟ್-ಗೈಡ್, ದಳ ನಾಯಕರುಗಳು, ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



* ಫೆಬ್ರವರಿ 25 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಹಲಸೂರು ಸ್ಥಳೀಯ ಸಂಸ್ಥೆಯ ವಾರ್ಷಿಕ ರ‍್ಯಾಲಿ ಬಾಲ್ಡ್ವಿನ್ ಬಾಯ್ಸ್ ಸ್ಕೂಲ್‌ನಲ್ಲಿ ಆಯೋಜನೆ ಮಾಡಲಾಯಿತು. ಸನ್ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ವಿಕ್ಟೋರಿಯಾ, ಶ್ರೀಮತಿ ಅಮಲ ರಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು ಹಾಗೂ ಸ್ಥಳೀಯ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಚೇರ್ಮನ್, ಶ್ರೀ ಎಡ್ವಿನ್, ಹಲಸೂರು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು, ಶಾಲೆಯ ಆಡಳಿತ ವರ್ಗದವರು ಪ್ರಾಂಶುಪಾಲರು, 317 ಕಬ್ಸ್-ಬುಲ್‌ಬುಲ್ಸ್, ಸ್ಕೌಟ್-



ಗೈಡ್, ಸ್ಕೌಟ್ಸ್ ಮಾಸ್ಟರ್, ಕಬ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್ಸ್, ಫ್ಲಾಕ್ ಲೀಡರ್ ಉಪಸ್ಥಿತರಿದ್ದರು.

* ಫೆಬ್ರವರಿ 22 ರಂದು "ಸಂಸ್ಥಾಪಕರ ದಿನ"ದ ಅಂಗವಾಗಿ ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆಯಿಂದ 2021-22ನೇ ಸಾಲಿನ ರಾಜ್ಯ ಪುರಸ್ಕಾರ ಪ್ರಮಾಣ ಪತ್ರ ವಿತರಣಾ ಸಮಾರಂಭವನ್ನು ಆಯೋಜಿಸಲಾಯಿತು. ಕಾರ್ಯಕ್ರಮಕ್ಕೆ ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ದಿನದ ಮಹತ್ತರ ಉದ್ದೇಶದೊಂದಿಗೆ ಪ್ರಾರಂಭವಾಗಿರುವ ಈ ಚಳವಳಿಯ ಧ್ಯೇಯೋದ್ದೇಶಗಳನ್ನು ಸಾಕಾರಗೊಳಿಸೋಣ. ಚಳವಳಿಯನ್ನು ಮತ್ತಷ್ಟು ಬಲವರ್ಧನೆಗೊಳಿಸೋಣ ಎಂದು ಎಲ್ಲರನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಬಿ.ಎಸ್. ಅನಂತ್, ಜಿಲ್ಲಾ ಸಹಾಯಕ ಕಾರ್ಯದರ್ಶಿ,



ಶ್ರೀಮತಿ ವಿಕ್ಟೋರಿಯಾ ಶ್ರೀಮತಿ ಅಮಲರಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿ, ಶ್ರೀಮತಿ ಕೆ.ವಿ. ಶಾಮಲಾ ರಾಜ್ಯ ತರಬೇತಿ ಆಯುಕ್ತರು, ಶ್ರೀಮತಿ ಲತಾ ಮಂಜುನಾಥ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್, ಪೋಷಕರು ಮತ್ತು ದಳ ನಾಯಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

* ಫೆಬ್ರವರಿ 22 ರಂದು "ವಿಶ್ವ ಚಿಂತನಾ ದಿನಾಚರಣೆ ಮತ್ತು ಸಂಸ್ಥಾಪಕರ ದಿನಾಚರಣೆ" ಅಂಗವಾಗಿ ಬೆಂಗಳೂರು ದಕ್ಷಿಣ ಜಿಲ್ಲೆಯ ಬಿ.ಜಿ.ಎಸ್ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಆಚರಿಸಲಾಯಿತು.



ಕಾರ್ಯಕ್ರಮಕ್ಕೆ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್‌ಗಳ ದೀಕ್ಷಾ ಸಮಾರಂಭದಲ್ಲಿ ಭಾಗವಹಿಸಿ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು. ಶಾಲೆಯ ಆಡಳಿತ ವರ್ಗದವರು ಪ್ರಾಂಶುಪಾಲರು, ಸ್ಕೌಟ್ ಮಾಸ್ಟರ್, ಕಬ್ ಮಾಸ್ಟರ್, ಗೈಡ್ ಕ್ಯಾಪ್ಟನ್, ಫ್ಲಾಕ್ ಲೀಡರ್, ಕಬ್ಸ್-ಬುಲ್‌ಬುಲ್ಸ್, ಸ್ಕೌಡ್ಸ್-ಗೈಡ್ಸ್‌ಗಳು ಭಾಗವಹಿಸಿದ್ದರು.

## ಬೆಂಗಳೂರು ಉತ್ತರ

* ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ಬಿ.ಆರ್. ಪ್ರಸನ್ನಕುಮಾರ್ ಆರ್.ಟಿ.ನಗರ ಸ್ಥಳೀಯ ಸಂಸ್ಥೆಯಿಂದ ವಿಶ್ವ ಚಿಂತನಾ ದಿನದಂದು ರಾಜ್ಯ ಪುರಸ್ಕಾರ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಿ ಗೌರವಿಸಿದರು ಹಾಗೂ ಚಿಂತನಾ ದಿನದ" ವಿಶೇಷತೆಯನ್ನು ತಿಳಿಸಿದರು.

* ಸರಕಾರಿ ಪ್ರಥಮ ದರ್ಜೆ ಕಾಲೇಜು, ಯಲಹಂಕ ಇಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ಬಿ.ಆರ್. ಪ್ರಸನ್ನಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ವಿವಿಧ ಸ್ಪರ್ದೆಯಲ್ಲಿ ವಿಜೇತರಿಗೆ ಬಹುಮಾನ ನೀಡಿ ರೋವರ್ಸ್-ರೇಂಜರ್ಸ್‌ಗಳನ್ನು ಪ್ರೋತ್ಸಾಹಿಸಿದರು. ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಆ ಕಾಲೇಜಿನ ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥರು ಶ್ರೀ ಚಂದ್ರಪ್ಪ ಇವರು ರೋವರ್ಸ್-ರೇಂಜರ್ಸ್ ಕಾರ್ಯಕ್ರಮವನ್ನು ಕೊಂಡಾಡಿದರು. ಕಾಲೇಜಿನ ಪ್ರಾಂಶುಪಾಲರು ಪ್ರೊ. ಪಿ.ಬಿ. ಮಲ್ಲಿಕಾರ್ಜುನ ಇವರು ತಮ್ಮ ಕಾಲೇಜಿನ ರೋವರ್ಸ್-ರೇಂಜರ್ಸ್ ಉತ್ತಮ ಸೇವೆ ನೀಡುತ್ತಿದ್ದಾರೆ ಎಂದರು. ರೋವರ್ಸ್-ರೇಂಜರ್ಸ್ ಘಟಕದ ಸಂಚಾಲಕರು ಡಾ॥ ಸಿ. ನಾಗರಾಜ ಮತ್ತು ಶ್ರೀಮತಿ ಅನೀತಾ ಪಾಟೀಲ್ ಟಿ.ಹೆಚ್. ಇವರು ಕಾರ್ಯಕ್ರಮವನ್ನು ಸಂಘಟಿಸಿದರು.




* ಶ್ರೀ ಅಯ್ಯಪ್ಪ ಶಿಕ್ಷಣ ಕೇಂದ್ರ, ಸಂತೋಷ ನಗರ, ಟಿ.ದಾಸರಹಳ್ಳಿ ಇಲ್ಲಿ ಚಿಂತನಾ ದಿನದಂದು ಶಾಲಾ ಸುತ್ತಮುತ್ತ ಸ್ವಚ್ಛತೆ ಕಾರ್ಯಕ್ರಮವನ್ನು ಮಾಡಿ ಸರ್ವಧರ್ಮ ಪ್ರಾರ್ಥನೆಯನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಬನ್ನಿಸ್ ಮಕ್ಕಳು ಭಾಗವಹಿಸಿದರು. ಜಾಲಹಳ್ಳಿ ಸ್ಥಳೀಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀಮತಿ ಮಂಜು ಹಾಗೂ ಪ್ರಾಂಶುಪಾಲರು ಹಾಗೂ ಮುಖ್ಯ ಶಿಕ್ಷಕರಾದ ಶ್ರೀಮತಿ ಪುಷ್ಪ ಎಮ್.ಎ. ಮತ್ತು ಶ್ರೀಮತಿ ಮೇರಿಜೋನ್ ಇವರುಗಳು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬುಲ್‌ಬುಲ್ ಶಿಕ್ಷಕಿಯಾದ ಶ್ರೀಮತಿ ಶೋಭ ಮಡಿವಾಲ್, ಗೈಡ್ಸ್ ಶಿಕ್ಷಕಿ ಶ್ರೀಮತಿ ಜಾನಕಿ ಈಶ್ವರನ್ ಬನ್ನಿ ಅಂಟಿಗಳಾದ ಶ್ರೀಮತಿ ಬೀನಾ ನಂಬಿಯಾರ್, ಶ್ರೀಮತಿ ರಿನ್ಸು ಇವರು, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಯಾದ ಶ್ರೀ ಶಾಂತಕುಮಾರ್ ಇವರು ಕಾರ್ಯಕ್ರಮವನ್ನು ಸಂಘಟಿಸಿದರು.

* ಎಮ್.ಇ.ಸಿ. ಕಾಲೇಜು ಮಲ್ಲೇಶ್ವರಂ ಇಲ್ಲಿಯ ರೋವರ್ಸ್-ರೇಂಜರ್ಸ್‌ಗಳು ಕಾಲೇಜು ಆವರಣದಲ್ಲಿ ಗಿಡವನ್ನು ನೆಟ್ಟು "ಚಿಂತನಾ ದಿನ"ವನ್ನು ಅರ್ಥಪೂರ್ಣವಾಗಿ ಅಚರಿಸಿದರು. ರೇಂಜರ್ ಲೀಡರ್ ಶ್ರೀಮತಿ ದೀಪಾ ಇವರು ಕಾರ್ಯಕ್ರಮವನ್ನು ಸಂಘಟಿಸಿದರು.




* ಎಸ್. ಕಡಾಂಬಿ ವಿದ್ಯಾ ಕೇಂದ್ರ, ರಾಜಾಜಿನಗರ ಇಲ್ಲಿ ಚಿಂತನಾ ದಿನದ ಮಹತ್ವದ ಬಗ್ಗೆ ಸ್ಕೌಟ್ಸ್-ಗೈಡ್ಸ್‌ಗಳ ಮೂಲಕ ಇತರರಿಗೆ ಮಾಹಿತಿ ನೀಡಲಾಯಿತು. ಕಾರ್ಯಕ್ರಮಕ್ಕೆ ಪ್ರಾಥಮಿಕ ವಿಭಾಗದ ಪ್ರಾಂಶುಪಾಲರು ಚಾಲನೆ ನೀಡಿದರು. ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ಶಿಕ್ಷಕಿಯರು ಕಾರ್ಯಕ್ರಮ ಸಂಘಟಿಸಿದರು.

* ಯಲಹಂಕ ಸ್ಥಳೀಯ ಸಂಸ್ಥೆಯಿಂದ ರಯಾನ್ ಇಂಟರ್ ನ್ಯಾಶನಲ್ ಸ್ಕೂಲ್ ಇಲ್ಲಿ ಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಮೋಹನ್ ಸಂಘಟಿಸಿದರು.

* ಪವನ್ ಆಂಗ್ಲ ಮಾಧ್ಯಮ ಶಾಲೆ ಸ್ಥಾಪಕರ ದಿನದ ಪ್ರಯುಕ್ತ ಸೌಟ್ಸ್-ಗೈಡ್ಸ್ ಧ್ಯೇಯೋದ್ದೇಶದ ಬಗ್ಗೆ ಜಾಥ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಶ್ರೀಮತಿ ಮೇರಿ ತೇರಸಾ ಫ್ಲಾಕ್ ಲೀಡರ್ ಕಾರ್ಯಕ್ರಮ ಸಂಘಟಿಸಿದರು.

* ರಾಜಾಜಿನಗರ ಸ್ಥಳೀಯ ಸಂಸ್ಥೆಯ ವಾಣಿ ಶಿಕ್ಷಣ ಕೇಂದ್ರ ಮಾಗಡಿ ರಸ್ತೆ ಇಲ್ಲಿ ಚಿಂತನಾ ದಿನವನ್ನು ಸರ್ವಧರ್ಮ ಪ್ರಾರ್ಥನೆ ಮಾಡುವುದರ ಮೂಲಕ ಆಚರಿಸಿದರು ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಯೋಗಿಶ್ ಇವರು ಕಾರ್ಯಕ್ರಮ ಸಂಘಟಿಸಿದರು.



* ಆರ್.ಟಿ. ನಗರ ಸ್ಥಳೀಯ ಸಂಸ್ಥೆ ಮೊಡರ್ನ್ ಪಬ್ಲಿಕ್ ಸ್ಕೂಲ್ ಸ್ಥಾಪಕರ ದಿನಾಚರಣೆಯ ಪ್ರಯುಕ್ತ ಭಿತ್ತಿಚಿತ್ರಗಳನ್ನು ರಚನೆ ಮಾಡಿ ಜಾಥಾ ಕಾರ್ಯಕ್ರಮ ಹಮ್ಮಿಕೊಂಡರು.

* ಶ್ರೀ ಅಯ್ಯಪ್ಪ ಶಿಕ್ಷಣ ಕೇಂದ್ರ ಸಿಬಿಎಸ್‌ಸಿ ಅಬ್ಬಿಗೆರೆ ಇಲ್ಲಿ "ಚಿಂತನಾ ದಿನ"ದ ಪ್ರಯುಕ್ತ ರಾಜ್ಯ ಪುರಸ್ಕಾರ ಪ್ರಮಾಣ ಪತ್ರಗಳನ್ನು ಶಾಲಾ ಪದಾಧಿಕಾರಿಗಳು ನೀಡಿದರು. ತದ ನಂತರ ಸರ್ವಧರ್ಮ ಪ್ರಾರ್ಥನೆ ನಡೆಸಲಾಯಿತು.




* ಶ್ರೀ ಮಾರುತಿ ವಿದ್ಯಾಲಯ ಸಮೂಹ ಸಂಸ್ಥೆ ವತಿಯಿಂದ "ಸ್ಥಾಪಕರ ದಿನ"ವನ್ನು ಆಚರಿಸಲಾಯಿತು, ಸರ್ವಧರ್ಮ ಪ್ರಾರ್ಥನೆ, ಜಾಥಾ, ಬಿಪಿ ಚಿತ್ರರಚನೆ ಇತ್ಯಾದಿ. ಶ್ರೀ ವರ್ಧಮಾನ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ, ಶ್ರೀಮತಿ ಅಗರ್ತಲಾ ಕೋಶಾಧಿಕಾರಿ ಇತರರು ಉಪಸ್ಥಿತರಿದ್ದರು.

* ಬಾಣಸವಾಡಿ ಸ್ಥಳೀಯ ಸಂಸ್ಥೆ ಹಾಗೂ ಮಾರುತಿ ವಿದ್ಯಾಲಯ ಕಾಡ ಅಗ್ರಹಾರ ಇವರ ಜಂಟಿ ಆಶ್ರಯದಲ್ಲಿ 2022-23 ಸಾಲಿನ "ಜಿಲ್ಲಾ ಮಟ್ಟದ ರ‍್ಯಾಲಿ"ಯು ಫೆಬ್ರವರಿ 25 ಮತ್ತು 26 ರಂದು ಯಶಸ್ವಿಯಾಗಿ ನಡೆಯಿತು. ಶಿಬಿರದ ಉದ್ಘಾಟನೆಯನ್ನು ಮಾರುತಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿಯಾದ ಶ್ರೀಮತಿ ಸರೋಜ ಗಣೇಶ್ ನೆರವೇರಿಸಿ ಶುಭ ಹಾರೈಸಿದರು. ಶಾಲಾ ಪ್ರಾಂಶುಪಾಲರು ಶ್ರೀಮತಿ ಕೋಕಿಲ ಇವರು ಜಿಲ್ಲಾ ರ‍್ಯಾಲಿಯಲ್ಲಿ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದರು. ಬಾಣಸವಾಡಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ವರ್ದಮಾನ್ ಇವರು ನಾಯಕರಾಗಿ ಶಿಬಿರದ ಮುನ್ನೋಟ ನೀಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಎಲ್ಲರನ್ನೂ ಸ್ವಾಗತಿಸಿದರು. ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಶ್ರೀ ಬಿ.ಆರ್. ಪ್ರಸನ್ನಕುಮಾರ್ ಜಿಲ್ಲಾ ಮುಖ್ಯ ಆಯುಕ್ತರು, ಇವರು ಭಾಗವಹಿಸಿ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿದರು. ಭಾಗವಹಿಸಿದ ಎಲ್ಲರಿಗೂ ಪ್ರಮಾಣಪತ್ರ ನೀಡಲಾಯಿತು. 450 ಸ್ಕೌಟ್ಸ್-ಗೈಡ್ಸ್‌ಗಳು, ಶಿಕ್ಷಕರು ಜಿಲ್ಲಾ ರ‍್ಯಾಲಿಯಲ್ಲಿ ಭಾಗವಹಿಸಿದರು.



* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ "ಸ್ಕೌಟ್ಸ್-ಗೈಡ್ಸ್ ನಡಿಗೆ ಹಳ್ಳಿ ಕಡೆಗೆ" ಎಂಬ ಸಮುದಾಯ ಸೇವಾ ಕಾರ್ಯಕ್ರಮದಡಿಯಲ್ಲಿ 8ನೇ ತಿಂಗಳ ಕಾರ್ಯಕ್ರಮವು ಫೆಬ್ರವರಿ 28ರಂದು ಗಂಟಿಗಾನಹಳ್ಳಿ, ಯಲಹಂಕ, ಬೆಂಗಳೂರು ಇಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಚಗೊಳಿಸಲಾಯಿತು. ಕಾರ್ಯಕ್ರಮಕ್ಕೆ ಗಂಟಿಗಾನಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು. ಹಾಗು ಪಿ.ಡಿ.ಓ.ರವರು ತಮ್ಮ ಸಹಕಾರ ನೀಡಿದರು ಹಾಗೂ ಸೇವೆಯಲ್ಲಿ ಭಾಗವಹಿಸಿದ್ದರು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ಕಾಲೇಜುಗಳಿಂದ 60 ಗೈಡ್ಸ್‌ಗಳು ಭಾಗವಹಿಸಿದ್ದರು.





* ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನ ಮಾರ್ಚ್ 11 ಮತ್ತು 12 ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ನಡೆಯಿತು. ಬೆಂಗಳೂರು ಉತ್ತರ ಜಿಲ್ಲೆಯ 30 ರೋವರ್ಸ್-ರೇಂಜರ್ಸ್ ನಗರ ಮೆರವಣಿಗೆ ಹಾಗೂ ಊಟ ಉಪಹಾರದಲ್ಲಿ ಸಹಕಾರ ನೀಡಿದರು. ಶ್ರೀ ವರ್ದಮಾನ್ ಈ ಶಿಬಿರದ ನಾಯಕತ್ವ ವಹಿಸಿದರು.

## ಬೀದರ್

ಮಾರ್ಚ್ 19 ರಂದು ಜಿಲ್ಲಾ ಸಂಸ್ಥೆ ಮತ್ತು ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಬೀದರ್ ಇಲ್ಲಿ ಮಹಿಳಾ ದಿನಾಚರಣೆಯನ್ನು ಸಂಘಟಿಸಲಾಗಿತ್ತು. ಕಾರ್ಯಕ್ರಮವನ್ನು ಶ್ರೀಮತಿ ಗುರಮ್ಮ ಸಿದ್ದಾರಡ್ಡಿ ಜಿಲ್ಲಾ ಮುಖ್ಯ ಆಯುಕ್ತರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಅಧ್ಯಕ್ಷ ಸ್ಥಾನವನ್ನು ಶ್ರೀಮತಿ ಲೀಲಾವತಿ ಚಕೋತೆ ಜಿಲ್ಲಾ ಆಯುಕ್ತರು (ಗೈಡ್ಸ್) ವಹಿಸಿಕೊಂಡಿದ್ದರು.

ಶ್ರೀಮತಿ ಮಂಗಳ ಭಗವತ್, ಜಿಲ್ಲಾ ಕೇಂದ್ರ ಪೋಸ್ಟ್ ಮಾಸ್ಟರ್ ಶ್ರೀಮತಿ ಕವಿತಾ ಹುಷಾರಿ, ಸದಸ್ಯರು, ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೀದರ್, ಶ್ರೀಮತಿ ಗೀತಾ ಗಡ್ಡೆ, ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ ಯೋಜನೆ, ತಾಲೂಕು ಪಂಚಾಯತ್ ಬೀದರ್ ಮತ್ತು ಡಾಕ್ಟರ್ ಜಯಶಾಲಿನಿ ಡಿ.ಇ.ಐ.ಸಿ. ಶ್ರೀಮತಿ ಸಂಗೀತ, ಎ.ಎಸ್.ಐ., ಬೀದರ್ ಇವರುಗಳು ಮುಖ್ಯ ಅತಿಥಿ ಸ್ಥಾನವನ್ನು ವಹಿಸಿಕೊಂಡಿದ್ದರು ಎಲ್ಲಾ ಅತಿಥಿ ಗಣ್ಯರು ವಿಭಿನ್ನವಾಗಿ ಮಹಿಳೆಯರ ಸಾಧನೆ, ಮಹಿಳೆಯರು



ಪಡುತ್ತಿರುವ ತೊಂದರೆ, ಮಹಿಳೆಯರ ಸಹನೆ ಮುಂತಾದ ವಿಷಯಗಳ ಬಗ್ಗೆ ಮಾತನಾಡಿದರು. ಶ್ರೀಮತಿ ಜಯಶೀಲಾ ಸುದರ್ಶನ್, ರಾಜ್ಯ ಪ್ರತಿನಿಧಿ ಕಾರ್ಯಕ್ರಮದ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ ಡಾ. ಭರಶೆಟ್ಟಿ, ಸಹಾಯಕ ಕಾರ್ಯದರ್ಶಿ ಶ್ರೀ ಶ್ರೀನಿವಾಸ್ ಬಿರಾದರ್ ಹಾಗೂ ಜಿಲ್ಲೆಯ ಎಲ್ಲಾ ಗೈಡ್ ಶಿಕ್ಷಕಿಯರು ಹಾಗೂ ಇತರ ಮಹಿಳೆಯರು ಉಪಸ್ಥಿತರಿದ್ದರು. ಶ್ರೀಮತಿ ನಾಗರತ್ನ ಪಾಟೀಲ್, ಜಿಲ್ಲಾ ಸಂಘಟಕಿ ಕಾರ್ಯಕ್ರಮವನ್ನು ನಿರೂಪಿಸಿದರು ಶ್ರೀಮತಿ ವೇದಮಣಿ, ಗೈಡ್ ಕ್ಯಾಪ್ಟನ್ ಅವರು ವಂದಿಸಿದರು.

## ಅಭಿನಂದನೆಗಳು



ಸರ್ಕಾರಿ ಮಹಿಳಾ ನೌಕರರ ಸಂಘದ ವತಿಯಿಂದ "ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ 08 ಮಾರ್ಚ್ 2023ರಂದು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ಶ್ರೀ ಬನಶಂಕರಿ ಕಲ್ಯಾಣ ಮಂಟಪದಲ್ಲಿ ನಡೆದ "ವಿಶ್ವ ಮಹಿಳಾ ದಿನಾಚರಣೆ" ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕು, ಕೊಕ್ರಾಡಿ ಸರ್ಕಾರಿ ಪ್ರೌಢ ಶಾಲೆಯ ಗೈಡ್ ಕ್ಯಾಪ್ಟನ್ **ಶ್ರೀಮತಿ ಅಕ್ಕಮ್ಮ,** ಎ.ಎಲ್.ಟಿ(ಗೈ) ಇವರಿಗೆ "ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಸಾಧನಾ ಪ್ರಶಸ್ತಿಗೆ" ಭಾಜನರಾಗಿರುತ್ತಾರೆ.

– ರಾಜ್ಯ ಕಾರ್ಯದರ್ಶಿ

## ಚಿಕ್ಕಮಗಳೂರು

ಫೆಬ್ರವರಿ 9 ರಿಂದ 10ರ ವರೆಗೆ ಜಿಲ್ಲಾ ಸಂಸ್ಥೆಯಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಜಿಲ್ಲಾ ಮಟ್ಟದ ನಿಪುಣ್ ಪರೀಕ್ಷಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ರೋವರ್ಸ್ ಭಾಗದ ನಾಯಕರಾಗಿ ಶ್ರೀ ರಾಜೇಶ್ ಅವಲಕ್ಕಿ ಎಎಲ್‌ಟಿ ಮತ್ತು ರೇಂಜರ್ಸ್ ಭಾಗದ ನಾಯಕರಾಗಿ ಕುಮಾರಿ ಅನುಶ್ರೀ ಹೆಬ್ಬಾರ್ ವಹಿಸಿದ್ದರು. ಜಿಲ್ಲೆಯಿಂದ ಒಟ್ಟು 36 ರೋವರ್ಸ್ 55 ರೇಂಜರ್ಸ್‌ಗಳು ಭಾಗವಹಿಸಿದ್ದರು.



* ಫೆಬ್ರವರಿ 22 ರಂದು "ಸಂಸ್ಥಾಪಕರ ದಿನಾಚರಣೆ"ಯನ್ನು ನಗರದ ಮಾಡೆಲ್ ಶಾಲೆಯಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ, ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು, ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನಗಳನ್ನು ವಿತರಿಸಲಾಯಿತು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಫಣಿರಾಜ್, ಕಾಫಿ ಬೆಳೆಗಾರರಾದ ಶ್ರೀ ವೇಣುಗೋಪಾಲ್ ನಾಯ್ಡು, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಸಂಧ್ಯಾರಾಣಿ ಹಾಗೂ ಶಾಲೆಯ ಎಲ್ಲಾ ದಳದ ನಾಯಕರುಗಳು ಭಾಗವಹಿಸಿದ್ದರು.



* ಸ್ಥಳೀಯ ಸಂಸ್ಥೆ ಚಿಕ್ಕಮಗಳೂರು ಇವರ ವತಿಯಿಂದ "ಸಂಸ್ಥಾಪಕರ ದಿನಾಚರಣೆ"ಯನ್ನು ಜಿಲ್ಲಾ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಗಾಳಿಪಟ ತಯಾರಿಸುವುದು ಮತ್ತು ಹಾರಿಸುವ ಸ್ಪರ್ಧೆ, ಸ್ಥಳದಲ್ಲಿ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಲಾಗಿತ್ತು, ನಗರದ ಎಸ್‌ಎಸ್‌ಆರ್‌ಡಿಹೆಚ್‌ಎಸ್ ಶಾಲೆ, ಜ್ಞಾನಲಕ್ಷ್ಮಿ ಶಾಲೆ, ಪ್ರೈಡ್ ಯುರೋ ಕಿಡ್ಸ್, ಇನ್ಫ್ಯಾಂಟ್ ಜೀಸಸ್ ಶಾಲೆ, ಸಂಜೀವಿನಿ ಶಾಲೆ, ವಾಸವಿ ಶಾಲೆ, ಮಹಿಳಾ ಪ್ರಥಮ ದರ್ಜೆ ಕಾಲೇಜ್‌ಗಳಲ್ಲಿ ದಳಗಳ ಹಂತದಲ್ಲಿ ಸಂಸ್ಥಾಪಕ ದಿನಾಚರಣೆಯನ್ನು ಏರ್ಪಡಿಸಲಾಗಿತ್ತು.

* ಶೃಂಗೇರಿ ತಾಲ್ಲೂಕಿನಲ್ಲಿ ಸ್ಥಳೀಯ ಸಂಸ್ಥೆಯ ಮತ್ತು ಜೆಸಿಬಿಎಂ ಕಾಲೇಜಿನ ಸಹಯೋಗದೊಂದಿಗೆ ಸಂಸ್ಥಾಪಕರ ದಿನಾಚರಣೆಯನ್ನು ಏರ್ಪಡಿಸಲಾಗಿತ್ತು. ತಾಲ್ಲೂಕಿನ ಪ್ರಮುಖ ಬೀದಿಯಲ್ಲಿ ಪಥಸಂಚಲನ ಮತ್ತು ಮಕ್ಕಳಿಗೆ ಅಡುಗೆ ತಯಾರಿಕೆ, ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಕಾಲೇಜಿನ ಪ್ರಾಂಶುಪಾಲರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ತಾಲ್ಲೂಕಿನ ಕಾರ್ಯದರ್ಶಿಗಳಾದ ಶ್ರೀ ಕೆ.ಟಿ. ಮಂಜುನಾಥ್, ಖಜಾಂಚಿಗಳಾದ ಶ್ರೀ ಸುಬ್ರಹ್ಮಣ್ಯ, ನಾಯಕರುಗಳಾಗಿ, ಕುಮಾರಿ ಅನುಶ್ರೀ, ಶ್ರೀಮತಿ ರಾಜೇಶ್ವರಿ, ಶ್ರೀಮತಿ ಆಶಾ, ಭಾಗವಹಿಸಿದ್ದರು.

## ಚಿತ್ರದುರ್ಗ

ಜಿಲ್ಲಾ ಸಂಸ್ಥೆ, ಚಿತ್ರದುರ್ಗ ವತಿಯಿಂದ ಸಂಸ್ಥಾಪಕರ ದಿನಾಚರಣೆ ಹಾಗೂ ವಿಶ್ವ ಭ್ರಾತೃತ್ವ ದಿನಾಚರಣೆಯನ್ನು ಫೆಬ್ರವರಿ 22ರಂದು Our World Our Peaceful Future, The Environment Peace And Security ಎನ್ನುವ ಧ್ಯೇಯವಾಕ್ಯದೊಂದಿಗೆ ಆಚರಿಸಲಾಯಿತು. ಜಿಲ್ಲಾ ಸಂಸ್ಥೆಯಿಂದ ನಗರದ ಪ್ರಮುಖ ಬೀದಿಗಳಲ್ಲಿ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಹಾಗೂ ದಳ ನಾಯಕ-ನಾಯಕಿಯರನ್ನು ಒಳಗೊಂಡಂತೆ ಲಾರ್ಡ್ ಬೇಡನ್ ಪೊವೆಲ್ ಹಾಗೂ ಲೇಡಿ ಬೇಡನ್ ಪೊವೆಲ್ ಅವರ ಭಾವ ಚಿತ್ರಗಳನ್ನು ಹಿಡಿದು ಶಾಂತಿಯುತವಾಗಿ ಜಾಥಾ ಕಾರ್ಯಕ್ರಮ ನಡೆಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಸಂತೋಷ್ ಕುಮಾರ್ ಪೊಲೀಸ್ ವೃತ್ತ ನಿರೀಕ್ಷಕರು, ನಗರಠಾಣೆ ಚಿತ್ರದುರ್ಗ ಇವರು ಜಾಥಾಕ್ಕೆ ಚಾಲನೆ ನೀಡಿದರು. ಜಿಲ್ಲಾ ಸಹ ಕಾರ್ಯದರ್ಶಿ ಡಾ. ರಹಮತ್ ಉಲ್ಲಾ, ಜಿಲ್ಲಾ ಖಜಾಂಚಿ ಶ್ರೀ ಅನ್ವರ್ ಪಾಷ, ರೆಡ್‌ಕ್ರಾಸ್ ಛೇರ್‌ಮನ್ ಶ್ರೀ ಮಹೇಂದ್ರನಾಥ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರೊ॥ ಗಂಗಾಧರ್, ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ವಿವಿಧ ಶಾಲೆಯ ಸ್ಕೌಟ್ಸ್-ಗೈಡ್ಸ್ ದಳಗಳು ವಿವಿಧ ಸೇವೆಗಳು ಸೈಕಲ್ ಜಾಥಾ, ಶಾಂತಿ ಜಾಥಾ, ಸರ್ವಧರ್ಮ ಪ್ರಾರ್ಥನೆ, ಸ್ವಚ್ಛತಾ ಕಾರ್ಯಕ್ರಮ, ಒಳ್ಳೆಯ ಕೆಲಸ, ಗಿಡ ನೆಡುವ ಕಾರ್ಯಕ್ರಮ ಮಾಡುವ ಮೂಲಕ ದಳ ಮಟ್ಟಗಳಲ್ಲಿ "ಸಂಸ್ಥಾಪಕರ ದಿನಾಚರಣೆ"ಯನ್ನು ಆಚರಿಸಲಾಯಿತು.





## ದಕ್ಷಿಣ ಕನ್ನಡ

ಫೆಬ್ರವರಿ 15 ರಿಂದ 17ರ ವರೆಗೆ ಸರಕಾರಿ ಪ್ರೌಢಶಾಲೆ ಶಂಭೂರು ಇಲ್ಲಿ ನಡೆದ ಜಿಲ್ಲಾ ಮಟ್ಟದ "ಕಲಿಕಾ ಹಬ್ಬ 2022-23" ಕಾರ್ಯಕ್ರಮದಲ್ಲಿ ಶಾರದಾ ಪ್ರೌಢಶಾಲೆ, ಪಾಣೆಮಂಗಳೂರು ಇಲ್ಲಿನ 10 ಸ್ಕೌಟ್ಸ್, 10 ಗೈಡ್ಸ್ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು. ನಾಯಕತ್ವವನ್ನು ಗೈಡ್ ಕ್ಯಾಪ್ಟನ್ ಶ್ರೀಮತಿ ಸುಧಾ ನಾಗೇಶ್ ಹಾಗೂ ಸ್ಕೌಟ್ ಮಾಸ್ಟರ್ ಶ್ರೀ ರವಿ ಸಿ.ಎನ್. ವಹಿಸಿದ್ದರು.

* ಸ್ಥಳೀಯ ಸಂಸ್ಥೆ, ಬೆಳ್ತಂಗಡಿಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಂಗ್ಲ ಮಾಧ್ಯಮ ಶಾಲೆ ಬೆಳ್ತಂಗಡಿಯ ಶ್ರೀ ಮಂಜುನಾಥ ದಳದ 25 ಸ್ಕೌಟ್-ಗೈಡ್ ವಿದ್ಯಾರ್ಥಿಗಳು ಶ್ರೀ ಸೋಮನಾಥೇಶ್ವರ ಕುತ್ಯಾರು ದೇವಸ್ಥಾನದ ಜಾತ್ರಾ ಮಹೋತ್ಸವದಲ್ಲಿ ಸ್ವಯಂ ಸೇವಕರಾಗಿ ಸೇವೆ ನೀಡಿದ್ದು ಇವರಿಗೆ ಭಾರತ್ ಸ್ಕೌಟ್ಸ್ ಮತ್ತು ಬೆಳ್ತಂಗಡಿಯ ಕಾರ್ಯದರ್ಶಿ, ಎಸ್‌ಡಿಎಮ್‌ನ ಸಂಯೋಜಕ ಶಿಕ್ಷಕಿ ಶ್ರೀಮತಿ ಪ್ರಮೀಳಾ ಮಾರ್ಗದರ್ಶನ ನೀಡಿರುತ್ತಾರೆ.

* ಫೆಬ್ರವರಿ 22ರಂದು ಪಂಜ ಸ್ಥಳೀಯ ಸಂಸ್ಥೆಯ ಸ.ಹಿ.ಪ್ರಾ.ಶಾಲೆ. ಮುರುಳ್ಯದಲ್ಲಿ "ವಿಶ್ವ ಚಿಂತನ ದಿನ ಮತ್ತು ವಿಶ್ವ ಭ್ರಾತೃತ್ವ ದಿನಾಚರಣೆ" ಪ್ರಯುಕ್ತ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಯಿತು. ಪ್ರಾರಂಭದಲ್ಲಿ ಎಲ್ಲಾ ಕಬ್ಸ್-ಬುಲ್‌ಬುಲ್ಸ್ ಸ್ಕೌಟ್ಸ್-ಗೈಡ್ಸ್ ಮಕ್ಕಳೆಲ್ಲ ಶಾಲೆಯ ಆವರಣ, ಶಾಲಾ ಮುಂಭಾಗದ ರಸ್ತೆಯ ಇಕ್ಕೆಲಗಳಲ್ಲಿರುವ ಕಸವನ್ನು ಸ್ವಚ್ಛಗೊಳಿಸಿದರು. ಬಳಿಕ ಸರ್ವಧರ್ಮ ಪ್ರಾರ್ಥನೆಯನ್ನು ನೆರವೇರಿಸಲಾಯಿತು. ಈ ದಿನ ಹುಟ್ಟುಹಬ್ಬ ಆಚರಿಸುತ್ತಿರುವ ಪ್ರತಿಭಾವಂತ ಸ್ಕೌಟ್ಸ್ ವಿದ್ಯಾರ್ಥಿ ರಿತಿನ್ ಅವರು ದೀಪವನ್ನು ಬೆಳಗಿಸಿದರು. ಗೈಡ್ಸ್ ಶಿಕ್ಷಕಿ ಶ್ರೀಮತಿ ಶಶಿಕಲಾರವರು ಈ ದಿನದ ಮಹತ್ವದ ಕುರಿತು ಮಾಹಿತಿ ನೀಡಿದರು. ಸಹ ಶಿಕ್ಷಕಿ ಶ್ರೀಮತಿ ಪೂರ್ಣಿಮಾ ಸ್ವಾಗತಿಸಿ, ಸಹ ಶಿಕ್ಷಕಿ ಶ್ರೀಮತಿ ಭುವನ ವಂದಿಸಿದರು. ಎಲ್ಲಾ ಅಧ್ಯಾಪಕರು ಸಹಕರಿಸಿದರು.



* ಕಾಸ್ಸಿಯ ಪ್ರೌಢ ಶಾಲೆಯ ಗೈಡ್ಸ್ ವಿದ್ಯಾರ್ಥಿನಿಯರು ಚಿಂತನಾ ದಿನಾಚರಣೆಯ ಅಂಗವಾಗಿ ಜೆಪ್ಪು ಬಪ್ಪಲ್ ಬಳಿಯ ಕರುಣಾಮಯ ಆಶ್ರಮಕ್ಕೆ ಭೇಟಿ ನೀಡಿದರು. ಆಶ್ರಮದಲ್ಲಿರುವ ಹಿರಿಯ ನಿವಾಸಿಗಳಿಗೆ ಮನೋರಂಜನ ಕಾರ್ಯಕ್ರಮವನ್ನು ನೀಡಿದರು ಮತ್ತು 30 ಕೆ.ಜಿ. ಅಕ್ಕಿಯನ್ನು ದಾನವಾಗಿ ನೀಡಿದರು. ಆಶ್ರಮದ ಟ್ರಸ್ಟಿಗಳಾದ ಶ್ರೀಯುತ ಎಲಿಯಾಸ್ ಕುವೆಲ್ಲೊ ಹಾಗೂ ಶ್ರೀಮತಿ ಸಿಲ್ವಿಯ ಆಶ್ರಮದ ಕುರಿತು



ಮಾಹಿತಿ ನೀಡಿದರು. ಶಾಲೆ ಬಳಿಯ ಪ್ರಮುಖ ಬೀದಿಗಳಲ್ಲಿ ಪರಿಸರ ಜಾಗೃತಿಯ ಘೋಷವಾಕ್ಯಗಳನ್ನು ಹಿಡಿದು, ಪರಿಸರ ಜಾಥಾ ಮಾಡಿದರು. ಶಾಲಾ ಪರಿಸರವನ್ನು ಸ್ವಚ್ಛಗೊಳಿಸಿದರು.

* ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಬ್ಬು ಕಟ್ಟೆಯಲ್ಲಿ ಚಿಂತನಾ ದಿನದ ಅಂಗವಾಗಿ ಶಾಲಾ ಪರಿಸರವನ್ನು ಸ್ವಚ್ಛತೆಗೊಳಿಸುವ ಮೂಲಕ ಹಾಗೂ ಲಾರ್ಡ್ ಬೇಡನ್ ಪೊವೆಲ್ ಹಾಗೂ ಲೇಡಿ ಬಿಪಿ ಅವರ ಜನ್ಮ ದಿನವನ್ನು ಎಲ್.ಟಿ. ಗೈಡ್ ಕ್ಯಾಪ್ಟನ್ (ಸಿ.ಆರ್.ಪಿ) ಗೀತಾ ಜುಡಿತ್ ಸಲ್ದಾನ ಕ್ಲಸ್ಟರ್ ಶಾಲೆಯಲ್ಲಿ ಗೈಡ್ಸ್ ದಳದ ವಿದ್ಯಾರ್ಥಿಗಳೊಂದಿಗೆ, ಮುಖ್ಯ ಶಿಕ್ಷಕರು ಸಹ ಶಿಕ್ಷಕರು ಹಾಗೂ ವಿದ್ಯಾರ್ಥಿಗಳೊಂದಿಗೆ ಕಾರ್ಯಕ್ರಮವನ್ನು ಹಮ್ಮಿಕೊಂಡು ಯಶಸ್ವಿಗೊಳಿಸಲಾಯಿತು ಹಾಗೂ ಎಲ್ಲಾ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು.

* ಭಾರತ್ ಸ್ಕೌಟ್ಸ್-ಗೈಡ್ಸ್ ಚಿಂತನಾ ದಿನದ ಅಂಗವಾಗಿ ಸಂತ ಅಲೋಷಿಯಸ್ ಕಾಲೇಜು ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸಂತ ಅಲೋಶಿಯಸ್ ಪ್ರೌಢ ಶಾಲೆ, ಕೊಡಿಯಾಲ್ ಬೈಲ್ ಇವರ ಸಂಯುಕ್ತ ಆಶ್ರಯದಲ್ಲಿ ಸಂತ ಅಲೋಶಿಯಸ್ ಹಿರಿಯ ಪ್ರಾಥಮಿಕ ಶಾಲೆಯ ಸಭಾಂಗಣದಲ್ಲಿ ಚಿಂತನಾ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಉಳ್ಳಾಲದ ಟಿಪ್ಪು ಸುಲ್ತಾನ್ ಪ್ರೌಢ ಶಾಲೆಯ ನಿವೃತ್ತ ಮುಖ್ಯ ಶಿಕ್ಷಕ ಹಾಗೂ ಎ.ಎಲ್.ಟಿ.(ಸ್ಕೌ) ಶ್ರೀ ಎಂ.ಎಚ್. ಮಲಾರ್ ಅವರು ಭಾಗವಹಿಸಿದ್ದರು. ಶಾಲಾ ಸಂಚಾಲಕರು ಹಾಗೂ ಸಂತ ಅಲೋಶಿಯಸ್ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾದ ವಂ.ಫಾ. ಜೆರಾಲ್ಡ್ ಫುರ್ಟಾಡೊ ಎಸ್.ಜೆ. ಅಧ್ಯಕ್ಷತೆಯನ್ನು ವಹಿಸಿದ್ದರು. ಸಂತ ಅಲೋಶಿಯಸ್ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯನಿ ಶ್ರೀಮತಿ ಜೊಸಿಟಾ ನೊರೊನ್ಹ ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀಯುತ ಲಿಯಾ ಡಿಸೋಜ, ಪ್ರೌಢ ಶಾಲಾ ಸ್ಕೌಟ್ಸ್ ಶಿಕ್ಷಕರಾದ ಶ್ರೀಯುತ ಪ್ರವೀಣ್ ಡೊನಾಲ್ಡ್ ಮೊಂತೇರೊ ಹಾಗೂ ಪ್ರಾಥಮಿಕ




ಶಾಲಾ ಸ್ಕೌಟ್ಸ್ ಶಿಕ್ಷಕರಾದ ಶ್ರೀಯುತ ಪಿ. ಪದ್ಮನಾಭರಾವ್ ಹಾಗೂ ಕಬ್ ಶಿಕ್ಷಕ ಶ್ರೀಯುತ ಪ್ರಕಾಶ್ ಹಾಗೂ ಗೈಡ್ಸ್ ಶಿಕ್ಷಕಿ ಶ್ರೀಮತಿ ದೀಪ್ ಶಿಖಾ ಇವರು ಭಾಗವಹಿಸಿದ್ದರು. ಗಣ್ಯರನ್ನು ಶಾಲಾವಾದ್ಯ ತಂಡ ಹಾಗೂ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳ ಪಥಸಂಚಲನದೊಂದಿಗೆ ಬರ ಮಾಡಿ ಕೊಳ್ಳಲಾಯಿತು. ಸರ್ವಧರ್ಮ ಪ್ರಾರ್ಥನೆ, ಚಿಂತನಾ ದಿನದ ಮಹತ್ವದ ಕುರಿತು ಭಾಷಣ ಹಾಗೂ ಕಿರುನಾಟಕದ ಮೂಲಕ ಚಿಂತನಾ ದಿನದ ಮಹತ್ವವನ್ನು ವಿದ್ಯಾರ್ಥಿಗಳು ಸಾರಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿಪತ್ರಗಳನ್ನು ವಿತರಿಸಲಾಯಿತು.

* ಫೆಬ್ರವರಿ 22 ರಂದು ಸುದಾನ ವಸತಿಯುತ ಶಾಲೆ ಪುತ್ತೂರಿನ ಸ್ಕೌಟ್ಸ್ ಮತ್ತು ಕಬ್ಸ್-ಬುಲ್‌ಬುಲ್ಸ್‌ಗಳು ಸೇರಿ ಸಂಸ್ಥಾಪಕರ ದಿನವನ್ನು ಆಚರಿಸಿದರು. ಸ್ಕೌಟ್ಸ್ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಕು. ಸಿಯಾ ಮತ್ತು ಅನೀಶ್ ಇವರು ದಿನದ ಮಹತ್ವವನ್ನು ತಿಳಿಸಿದರು. ನಂತರ ಪೀಸ್ ಮಾರ್ಚ್ ಹಾಗೂ ಸರ್ವಧರ್ಮ ಪ್ರಾರ್ಥನೆಯನ್ನು ಹಮ್ಮಿಕೊಳ್ಳಲಾಯಿತು. ಶಾಲಾ ಆವರಣ ಸ್ವಚ್ಛಗೊಳಿಸಲಾಯಿತು. ಪುತ್ತೂರಿನಲ್ಲಿರುವ ಪ್ರಜ್ಞಾ ಆಶ್ರಮಕ್ಕೆ ಭೇಟಿ ನೀಡಿ ಅಲ್ಲಿಯ ಮಕ್ಕಳಿಗೆ ಹಣ್ಣು ಹಂಪಲುಗಳನ್ನು ಹಾಗೂ ಸಿಹಿ ತಿಂಡಿಯನ್ನು ಹಂಚಲಾಯಿತು. ಕಾರ್ಯಕ್ರಮದಲ್ಲಿ ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಶೋಭಾ ನಾಗರಾಜ್ ಶಾಲಾ ಶಿಕ್ಷಕರಾದ ಶ್ರೀಮತಿ ಶೈನಿ, ಶ್ರೀಮತಿ ಗೀತಾ ಆಚಾರ್ಯ ಹಾಗೂ ಶ್ರೀಮತಿ ಸವಿತಾರವರು ಭಾಗವಹಿಸಿದರು. ಸುಮಾರು 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

* ಶ್ರೀಧರ್ಮಸ್ಥಳ ಆಂಗ್ಲ ಮಾಧ್ಯಮ ಶಾಲೆ, ಬೆಳ್ತಂಗಡಿಯ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ಶ್ರೀ ಮಂಜುನಾಥ ದಳದಿಂದ "ವಿಶ್ವ ಚಿಂತನ" ಹಾಗೂ ವಿಶ್ವ ಭಾತೃತ್ವ ದಿನಾಚರಣೆಯನ್ನು ಆಚರಿಸಲಾಯಿತು. ಧ್ವಜಾರೋಹಣದೊಂದಿಗೆ ಪ್ರಾರಂಭಿಸಿ, ಸರ್ವಧರ್ಮ ಪ್ರಾರ್ಥನೆಯನ್ನು ಮಾಡಿದರು. ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ಜಾಥದ ಮೂಲಕ ಜಾಗೃತಿ ಮೂಡಿಸಿದರು. ತದನಂತರ ಶಾಲಾ ಪರಿಸರದ ಸ್ವಚ್ಛತೆಯನ್ನು ಮಾಡಿದರು. ಶ್ರೀ ಧರ್ಮಸ್ಥಳ ಆಂಗ್ಲ ಮಾಧ್ಯಮ ಶಾಲೆ ಬೆಳ್ತಂಗಡಿಯ ಸ್ಕೌಟ್ಸ್ ಸಂಯೋಜಕ ಶಿಕ್ಷಕಿ, ಮತ್ತು ಸ್ಥಳೀಯ ಸಂಸ್ಥೆ ಬೆಳ್ತಂಗಡಿಯ ಕಾರ್ಯದರ್ಶಿ ಶ್ರೀಮತಿ ಪ್ರಮೀಳಾ ಸ್ಕೌಟ್ಸ್-ಗೈಡ್ಸ್‌ನ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಿದರು. ಹಾಗೂ ಚಿಂತನ ದಿನಾಚರಣೆಯ ಮಹತ್ವವನ್ನು ಮಕ್ಕಳಿಗೆ ವಿವರಿಸಿದರು. ಸ್ಕೌಟ್ಸ್ ಗೈಡ್ಸ್ ಸೇವೆಗೆ ಸದಾ ಸಿದ್ದರಾಗಿ, ಜೀವನದಲ್ಲಿ ಶಿಸ್ತು, ಮುಂದಾಳತ್ವ ವಹಿಸಿಕೊಳ್ಳುವುದು ಪ್ರತಿ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳ ಆದ್ಯಕರ್ತವ್ಯವೆಂದು ತಿಳಿಸಿದರು. ಈ ಸಂದರ್ಭದಲ್ಲಿ ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಹೇಮಲತಾ ಎಂ.ಆರ್. ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಬೆಳ್ತಂಗಡಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಪ್ರಮೀಳಾ ಸಂಘಟಿಸಿದ್ದರು.

* ಸಾಂದೀಪ, ನಿ. ಗ್ರಾಮೀಣ ವಿದ್ಯಾ ಸಂಸ್ಥೆಗಳು (ರಿ) ನರಿಮೊಗರು, ಪುತ್ತೂರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ಸಂಸ್ಥಾಪಕರ, ವಿಶ್ವ ಚಿಂತನಾ ದಿನ ಹಾಗೂ ವಿಶ್ವ ಭ್ರಾತೃತ್ವ ದಿನವನ್ನು ಆಚರಿಸಲಾಯಿತು.



ಸಂಸ್ಥೆಯ ಎಲ್ಲಾ ಸ್ಕೌಟ್ಸ್–ಗೈಡ್ಸ್, ಕಬ್–ಬುಲ್‌ಬುಲ್ ವಿದ್ಯಾರ್ಥಿಗಳು ಪ್ರಾರ್ಥನೆಯನ್ನು ಮಾಡಿದರು. ಶಾಲಾ ಪರಿಸರವನ್ನು ಸ್ವಚ್ಛಗೊಳಿಸಲಾಯಿತು. ವಿದ್ಯಾರ್ಥಿಗಳಿಗೆ ದಿನಕ್ಕೊಂದು ಉತ್ತಮ ಕಾರ್ಯವನ್ನು ಮಾಡಲು ತಿಳಿಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಸ್ಥೆಯ ಸಂಚಾಲಕರಾದ ಶ್ರೀ ಭಾಸ್ಕರ ಆಚಾರ್ ಹಿಂದಾರು, ಮುಖ್ಯೋಪಾಧ್ಯಾಯರಾದ ಶ್ರೀಮತಿ ಜಯಮಾಲಾ ವಿ.ಎನ್. ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಫ್ಲಾಕ್ ಲೀಡರ್ ಶ್ರೀಮತಿ ಅನಿತಾ. ಕೆ, ಕಬ್ ಮಾಸ್ಟರ್ ಶ್ರೀಮತಿ ಭವಿತಾ, ಗೈಡ್ಸ್ ಕ್ಯಾಪ್ಟನ್‌ಗಳಾದ ಶ್ರೀಮತಿ ಗೀತಾ. ಎಚ್.ಎಸ್, ಶ್ರೀಮತಿ ರೇಷ್ಮಾ, ಸ್ಕೌಟ್ಸ್ ಮಾಸ್ಟರ್ ಶ್ರೀ ಮುರಳಿಕೃಷ್ಣ, ಸಂಸ್ಥೆಯ ಶಿಕ್ಷಕ ವೃಂದ, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

* ಫೆಬ್ರವರಿ 18 ರಂದು ಮಂಗಳೂರಿನಲ್ಲಿ ನಡೆದ ಇಸ್ಕಾನ್ ರಥಯಾತ್ರೆ ಕಾರ್ಯಕ್ರಮದಲ್ಲಿ ವಿವೇಕಾನಂದ ಕಾಲೇಜ್ ಪುತ್ತೂರಿನ 08 ರೋವರ್ಸ್ ಸ್ವಯಂ ಸೇವಕರಾಗಿ ಸೇವೆಸಲ್ಲಿಸಿದರು.

* ಫೆಬ್ರವರಿ 23 ರಂದು ಬಿ.ಸಿ. ರೋಡ್‌ನಲ್ಲಿರುವ ಸೂರ್ಯವಂಶ ಸಭಾಭವನದಲ್ಲಿ 2023 ಆಗಸ್ಟ್ ತಿಂಗಳ 1 ರಿಂದ 12ರ ತನಕ ಸೌತ್ ಕೊರಿಯಾದಲ್ಲಿ ನಡೆಯಲಿರುವ 25ನೇ ವಿಶ್ವ ಜಾಂಬೂರಿಯ ಪೂರ್ವಭಾವಿ ಸಭೆ ನಡೆಯಿತು. ಕಾರ್ಯಕ್ರಮದಲ್ಲಿ ಬಂಟ್ವಾಳ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಎಂ. ತುಂಬೆ, ಜಿಲ್ಲಾ ಸಂಘಟನಾ ಆಯುಕ್ತೆ ಶ್ರೀಮತಿ ಸುನೀತಾ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್ ರಾಜ್, ಜಾಂಬೂರಿಯ ಪೂರ್ವ ತಯಾರಿಯ ಬಗ್ಗೆ ಮಾಹಿತಿಯನ್ನು ನೀಡಿದರು. ಸಭೆಯಲ್ಲಿ ಬಂಟ್ವಾಳ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ದೇವದಾಸ್, ಸ್ಕೌಟ್ ಮಾಸ್ಟರ್ ಶ್ರೀ ನಾರಾಯಣ್ ನಾಯಕ್, ಶ್ರೀಪ್ರಕಾಶ್, ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಮೈತ್ರೇಯಿ, ಶ್ರೀಮತಿ ಹರ್ಷಿತಾ, ಲೇಡಿ ಕಬ್ ಮಾಸ್ಟರ್ ಶ್ರೀಮತಿ ರೇಣುಕಾ ಭಾಗವಹಿಸುವ ವಿದ್ಯಾರ್ಥಿಗಳ ಪೋಷಕರು ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿಶ್ವ ಜಾಂಬೂರಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಒಟ್ಟು 58 ವಿದ್ಯಾರ್ಥಿಗಳು ಹಾಗೂ 12 ದಳ ನಾಯಕರುಗಳು ಒಟ್ಟು 70 ಮಂದಿ ಭಾಗವಹಿಸಲಿದ್ದಾರೆ.

* ಫೆಬ್ರವರಿ 22 ರಂದು ಮೌಂಟ್ ಕಾರ್ಮಲ್ ಸೆಂಟ್ರಲ್ ಸ್ಕೂಲ್ – ಮೇರಿಹಿಲ್, ಶಾಲೆಯ ಸಭಾಂಗಣದಲ್ಲಿ "ವಿಶ್ವ ಚಿಂತನಾ ದಿನ"ವನ್ನು ಆಚರಿಸಲಾಯಿತು. ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಭರತ್ ರಾಜ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತರು, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಅವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸರ್ವಧರ್ಮ ಪ್ರಾರ್ಥನೆ, ಯೋಗ, ಪಿರಮಿಡ್ ತಾಲೀಮುಗಳು, ನೃತ್ಯದ ಮೂಲಕ ದಿನದ ಮಹತ್ವವನ್ನು ಸಾರಿದರು. ಮುಖ್ಯ ವಿಶೇಷತೆ ಎಂದರೆ ಜಾಂಬೂರಿ ಶಿಬಿರದ ಅನುಭವಗಳನ್ನು ಹಂಚಿ, ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ ಪ್ರಮಾಣ ಪತ್ರಗಳನ್ನು ಸ್ವೀಕರಿಸಿದರು. ತದ ನಂತರ ಶಾಲಾ ಆವರಣದಲ್ಲಿ ಇನ್ವೆಸ್ಟಿಚರ್ ಸಮಾರಂಭವು ನಡೆಯಿತು.

* ಫೆಬ್ರವರಿ 22 ರಂದು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ, ಮಂಗಳೂರು ಉತ್ತರ ನಗರ ಸ್ಥಳೀಯ ಸಂಸ್ಥೆ ಹಾಗೂ ಅಶೋಕ ನಗರದ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಶಾಲೆಯಲ್ಲಿ ವಿಶ್ವ ಚಿಂತನಾ ಹಾಗೂ ವಿಶ್ವ ಭಾತೃತ್ವ ದಿನವನ್ನು ಬೇಡನ್ ಪೊವೆಲ್ ಮತ್ತು ಲೇಡಿ ಬೇಡನ್ ಪೊವೆಲ್‌ರವರ ಜನ್ಮದಿನದ ಅಂಗವಾಗಿ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ದ.ಕ ಜಿಲ್ಲಾ ಸಂಸ್ಥೆಯ ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ಜಿ. ಕಜೆ, ರಾಜ್ಯ ಸಹಾಯಕ ಸಂಘಟನಾ ಆಯುಕ್ತ ಶ್ರೀ ಭರತರಾಜ್. ಕೆ, ಶ್ರೀಮತಿ ಫ್ಲೇವಿ ಡಿ. ಸೋಜಾ ಡಿ.ಒ.ಟಿ, ಶ್ರೀ ಶ್ರೀನಿವಾಸ ಕಿಣಿ ಅಧ್ಯಕ್ಷರು ಮಂಗಳೂರು ಉತ್ತರ ನಗರ ಸ್ಥಳೀಯ ಸಂಸ್ಥೆ, ಶ್ರೀಮತಿ ಫೆಲ್ಸಿ ಝೀನ ಫರ್ನಾಂಡೀಸ್, ಜಿಲ್ಲಾ ಸಹಾಯಕ ಆಯುಕ್ತರು, ಮಂಗಳೂರು ಉತ್ತರನಗರ ಸ್ಥಳೀಯ ಸಂಸ್ಥೆ, ಶ್ರೀಮತಿ ಮೋಹಿನಿ ರಾಮಚಂದ್ರ ಮಂಗಳೂರು ಉತ್ತರನಗರ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, ಬೂಟ್ ಕ್ಯಾಂಪ್ ತರಬೇತುದಾರರಾದ ಶ್ರೀ ಶೇಕ್ ಇರ್ಫಾನ್ ಕುಂಟಲ್ಪಾಡಿ ಹಾಗೂ ಶಾಲಾ ಸಂಚಾಲಕಿ ಶ್ರೀಮತಿ ಶ್ರುತ ಜಿತೇಶ್, ಶಾಲಾ ಪ್ರಾಂಶುಪಾಲೆ ಶ್ರೀಮತಿ ಜೋಯ್ ಜೀವನ್, ಶಾಲಾ ಶೈಕ್ಷಣಿಕ ಸಂಯೋಜಕಿ ಶ್ರೀಮತಿ ಉಷಾ ಹೆಗ್ಡೆ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸರ್ವಧರ್ಮ ಪ್ರಾರ್ಥನೆ, ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಯಿತು. ಶ್ರೀ ಎಂ.ಜಿ. ಕಜೆಯವರು ವಿದ್ಯಾರ್ಥಿಗಳಿಗೆ ದಿನದ ಮಹತ್ವ ತಿಳಿಸಿದರು. ಶ್ರೀಮತಿ ಫೆಲ್ಸಿ ಅವರು ಹಾಡನ್ನು ಹಾಡಿ ಎಲ್ಲರ ಮನರಂಜಿಸಿದರು. ಪ್ರಾಂಶುಪಾಲೆ ಶುಭ ಹಾರೈಸಿದರು. ಚಿಂತನಾ ದಿನದ ಅಂಗವಾಗಿ 4 ದಿನಗಳ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದ್ದು ವಿದ್ಯಾರ್ಥಿಗಳಿಂದ ಅಡುಗೆ ಅನಿಲ ರಹಿತ ಆಹಾರ ತಯಾರಿ ಕೂಡ ಆಯೋಜಿಸಲಾಗಿತ್ತು.




* ಶ್ರೀಧರ್ಮಸ್ಥಳ ಆಂಗ್ಲ ಮಾಧ್ಯಮ ಶಾಲೆ, ಬೆಳ್ತಂಗಡಿಯ ಶ್ರೀಮಂಜುನಾಥ ದಳದ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಆರೋಗ್ಯ ಇಲಾಖೆಯಿಂದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಅಮ್ಮಿಸಿಸ್ಟರ್ ಇವರು

ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮದ ಬಗ್ಗೆ ಮಾಹಿತಿಯನ್ನು ನೀಡಿದರು. ಮಕ್ಕಳಲ್ಲಿ ಮೂಡುವಂತಹ ರಕ್ತ ಹೀನತೆ, ಆಹಾರ ಸಮತೋಲನೆ, ದಿನ ನಿತ್ಯ ಆಹಾರವನ್ನು ನಮ್ಮ ಜೀವನ ಶೈಲಿಯಲ್ಲಿ ಯಾವ ರೀತಿ ಅಳವಡಿಸಬೇಕು ಹಾಗೂ ಸ್ವಚ್ಛತೆಯ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕಿಯಾದ ಶ್ರೀಮತಿ ಹೇಮಲತಾ ಎಂ.ಆರ್. ಉಪಸ್ಥಿತರಿದ್ದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಧರ್ಮಸ್ಥಳ ಆಂಗ್ಲ ಮಾಧ್ಯಮ ಶಾಲೆಯ ಸ್ಕೌಟ್ಸ್ ಸಂಯೋಜಕ ಶಿಕ್ಷಕಿ ಶ್ರೀಮತಿ ಪ್ರಮೀಳಾ ಕಾರ್ಯಕ್ರಮ ಸಂಘಟಿಸಿ, ಸ್ವಾಗತ ಹಾಗೂ ಧನ್ಯವಾದವನ್ನು ನೀಡಿದರು.

* ಫೆಬ್ರವರಿ 25 ರಿಂದ 28ರ ವರೆಗೆ ಶ್ರೀ ಚಂಡಿಕಾ ಪರಮೇಶ್ವರಿ ದೇವಸ್ಥಾನ ಬಿ.ಸಿ. ರೋಡ್ ಇಲ್ಲಿ ನಡೆದ ಅಷ್ಟಬಂಧ ಬ್ರಹ್ಮಕಲಶೋತ್ಸವ ಮತ್ತು ವಾರ್ಷಿಕ ಜಾತ್ರಾ ಮಹೋತ್ಸವದಲ್ಲಿ ವಿವೇಕಾನಂದ ಕಾಲೇಜು ಪುತ್ತೂರಿನಿಂದ 14 ರೋವರ್ಸ್ ಹಾಗೂ ಸರಕಾರಿ ಪ್ರಥಮ ದರ್ಜೆ ಕಾಲೇಜು ಪುಂಜಾಲಕಟ್ಟೆಯಿಂದ 02 ರೋವರ್ಸ್ ಒಟ್ಟು 16 ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ನಾಲ್ಕು ದಿನ ಸೇವೆಯನ್ನು ಸಲ್ಲಿಸಿರುತ್ತಾರೆ. ಬಂಟ್ವಾಳ ಸ್ಥಳೀಯ ಸಂಸ್ಥೆಯ ಕೋಶಾಧಿಕಾರಿ ಶ್ರೀ ಐತಪ್ಪ ಪೂಜಾರಿಯವರು ನಾಯಕತ್ವವನ್ನುವಹಿಸಿದರು.

* ಮಾರ್ಚ್ 05 ರಂದು ಮಾನ್ಯ ಜಿಲ್ಲಾಧಿಕಾರಿಗಳ ನಿವಾಸದಲ್ಲಿ 2021–22ನೇ ಸಾಲಿನ ತೃತೀಯ ಚರಣ ಕಬ್, ಸುವರ್ಣಗರಿ ಬುಲ್‌ಬುಲ್ ತೃತೀಯ ಸೋಪಾನ್ ಸ್ಕೌಟ್ಸ್ ಮತ್ತು ಗೈಡ್ಸ್, ನಿಪುಣ್ ರೋವರ್ಸ್ ಮತ್ತು ರೇಂಜರ್ಸ್ ಪ್ರಶಸ್ತಿ ಪತ್ರ ಪ್ರಧಾನ ಸಮಾರಂಭ ಕಾರ್ಯಕ್ರಮ ಬಹಳ ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಅಧ್ಯಕ್ಷರು ಗೌರವಾನ್ವಿತ ಶ್ರೀ ರವಿಕುಮಾರ್‌ರವರು ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡು ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಿದರು. ಮುಖ್ಯ ಅತಿಥಿಗಳಾಗಿ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಡಾ. ಕುಮಾರ್ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಎಂ. ಮೋಹನ್ ಆಳ್ವ, ಜಿಲ್ಲಾ ಸಹಾಯಕ ಆಯುಕ್ತರು ಶ್ರೀ ನಾಗರಾಜ್ ಶೆಟ್ಟಿ, ಜಿಲ್ಲಾ ಗೈಡ್ ಆಯುಕ್ತೆ (ಪ್ರಭಾರ) ಹಾಗೂ ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಜಯವಂತಿ ಸೋನ್ಸ್, ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ಜಿ. ಕಜೆ, ಜಿಲ್ಲಾ ಕೋಶಾಧಿಕಾರಿ ಶ್ರೀ ಅನಿಲ್ ಕುಮಾರ್, ರಾಜ್ಯ ಸ್ಕೌಟ್ಸ್ ಪ್ರತಿ ನಿಧಿ ಶ್ರೀ ತ್ಯಾಗಂ ಹರೇಕಳ, ಜಿಲ್ಲಾ ಸ್ಕೌಟ್ಸ್ ಸಂಘಟನಾ ಶಿಕ್ಷಕ ಶ್ರೀ ನವೀನ್‌ಚಂದ್ರ ಅಂಬೂರಿ, ಜಿಲ್ಲಾ ಗೈಡ್ಸ್ ಸಂಘಟನಾ ಶಿಕ್ಷಕಿ ಶ್ರೀಮತಿ ಫ್ಲೇವಿ ಡಿ. ಸೋಜ, ಜಿಲ್ಲಾ ಸಹಾಯಕ ಆಯುಕ್ತರು, ಸ್ಥಳೀಯ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಕಬ್ ವಿಭಾಗದಲ್ಲಿ 199, ಬುಲ್‌ಬುಲ್ ವಿಭಾಗದಲ್ಲಿ 192, ಸ್ಕೌಟ್ಸ್ ಭಾಗದಲ್ಲಿ 161, ಗೈಡ್ಸ್ ವಿಭಾಗದಲ್ಲಿ 210, ರೋವರ್ಸ್ ವಿಭಾಗದಲ್ಲಿ 18, ರೇಂಜರ್ಸ್ ವಿಭಾಗದಲ್ಲಿ 37 ಒಟ್ಟು 817 ವಿದ್ಯಾರ್ಥಿಗಳು ಪ್ರಶಸ್ತಿ ಪತ್ರವನ್ನು ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಮಾಧ್ಯಮ ಮಿತ್ರರು, ದಳ ನಾಯಕರುಗಳು, ಪೋಷಕರು ಹಾಗೂ ಕಚೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.



* ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಹಾಗೂ ಪುತ್ತೂರು ಸ್ಥಳೀಯ ಸಂಸ್ಥೆಯ ವತಿಯಿಂದ ಮಾರ್ಚ್ 05ರಂದು ಪುತ್ತೂರಿನಲ್ಲಿ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮವು ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪುತ್ತೂರು ಸ್ಥಳೀಯ ಸಂಸ್ಥೆಯ ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀಮತಿ ಜಯಮಾಲ ವಹಿಸಿಕೊಂಡು ಮಹಿಳಾ ದಿನದ ಪ್ರಾಮುಖ್ಯತೆಯ ಬಗ್ಗೆ ಮಾತಾಡಿದರು. ಕಾರ್ಯಕ್ರಮದಲ್ಲಿ ಇಬ್ಬರು ಮಹಿಳಾ ಸಾಧಕಿಯರಾದ ಶ್ರೀಮತಿ ದೊರೆತಿಮೇರಿ ಡಿ. ಸೋಜ, ಗೈಡ್ಸ್ ಕ್ಯಾಪ್ಟನ್ ಲಿಟ್ಸ್ ಫ್ಲವರ್ ಹಿ.ಪ್ರಾ.ಶಾಲೆ, ಪುತ್ತೂರು, ಶ್ರೀಮತಿ ಶರಾವತಿ, ಯೋಗ ಶಿಕ್ಷಕಿ, ಸಮಾಜ ಸೇವಕಿ ಇವರನ್ನು ಸನ್ಮಾನಿಸಲಾಯಿತು. ಪುತ್ತೂರು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ವಿದ್ಯಾ ಆರ್. ಗೌರಿ, ಜಂಟಿ ಕಾರ್ಯದರ್ಶಿ ಶ್ರೀಮತಿ ಸುನೀತಾ, ಸರಕಾರಿ ಹಿರಿಯ ಪ್ರಾಥಮಿಕ ಬೊಳುವಾರು ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ನಿವೇದಿತಾ, ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ವೇದಾವತಿ, ಶ್ರೀಮತಿ ಮೇಬಲ್ ಡಿ. ಸೋಜ, ಶ್ರೀಮತಿ ಮೈತ್ರೇಯಿ, ಶ್ರೀಮತಿ ಗೀತಾ ಸ್ಕೌಟ್ಸ್–ಗೈಡ್ಸ್‌ಗಳು ಹಾಗೂ ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.



## ಹಾಸನ

"ಮಕ್ಕಳ ಸಂರಕ್ಷಣೆಗಾಗಿ ಭಾರತದ ಸಂವಿಧಾನದಲ್ಲಿ ಹಲವಾರು ಕಾನೂನುಗಳನ್ನು ರೂಪಿಸಲಾಗಿದ್ದು, ಈ ಬಗ್ಗೆ ಮಕ್ಕಳಿಗೆ ಅರಿವು ಉಂಟು ಮಾಡಬೇಕಾಗಿರುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ" ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು, ಹಾಸನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಬಿ.ಕೆ. ರವಿಕಾಂತ್‌ರವರು ಹೇಳಿದರು. ಅವರು ಭಾರತ್ ಸ್ಕೌಟ್ಸ್-ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ, ತಾಲ್ಲೂಕು ಸಂಸ್ಥೆ, ಹಾಸನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಸನ ಹಾಗೂ ತಾಲ್ಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹಾಸನ ಇವರುಗಳ ಸಂಯುಕ್ತಾಶ್ರಯದಲ್ಲಿ ನಗರದ ಸ್ಕೌಟ್ ಭವನದಲ್ಲಿ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗಾಗಿ ಏರ್ಪಡಿಸಲಾಗಿದ್ದ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪಕರಾದ ಲಾರ್ಡ್ ಬೇಡೆನ್ ಪೋವೆಲ್ ಹಾಗೂ ಶ್ರೀಮತಿ ಬೇಡನ್ ಪೋವೆಲ್‌ರವರ ಹುಟ್ಟು ಹಬ್ಬದ ದಿನಾಚರಣೆ ಪ್ರಯುಕ್ತ ಜಿಲ್ಲಾ ಮಟ್ಟದ ಜಾಥಾ, ಪ್ರಥಮ ಚಿಕಿತ್ಸೆ, ಆರೋಗ್ಯ ಅರಿವು ಮತ್ತು ಕಾನೂನು ಅರಿವು ಮತ್ತು ಜಾಗೃತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಥಮ ಚಿಕಿತ್ಸೆ ತರಬೇತುದಾರರಾಗಿ ನಗರದ ಖ್ಯಾತ ವೈದ್ಯರಾದ ಡಾ|| ಭಾರತಿ ರಾಜಶೇಖರ್ ಅವರು ಅಪಘಾತ ಅಥವಾ ತುರ್ತು ಸಂದರ್ಭದಲ್ಲಿ ಮತ್ತು ಹಾವು ಕಡಿತಕ್ಕೊಳಗಾದ ಸಂದರ್ಭದಲ್ಲಿ, ಮೂರ್ಛೆರೋಗ, ಹೃದಯಾಘಾತವಾದ ಸಂದರ್ಭದಲ್ಲಿ ಮೊಬೈಲ್‌ನಲ್ಲಿ ವಿಡಿಯೋ ಮಾಡುವ ಬದಲಾಗಿ ಅಪಘಾತಕ್ಕೊಳಗಾದ ವ್ಯಕ್ತಿಗಳಿಗೆ ಮಾನವೀಯ ದೃಷ್ಠಿಯಿಂದ ಪ್ರಥಮ ಚಿಕಿತ್ಸೆ ನೀಡಿ ಜನರ ಸಹಕಾರದಿಂದ, ಅವರನ್ನು ಸಾಧ್ಯವಾದಷ್ಟು ಬೇಗ ಆಸ್ಪತ್ರೆಗೆ ಸೇರಿಸುವ ಜವಾಬ್ದಾರಿಯು ಪ್ರತಿಯೊಬ್ಬ ಪ್ರಜೆಯ ಮೇಲಿರುತ್ತದೆ" ಎಂದು ಹೇಳಿದರು. ಅವರು ವಿಶೇಷವಾಗಿ ಮತ್ತು ಅತ್ಯಂತ ಸುಲಭ ರೀತಿಯಲ್ಲಿ ಮನಮುಟ್ಟುವಂತೆ ಪ್ರಥಮ ಚಿಕಿತ್ಸೆಯ ಮಜಲುಗಳನ್ನು ಪ್ರಾತ್ಯಕ್ಷಿಕೆಯ ಮುಖಾಂತರ ತಿಳಿಸಿಕೊಟ್ಟರು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಮಂಜುಳರವರು ಆರೋಗ್ಯ ಅರಿವು ಕಾರ್ಯಾಗಾರದಲ್ಲಿ ವೈಯಕ್ತಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳನ್ನು ಪ್ರಾತ್ಯಕ್ಷಿಕೆ ಮೂಲಕ ವಿವರಿಸುತ್ತಾ ಅನಾರೋಗ್ಯದಿಂದ ಉಂಟಾಗುವ ಸಮಸ್ಯೆಗಳನ್ನು ಬಗೆಹರಿಸಲು ವೈದ್ಯರ ಸಲಹೆ ಮತ್ತು ಚಿಕಿತ್ಸೆಯ ಮಹತ್ವವನ್ನು ತಿಳಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಹಾಸನ್ ಕ್ಲಬ್ ಅಧ್ಯಕ್ಷರಾದ ಶ್ರೀ ಲೋಕೇಶ್ ಹಾಗೂ ಕಾರ್ಯದರ್ಶಿ ಶ್ರೀಮತಿ ಹೇಮು ಪ್ರಸಾದ್ ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ವೈ.ಎಸ್. ವೀರಭದ್ರಪ್ಪನವರು ಮಾತನಾಡಿ "ಉತ್ತಮ ಸಮಾಜದ ನಿರ್ಮಾಣಕ್ಕಾಗಿ ಪ್ರತಿಯೊಬ್ಬರು ತಮ್ಮ ಅಳಿಲು ಸೇವೆ ಸಲ್ಲಿಸುವುದು ಆದ್ಯ ಕರ್ತವ್ಯವಾಗಿದೆ" ಎಂದು ತಿಳಿಸಿದರು. ಜಿಲ್ಲಾ ಜಂಟಿ ಕಾರ್ಯದರ್ಶಿಗಳಾದ ಶ್ರೀಮತಿ ಕಾಂಚನಮಾಲರವರು ಸ್ಕೌಟ್-ಗೈಡ್ ಚಳುವಳಿಯ ಹುಟ್ಟು ಮತ್ತು ಮಹತ್ವಗಳ ಬಗ್ಗೆ ಅರಿವನ್ನು ಮೂಡಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿಯವರ ನೇತೃತ್ವದಲ್ಲಿ 180ಕ್ಕಿಂತ ಹೆಚ್ಚು ವಿದ್ಯಾರ್ಥಿಗಳೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಜಾಥಾ ಮತ್ತು ಸ್ವಚ್ಛತಾ ಕಾರ್ಯವನ್ನು ಏರ್ಪಡಿಸಲಾಗಿತ್ತು. ನಂತರ ರಾಜ್ಯ ಪುರಸ್ಕಾರ್ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಪದಾಧಿಕಾರಿಗಳು, ಆರೋಗ್ಯ ಶಿಕ್ಷಣಾಧಿಕಾರಿಗಳು ಶ್ರೀಮತಿ ಗೀತ, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್ ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸರ್ಕಾರಿ ವಿಜ್ಞಾನ ಕಾಲೇಜಿನ ರೋವರ್ಸ್-ರೇಂಜರ್ಸ್‌ಗಳಿಂದ ಸ್ಕೌಟ್ಸ್-ಗೈಡ್ಸ್ ಸಂಸ್ಥಾಪಕರಾದ ಲಾರ್ಡ್ ಬೇಡೆನ್ ಪೋವೆಲ್‌ರವರ ಕುರಿತು ಕಿರುನಾಟಕವನ್ನು ಏರ್ಪಡಿಸಲಾಗಿತ್ತು. ಸಹಾಯಕ ರಾಜ್ಯ ಸಂಘಟನಾ ಆಯುಕ್ತೆಯಾದ ಶ್ರೀಮತಿ ಪ್ರಿಯಾಂಕ ಹೆಚ್.ಎಂ.ರವರು ಕಾರ್ಯಕ್ರಮವನ್ನು ಸಂಘಟಿಸಿದರು.

* "ತಾಯಿಯಾಗಿ, ಸಹೋದರಿಯಾಗಿ, ಗೆಳತಿಯಾಗಿ, ಹೆಂಡತಿಯಾಗಿ, ಮಗಳಾಗಿ ಇಡೀ ಜೀವನದುದ್ದಕ್ಕೂ ಪ್ರೀತಿಯ ಬದುಕನ್ನು ದೊರಕಿಸಿಕೊಡುವವಳು ಹೆಣ್ಣು. ಕುಟುಂಬ ಸದೃಢತೆ ಅಥವಾ ಸುಸ್ಥಿರ ಸಮಾಜ ನಿರ್ಮಾಣ ಮಾಡುವಲ್ಲಿ ಮಹಿಳೆಯ ಪಾತ್ರ ಶ್ಲಾಘನೀಯವಾದುದು" ಎಂದು ಆಲೂರು ಸ್ಥಳೀಯ ಸಂಸ್ಥೆಯ ಜಿಲ್ಲಾ ಸಹಾಯಕ ಆಯುಕ್ತೆ ಡಾ|| ಕವಿತಾ ಗಿರೀಶ್ ಅಭಿಪ್ರಾಯಪಟ್ಟರು. ಅವರು ಆಲೂರು ಸ್ಥಳೀಯ ಸಂಸ್ಥೆಯ ಕಣತೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ "ವಿಶ್ವ ಮಹಿಳಾ ದಿನಾಚರಣೆ"ಯಲ್ಲಿ ಪ್ರಧಾನ ಭಾಷಣಕಾರರಾಗಿ ಮಾತನಾಡಿದರು. ತಾಲ್ಲೂಕು ಪಂಚಾಯಿತಿ ಸದಸ್ಯ ಶ್ರೀ ನಟರಾಜ್ ನಾಕಲಗೂಡು ಮಾತನಾಡಿ "ಭಾರತ್ ಸ್ಕೌಟ್ಸ್-ಗೈಡ್ಸ್ ಶಿಸ್ತು, ಸಂಯಮ, ಸಹೋದರತ್ವ, ಸೇವಾ ಮನೋಭಾವ ಬಿತ್ತುವಲ್ಲಿ ಮಕ್ಕಳ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಹಿನ್ನೆಲೆಯಲ್ಲಿ ಅದರಲ್ಲೂ ವಿಶ್ವ ಮಹಿಳಾ ದಿನಾಚರಣೆ ನಿಮಿತ್ತ ಹಮ್ಮಿಕೊಂಡ ಈ ಕಾರ್ಯಕ್ರಮದಲ್ಲಿ ಹೆಣ್ಣು ಮಕ್ಕಳ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದು ಸ್ವಾಗತಾರ್ಹ ವಿಷಯವಾಗಿದೆ ಎಂದರು. ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀ ಎಚ್.ಜೆ. ಪೃಥ್ವಿರಾಮ್,





ಮುಖ್ಯ ಅತಿಥಿಯಾಗಿ ಮಾತನಾಡಿ "ನನ್ನ ವೈಯಕ್ತಿಕ ಬದುಕು ಸದೃಢಗೊಳ್ಳಲು ಭಾರತ್ ಸ್ಕೌಟ್ಸ್-ಗೈಡ್ಸ್ ಸಂಸ್ಥೆ ಕಾರಣ. ನಾನು ಸ್ಕೌಟ್ ವಿದ್ಯಾರ್ಥಿಯಾಗಿ, ರಾಜ್ಯ ಪುರಸ್ಕಾರ ಹಾಗೂ ಅಂದಿನ ರಾಷ್ಟ್ರಪತಿಯಾಗಿದ್ದ ಶ್ರೀ ಕೆ.ಆರ್. ನಾರಾಯಣ್ ಅವರಿಂದ ದೆಹಲಿಯಲ್ಲಿ ರಾಷ್ಟ್ರಪತಿ ಪುರಸ್ಕಾರ ಅವಾರ್ಡ್ ಪಡೆದ ನೆನಪುಗಳೆಲ್ಲಾ ಮರುಕಳಿಸಿದವು. ಈ ಸಂಸ್ಥೆ ವಿದ್ಯಾರ್ಥಿಗಳನ್ನು ದೈಹಿಕ ಮತ್ತು ಮಾನಸಿಕವಾಗಿ ಗಟ್ಟಿಗೊಳಿಸುವುದರ ಜೊತೆಗೆ ಜೀವನ ಕೌಶಲಗಳನ್ನು ಕಲಿಸುತ್ತದೆ. ಉತ್ತಮ ಪ್ರಜೆಯನ್ನಾಗಿ ನಿರ್ಮಾಣ ಮಾಡುತ್ತದೆ" ಎಂದರು.

* "ಮಕ್ಕಳಿಗೆ ವೈವಿಧ್ಯಮಯ ಸ್ಪರ್ಧೆಗಳನ್ನು ಹಮ್ಮಿಕೊಳ್ಳುವುದರಿಂದ ಪಠ್ಯ ಹಾಗೂ ಸಹಪಠ್ಯ ಕ್ಷೇತ್ರಗಳಲ್ಲಿ ಸಮತೋಲನ ಪ್ರಗತಿ ಕಾಣಲು ಸಾಧ್ಯ. ಸ್ಪರ್ಧಾತ್ಮಕ ಮನೋಭಾವ ವಿದ್ಯಾರ್ಥಿಗಳನ್ನು ವಿಕಸನಗೊಳಿಸುತ್ತದೆ" ಎಂದು ಶ್ರೀ ಸುರೇಶ್ ಗುರೂಜಿ ಅಭಿಪ್ರಾಯಪಟ್ಟರು. ಅವರು ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣೆ ಮಾಡಿ ಮಾತನಾಡಿದರು. ತಾಲ್ಲೂಕು ಭಾರತ್ ಸ್ಕೌಟ್ಸ್-ಗೈಡ್ಸ್ ಸ್ಥಳೀಯ ಸಂಸ್ಥೆ ಜಿಲ್ಲೆಯಲ್ಲಿ ಬಹಳ ಕ್ರಿಯಾಶೀಲವಾಗಿ ಕಾರ್ಯ ಮಾಡುತ್ತಿದೆ. ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಉತ್ತೇಜನಕಾರಿಯಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು. ಜಿಲ್ಲಾ ಉಪಾಧ್ಯಕ್ಷೆ ಶ್ರೀಮತಿ ಜಯಾರಮೇಶ್ ಮಾತನಾಡಿ ಭಾರತ್ ಸ್ಕೌಟ್ಸ್-ಗೈಡ್ಸ್ ಮಕ್ಕಳಲ್ಲಿ ದೃಢತೆ, ಆತ್ಮವಿಶ್ವಾಸವನ್ನು ಹೆಚ್ಚಿಸುವುದುರ ಜೊತೆಗೆ ಸಾಮಾಜಿಕ ಚಿಂತನೆಯನ್ನುಂಟು ಮಾಡುತ್ತದೆ. ಇಲ್ಲಿನ ಹೊರಾಂಗಣ ಚಟುವಟಿಕೆಗಳು ಶಿಕ್ಷಕರನ್ನು ಸದಾ ಕ್ರಿಯಾಶೀಲರನ್ನಾಗಿಡುವುದರ ಜೊತೆಗೆ ಸೇವಾ ಮನೋವೃತ್ತಿಯನ್ನು ಬೆಳೆಸುತ್ತದೆ" ಎಂದರು. ಜಿಲ್ಲಾ ಸಹಾಯಕ ಆಯುಕ್ತ ಶ್ರೀ ರಮೇಶ್ ಮಾತನಾಡಿ "ಪ್ರಬಂಧ ಸ್ಪರ್ಧೆಗಳು ಮಕ್ಕಳನ್ನು ಭಾವನಾತ್ಮಕವಾಗಿ, ಮಾನಸಿಕವಾಗಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಸದೃಢಗೊಳಿಸುತ್ತವೆ. ಚಿಂತನಾ ಕೌಶಲ, ಬರೆಯುವ ಕೌಶಲ, ಜೀವನ ಕೌಶಲಗಳನ್ನು ಬೆಳೆಸುತ್ತವೆ" ಎಚಿದರು.



– "ಭಾರತೀಯ ಸಂವಿಧಾನ ವಿಶೇಷವಾಗಿ ಮಕ್ಕಳ ಸರ್ವತೋಮುಖ ಬೆಳವಣಿಗೆ ಹಾಗೂ ಸಂರಕ್ಷಣೆಯ ಹಿನ್ನೆಲೆಯಲ್ಲಿ ಸಾಕಷ್ಟು ಕಾನೂನುಗಳನ್ನು ಜಾರಿಗೆ ತಂದಿದೆ. ಮಕ್ಕಳ ಹಕ್ಕುಗಳನ್ನು ರಕ್ಷಿಸಿ ಪೋಷಿಸುವುದು ಪ್ರತಿಯೊಬ್ಬ ಭಾರತೀಯ ಪ್ರಜೆಯ ಕರ್ತವ್ಯವಾಗಿದೆ" ಎಂದು ಹಾಸನ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಹಿರಿಯ ನ್ಯಾಯಾಧೀಶರಾದ ಶ್ರೀ ಬಿ.ಕೆ.



ರವಿಕಾಂತ್ ಅಭಿಪ್ರಾಯಪಟ್ಟರು. ಅವರು ಆಲೂರು ತಾಲ್ಲೂಕು ಸ್ಥಳೀಯ ಸಂಸ್ಥೆ ಪಟ್ಟಣದ ನೂತನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕಾನೂನು ಅರಿವು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಆಲೂರು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಎಸ್. ರುದ್ರೇಶ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ "ಮಕ್ಕಳ ಹಕ್ಕುಗಳ ಉಲ್ಲಂಘನೆಯಿಂದ ಬೆಳೆಯುವ ಸಿರಿ ಮೊಳಕೆಯಲ್ಲಿ ಚಿವುಟಿದಂತಾಗಿ ಭವಿಷ್ಯವೇ ಕಮರಿಹೋಗುತ್ತಿದೆ. ಭವ್ಯ ಭಾರತದ ಭವಿಷ್ಯದ ನಿರ್ಮಾತೃಗಳಾದ ಮಕ್ಕಳ ಅಭಿವೃದ್ಧಿಯಲ್ಲಿ ಶಿಕ್ಷಣ ಬಹಳ ಮುಖ್ಯ" ಎಂದರು. ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಎಂ.ಬಿ. ಗಿರಿಜಾಂಬಿಕರವರು ಮಾತನಾಡಿ "ಮಕ್ಕಳ ಹಕ್ಕುಗಳ ಸಂರಕ್ಷಣೆಯ ಹಿನ್ನೆಲೆಯಲ್ಲಿ ಪೋಕ್ಸೋ ಕಾಯಿದೆ ಬಂದಿದೆ. ಇಂದಿನ ಮಕ್ಕಳಿಗೆ ಗುಡ್ ಟಚ್ ಹಾಗೂ ಬ್ಯಾಡ್ ಟಚ್ ಬಗ್ಗೆ ಅಗತ್ಯವಾಗಿ ಅರಿವಿರಬೇಕು" ಎಂದರು. ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ಎಂ. ಬಾಲಕೃಷ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಎಚ್.ಜಿ. ಕಾಂಚನಮಾಲ, ತಾಲ್ಲೂಕು ಕಾರ್ಯದರ್ಶಿ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್ ಮುಂತಾದವರು ಮಾತನಾಡಿದರು. ತಾಲ್ಲೂಕು ಖಜಾಂಚಿ ಶ್ರೀಮತಿ ಬಿ.ಎಸ್. ಹಿಮ ನಿರೂಪಿಸಿದರು, ಸಹಕಾರ್ಯದರ್ಶಿ ಶ್ರೀ ಕುಮಾರ್ ಎಚ್.ಡಿ. ಸ್ವಾಗತಿಸಿದರು, ಕಬ್ ಮಾಸ್ಟರ್ ಶ್ರೀ ವೆಂಕಟರಂಗಯ್ಯ ವಂದಿಸಿದರು.

* ಸ್ತ್ರೀ ಮಾನವಕುಲದ ಹೊಂಬೆಳಕು, ಹುಟ್ಟಿನಿಂದ ಚಟ್ಟದವರೆಗೂ ಸ್ತ್ರೀ ಶಕ್ತಿಯಾಗಿ, ಸ್ಫೂರ್ತಿಯಾಗಿ ನಮ್ಮನ್ನು ಉದ್ಧರಿಸುತ್ತಾಳೆ ಎಂದು ಸಮಾಜ ಸೇವಕ ಪಿ. ಆರ್. ಕೇಶವಮೂರ್ತಿ ಅಭಿಪ್ರಾಯಪಟ್ಟರು.

ಅವರು ಮಾಣಿಕ್ಯ ಪ್ರಕಾಶನ (ರಿ.), ಹಾಸನ ಸಂಸ್ಥೆಯು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ಹಾಸನ ಇವರ ಸಹಕಾರದಲ್ಲಿ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಮಹಿಳಾ ದಿನಾಚರಣೆ, ಕೃತಿಗಳ ಲೋಕಾರ್ಪಣೆ ಹಾಗೂ ಮಹಿಳಾ ಕವಿಗೋಷ್ಠಿಯನ್ನು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿ ಮಾತನಾಡಿ ಆರೋಗ್ಯಪೂರ್ಣ ಸಮಾಜ ನಿರ್ಮಾಣದಲ್ಲಿ ಸ್ತ್ರೀ ಮಹತ್ವದ ಪಾತ್ರ ವಹಿಸುತ್ತಾಳೆ ಎಂದರು.

ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ವೈ.ಎಸ್. ವೀರಭದ್ರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಸಂಸಾರ ಸಮತೋಲನವಾಗಿ ಸರಿದೂಗಿಸಿಕೊಂಡು ಹೋಗುವ ಗುಣ ಇರೋದು ಹೆಣ್ಣಿಗೆ ಮಾತ್ರ. ಅಪ್ಪ, ಅಮ್ಮ, ಅಣ್ಣ, ತಮ್ಮ, ಅಕ್ಕ, ತಂಗಿ, ಗಂಡ, ಮಕ್ಕಳು,

ಅತ್ತೆ, ಮಾವ, ಮೈದುನ, ನಾದಿನಿ ಹೀಗೆ ಅನೇಕ ಸಂಬಂಧಗಳೊಡಗೂಡಿ ಪ್ರೀತಿಯ ಅರಮನೆ ಕಟ್ಟುವ ಸಾಮರ್ಥ್ಯವಿರುವುದು ಹೆಣ್ಣಿಗೆ. ಅಂತಹ ಮಹಿಳಾ ದಿನಾಚರಣೆಯನ್ನು ಸಾಧಕ ಮಹಿಳಾಮಣಿಗಳು, ಸಾಹಿತ್ಯಲೋಕದ ಗಣ್ಯರೊಡಗೂಡಿ ಮಹಿಳಾ ದಿನಾಚರಣೆ ಮಾಡುತ್ತಿರುವುದು ಔಚಿತ್ಯಪೂರ್ಣ ಕಾರ್ಯವಾಗಿದೆ ಎಂದರು.

## ಹಾವೇರಿ

ಫೆಬ್ರವರಿ 9 ರಂದು ಗುರುಕುಲ ಇಂಟರ ನ್ಯಾಷನಲ್ ಪ್ರೈಮರಿ ಸ್ಕೂಲ್ ಮತ್ತು ಅಂಜುಮನ್ ಶಿಕ್ಷಣ ಸಂಸ್ಥೆಯ 10 ಜನ ಶಿಕ್ಷಕರಿಗೆ ಮತ್ತು 18 ಜನ ಶಿಕ್ಷಕಿಯರಿಗೆ ಪ್ರಾರಂಭಿಕ ತರಬೇತಿಯನ್ನು ನೀಡಲಾಯಿತು. ಸ್ಕೌಟ್ಸ್ ವಿಭಾಗದ ನಾಯಕರಾಗಿ ಶ್ರೀ ವಿದ್ಯಾಧರ ಕುತನಿ ಎಎಲ್‌ಟಿ (ಸ್ಕೌಟ್) ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಮಮತಾ ಶಿವಂತ ಎಎಲ್‌ಟಿ (ಗೈಡ್) ಭಾಗವಹಿಸಿದ್ದರು.

* ಫೆಬ್ರವರಿ 17 ರಂದು ತಾಲ್ಲೂಕು ಮಟ್ಟದ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆಯ ಆಶ್ರಯದಲ್ಲಿ ಸ್ಕೌಟ್ ಮಾಸ್ಟರ್ಸ್ ಮತ್ತು ಗೈಡ್ಸ್ ಕ್ಯಾಪ್ಟನ್ ಅವರಿಗೆ ಆರೋಗ್ಯ ಜಾಗೃತಿ ಕಾರ್ಯಕ್ರಮವನ್ನು ಜಿಲ್ಲಾ ಗುರುಭವನದಲ್ಲಿ ಜರುಗಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಪ್ರಭಾಕರ ಕುಂದುರ, ಗಿಡಕ್ಕೆ ನೀರನ್ನು ಹಾಕುವುದರೊಂದಿಗೆ ನೆರವೇರಿಸಿದರು.



ಕಾರ್ಯಕ್ರಮದಲ್ಲಿ ಶ್ರೀ ಎನ್.ಆಯ್. ಇಚ್ಚಂಗಿ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು, ಶ್ರೀ ಆರ್.ಜಿ. ಮೇಟಿ, ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು, ಶ್ರೀ ಚೆನ್ನಪ್ಪ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ಡಾ. ಮಾಲಿನಿ, ಶ್ರೀ ಕೆ.ಎಸ್. ಕುಂದಗೋಳ, ಆರೋಗ್ಯಾಧಿಕಾರಿಗಳು ಹಾಜರಿದ್ದರು. ಆರೋಗ್ಯ ಇಲಾಖೆಯ ಸಿಬ್ಬಂದಿಯವರು ರೋಗಗಳ ಮುಂಜಾಗ್ರತೆ, ತಡಗಟ್ಟುವ ಕ್ರಮಗಳು, ರೋಗಗಳನ್ನು ಹತೋಟಿಗೆ ತರುವುದು ಈ ಬಗ್ಗೆ ಮಾಹಿತಿ ನೀಡಿದರು. ಮಾಹಿತಿ ಶಿಬಿರದಲ್ಲಿ 40 ಜನ ಸ್ಕೌಟ್ ಮಾಸ್ಟರ್ಸ್ ಮತ್ತು ಗೈಡ್ಸ್ ಕ್ಯಾಪ್ಟನ್ ಹಾಜರಿದ್ದರು. ಕಾರ್ಯಕ್ರಮದ ನಿರೂಪಣೆ ಮತ್ತು ಸ್ವಾಗತವನ್ನು ಶ್ರೀ ಎ.ಎಲ್. ಶೇಖರ ಸೂರಣಗಿಯವರು ಮಾಡಿದರು. ಶ್ರೀಮತಿ ಶಾಂತಾ ಬಾರ್ಕಿ ವಂದನಾರ್ಪಣೆ ಮಾಡಿದರು.

* ಫೆಬ್ರವರಿ 22 ರಂದು ಜಿಲ್ಲಾ ಸಂಸ್ಥೆ ವತಿಯಿಂದ ಸ್ಕೌಟ್ ಚಳವಳಿಯ ಸಂಸ್ಥಾಪಕರು ರಾಬರ್ಟ್ ಸ್ಟೀಫನ್‌ಸನ್ ಸ್ಮಿತ್ ಬೇಡನ್ ಪೋವೆಲ್‌ರವರ ಜನ್ಮ ದಿನಾಚರಣೆಯನ್ನು ಜಿಲ್ಲಾ ಸಂಸ್ಥೆಯ ಕಾರ್ಯಾಲಯದಲ್ಲಿ



ಆಚರಿಸಲಾಯಿತು. ಲಾರ್ಡ್ ಬೆಡನ್ ಪೋವೆಲ್‌ರವರ ಆತ್ಮ ಚರಿತ್ರೆ ಬಗ್ಗೆ ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿ ಬಗ್ಗೆ ಶ್ರೀ ಎಲ್. ಶೇಖಸೂರಣಗಿ ಮಾತನಾಡಿದರು. ಶ್ರೀಮತಿ ಗೀತಾ ಜಂಬಗಿ, ಜಿಲ್ಲಾ ಗೈಡ್ಸ್ ಆಯುಕ್ತರು ಮಾತನಾಡಿದರು. ಶ್ರೀ ಆರ್.ಆರ್. ಕಾಶಪ್ಪನವರ ಜಿಲ್ಲಾ ಕಾರ್ಯದರ್ಶಿಯವರು ಮಾತನಾಡಿದರು. ಶ್ರೀ ಮಲ್ಲೇಶಪ್ಪ ಕೆ.ಟಿ.ರವರು ಸ್ವಾಗತ ಮಾಡಿದರು. ಶ್ರೀಮತಿ ಎಂ.ಜಿ. ತಿಮ್ಮಾಪೂರ ಗೈಡ್ಸ್ ಕ್ಯಾಪ್ಟನ್ ವಂದನಾರ್ಪಣೆ ಮಾಡಿದರು. ಹಾನಗಲ್ಲ ತಾಲ್ಲೂಕಿನಲ್ಲಿ ಶ್ರೀ ಹುರಳಿ ಬಿ.ಇ.ಓ.ರವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಭಾವಚಿತ್ರಕ್ಕೆ ಹೂಮಾಲೆ ಹಾಕಿ ನಮನ ಸಲ್ಲಿಸಿದರು. ಹಾವೇರಿ ತಾಲ್ಲೂಕಿನ ಶ್ರೀ ಮೌನೇಶ್ ಬಡಿಗೇರ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಭಾವಚಿತ್ರಕ್ಕೆ ಹೂಗಳನ್ನು ಹಾಕಿ ನಮನ ಸಲ್ಲಿಸಿ, ಮಾತನಾಡಿದರು. ಹಿರೇಕೆರೂರ ತಾಲ್ಲೂಕಿನಲ್ಲಿ ತಾಲ್ಲೂಕು ಸಂಸ್ಥೆಯ ಪದಾಧಿಕಾರಿಗಳು ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಎಸ್.ಎನ್.ಕೆ. ಪ್ರಾಥಮಿಕ ಶಾಲೆಯಲ್ಲಿ ಆಚರಣೆ ಮಾಡಿದರು. ರಾಣೆಬೆನ್ನೂರು ತಾಲ್ಲೂಕಿನಲ್ಲಿ ತಾಲ್ಲೂಕು ಸಂಸ್ಥೆಯ ಪದಾಧಿಕಾರಿಗಳು, ಸ್ಕೌಟ್ಸ್ ಮಾಸ್ಟರ್ ಮತ್ತು ಗೈಡ್ಸ್ ಕ್ಯಾಪ್ಟನ್‌ರು ಮತ್ತು ಮಕ್ಕಳು ಸೇರಿ ಬೇಡನ್ ಪೋವೆಲ್‌ರವರ ದಿನಾಚರಣೆಯನ್ನು ಆಚರಣೆ ಮಾಡಿದರು. ಬ್ಯಾಡಗಿ ತಾಲ್ಲೂಕಿನ ಜಗದ್ಗುರು ಪ್ರೌಢ ಶಾಲೆಯಲ್ಲಿ ಕಾರ್ಯದರ್ಶಿಗಳು ಮತ್ತು ಪದಾಧಿಕಾರಿಗಳು ಆಚರಣೆ ಮಾಡಿದರು ಸವಣೂರು ತಾಲ್ಲೂಕು ಸಂಸ್ಥೆಯ ಪದಾಧಿಕಾರಿಗಳು ಮತ್ತು ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ಆಚರಣೆ ಮಾಡಲಾಯಿತು.

## ಕಾರವಾರ (ಉ.ಕ.)

ಫೆಬ್ರವರಿ 22 ರಂದು ಹೊನ್ನಾವರದ ಜಿಲ್ಲಾ ಕಛೇರಿಯಲ್ಲಿ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು. ಜಿಲ್ಲಾ ಮುಖ್ಯ ಆಯುಕ್ತರು ಡಾಕ್ಟರ್ ಜಿ.ಜಿ. ಸಭಾಹಿತ, ಕಾರ್ಯದರ್ಶಿ ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಶೋಭಾ ಕುಲಕರ್ಣಿ, ಜಿಲ್ಲಾ ಕರ್ಯರ್ಶಿ



ಶ್ರೀ ಆರ್.ಟಿ. ಹೆಬ್ಬಾರ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ಶ್ರೀ ಕರಿಸಿದ್ದಪ್ಪ ಉಪಸ್ಥಿತರಿದ್ದರು.

* ಫೆಬ್ರವರಿ 22 ರಂದು ಹೊನ್ನಾವರದ ಎಂ.ಪಿ.ಇ. ಸೊಸೈಟಿಯ ಸೆಂಟ್ರಲ್ ಶಾಲೆಯಲ್ಲಿ "ವಿಶ್ವ ಚಿಂತನಾ" ಹಾಗೂ "ವಿಶ್ವಭ್ರಾತೃತ್ವ ದಿನಾಚರಣೆ"ಯನ್ನು ಸ್ಕೌಟ್-ಗೈಡ್ ಹಾಗೂ ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕರು ಸೇರಿ ಆಚರಿಸಿದರು. ಪ್ರಾಂಶುಪಾಲರಾದ ಶ್ರೀಮತಿ ಕಾಂತಿ ಭಟ್ ಈ ದಿನಾಚರಣೆಯ ಮತ್ತು ಧ್ಯೇಯ ವಾಕ್ಯದ ಮಹತ್ವವನ್ನು ವಿವರಿಸಿ ಮುಂದಿನ ದಿನಗಳಲ್ಲಿ ಪರಿಸರ ಸ್ನೇಹಿ ಚಟುವಟಿಕೆಗಳು ಮತ್ತು ಒಳ್ಳೆಯ ಕೆಲಸ ಮಾಡುವ ಅಭ್ಯಾಸ ರೂಢಿಸಿಕೊಂಡು ಉತ್ತಮ ಸಾಧನೆ ಮಾಡುವಂತೆ ಸೂಚಿಸಿದರು. ಸ್ಕೌಟ್ ಮಾಸ್ಟರ್ ಡಿಸೋಜ ಅವರು ಲಾರ್ಡ್ ಬೇಡನ್ ಪಾವೆಲರ ಜೀವನ ಸಾಧನೆಗಳ ಪರಿಚಯ ಮಾಡಿಸಿದರು. ಗೈಡ್ ಕ್ಯಾಪ್ಟನ್ ಶ್ರೀಮತಿ ವನಿತಾ ನಾಯ್ಕ ಮಾರ್ಗರ್ಶನದಲ್ಲಿ ಗೈಡ್ ಕುಮಾರಿ ಅಮೃತಾ ಕಾರ್ಯಕ್ರಮ ನಿರೂಪಿಸಿದರು. ಸ್ಕೌಟ್-ಗೈಡ್ ವಿದ್ಯಾರ್ಥಿಗಳು ಸ್ವಚ್ಛತಾ ಕಾರ್ಯಕ್ರಮ ಮತ್ತು ಗಿಡಗಳಿಗೆ ನೀರು ಹಾಕುವ ಮೂಲಕ ಗುಡ್ ಟರ್ನ್ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು.



* ಫೆಬ್ರವರಿ 22 ರಂದು ಸರಕಾರಿ ಪ್ರೌಢಶಾಲೆ ಮುಂಡಳ್ಳಿ, ಭಟ್ಕಳ ತಾಲ್ಲೂಕಿನಲ್ಲಿ "ಸಂಸ್ಥಾಪಕರ ದಿನ" ಮತ್ತು "ವಿಶ್ವ ಚಿಂತನಾ" ಹಾಗೂ "ವಿಶ್ವ ಭ್ರಾತೃತ್ವ" ದಿನಾಚರಣೆಯನ್ನು ಶಾಲೆಯ ಮುಖ್ಯೋಪಾಧ್ಯಾಯರು ಎಲ್ಲ ಶಿಕ್ಷಕ ಮಿತ್ರರು ಹಾಗೂ ಸ್ಕೌಟ್-ಗೈಡ್ಸ್‌ಗಳು ಹಾಗೂ ಶಾಲೆಯ ಎಲ್ಲ ವಿದ್ಯಾರ್ಥಿಗಳು ಸೇರಿ ಆಚರಿಸಲಾಯಿತು. ಮುಖ್ಯೋಪಾಧ್ಯಾಯರಾದ ಶ್ರೀ ದೇವು ಟಿ. ಗೌಡರವರು ಲಾರ್ಡ್ ಬೇಡನ್ ಪೊವೆಲ್ ಭಾವಚಿತ್ರಕ್ಕೆ ಪುಷ್ಪ ಅರ್ಪಿಸುವುದರ ಮೂಲಕ ಈ ದಿನಾಚರಣೆಯ ಮಹತ್ವವನ್ನು ವಿವರಿಸಿದರು. ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಸ್ಕೌಟಿನ ಮಹತ್ವವನ್ನು ಅರಿತು ನಡೆಯಬೇಕು. ನೀವು ನಾಡಿನ ಒಬ್ಬ ಉತ್ತಮ ನಾಗರಿಕರಾಗಲು ಸಿದ್ಧರಾಗಿ. ಬೇಡನ್ ಪೊವೆಲ್‌ರವರ ಒಳ್ಳೆಯ ಉದ್ದೇಶಗಳನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿರಿ ಎಂದು ಶುಭ ಸಂದೇಶವನ್ನು ನೀಡಿದರು. ನಂತರ ಶಾಲೆಯ ಸ್ಕೌಟ್ಸ್ ಮಾಸ್ಟರ್ ಶ್ರೀ ಚನ್ನವೀರಪ್ಪ ಆರ್. ಹೊಸಮನಿ ಇವರು ಲಾರ್ಡ್ ಬೇಡನ್ ಪೊವೆಲ್‌ರವರ ಜೀವನ ಚರಿತ್ರೆ ವಿವರಿಸಿ ಹೇಳಿದರು. ಪೊವೆಲ್‌ರವರ ಹುಟ್ಟು, ಬಾಲ್ಯದ ಜೀವನ, ಅವರ ಹವ್ಯಾಸಗಳು, ಅವರ ಗುರಿ, ಸಾಧನೆಗಳು, ಸ್ಕೌಟ್ ಚಳುವಳಿಯ ಪ್ರಾರಂಭ, ಈಗ ಪ್ರಪಂಚದಾದ್ಯಂತ ಸ್ಕೌಟ್-ಗೈಡ್ಸ್ ಇದರ ವಿಸ್ತಾರ ಮುಖ್ಯವಾಗಿ ಸ್ಕೌಟಿನ ಧ್ಯೇಯೋದ್ದೇಶಗಳನ್ನು ಸವಿಸ್ತಾರವಾಗಿ ಮಕ್ಕಳಿಗೆ ತಿಳಿಹೇಳಿದರು. ಈ ಕಾರ್ಯಕ್ರಮದಲ್ಲಿ ಗೈಡ್ಸ್ ಟೀಚರ್ ಶ್ರೀಮತಿ ಉರ್ಮಿಳಾ ಮೇಸ್ತ ಹಾಗೂ ಶಾಲೆಯ ಎಲ್ಲ ಶಿಕ್ಷಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶ್ರೀಮತಿ ಮಂಜುಳಾ ಶಿರೂರಕರ ಅವರು ವಂದಿಸಿದರು.

* ಕುಮಟ ಸ್ಥಳೀಯ ಸಂಸ್ಥೆಯ ಪ್ರಗತಿ ವಿದ್ಯಾಲಯ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸ್ಕೌಟ್ಸ್-ಗೈಡ್ಸ್‌ನ ಸಂಸ್ಥಾಪಕರ ದಿನದ ಅಂಗವಾಗಿ "ವಿಶ್ವ ಚಿಂತನಾ" ಮತ್ತು "ವಿಶ್ವ ಭ್ರಾತೃತ್ವ ದಿನ"ವನ್ನಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ದಿನದ ಧ್ಯೇಯವಾಕ್ಯದ ಕುರಿತು ವಿಸ್ತೃತವಾಗಿ ಶಿಕ್ಷಕ ಶ್ರೀ ಮನೋಹರ ಹರಿಕಂತ್ರ ಮಾತನಾಡಿ, ವಿಶ್ವಶಾಂತಿ, ಭದ್ರತೆ ಮತ್ತು ಪರಿಸರ ಸಂರಕ್ಷಣೆಯ ಅಗತ್ಯತೆಯ ಕುರಿತು ವಿದ್ಯಾರ್ಥಿಗಳ ಗಮನ ಸೆಳೆದರು. ಇದೇ ಸಂರ್ಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲಾ ಮುಖ್ಯೋಪಾಧ್ಯಾಪಕರಾದ ಶ್ರೀ ವಿವೇಕ ಆಚಾರಿ ಮಾತನಾಡಿ, ಸ್ಕೌಟ್-ಗೈಡ್ ಸಂಸ್ಥೆ ಇಂದು ಶಾಲಾ ಕಾಲೇಜುಗಳಲ್ಲಿ ಉತ್ತಮ ಕಾರ್ಯಕ್ರಮ ಹಮ್ಮಿಕೊಂಡು ಇಡೀ ವಿಶ್ವದ ಗಮನ ಸೆಳೆದಿದೆ. ವಿದ್ಯಾರ್ಥಿಗಳು ಈ ಕಾರ್ಯದಿಂದ ಪ್ರೇರಣೆಗೊಂಡು, ಒಳ್ಳೆಯ ಕೆಲಸ ಕಾರ್ಯಗಳಿಂದ ಉತ್ತಮ ವಿದ್ಯಾರ್ಥಿಗಳಾಗುವಂತೆ ಕರೆ ನೀಡಿದರು. ವೇದಿಕೆಯಲ್ಲಿ ಶಿಕ್ಷಕಿ ಕುಮಾರಿ ತೃಪ್ತಿ ಗುನಗಾ ಹಾಗೂ ಕುಮಾರಿ ಪೂರ್ಣಿಮಾ ಮಡಿವಾಳ ಉಪಸ್ಥಿತರಿದ್ದರು. ನಂತರ ಸ್ಕೌಟ್ಸ್-ಗೈಡ್ಸ್‌ಗಳು ಶಾಲೆಯ ಸುತ್ತಮುತ್ತ ಸ್ವಚ್ಛತಾ ಕಾರ್ಯ ಕೈಗೊಂಡರು. ಅಲ್ಲದೆ ಗಿಡಗಳಿಗೆ ನೀರುಣಿಸಿ ಒಳ್ಳೆಯ ಕಾರ್ಯದಲ್ಲಿ ಪಾಲ್ಗೊಂಡರು.

* ಭಟ್ಕಳ ಆರ್.ಎನ್.ಎಸ್.ಬಿ.ಎಸ್.ಸಿ. ಶಾಲೆಯ ವತಿಯಿಂದ ಹಮ್ಮಿಕೊಂಡಿದ್ದ ಸಂಸ್ಥಾಪಕರ ದಿನಾಚರಣೆಯ ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರು ಡಾಕ್ಟರ್ ಜಿ.ಜಿ. ಸಭಾಹಿತ, ಜಿಲ್ಲಾ ಆಯುಕ್ತರು ಗೈಡ್ ಶ್ರೀಮತಿ ಶೋಭಾ ಕುಲರ್ಣಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಆರ್.ಟಿ. ಹೆಬ್ಬಾರ್, ಜಿಲ್ಲಾ ತರಬೇತಿ ಆಯುಕ್ತರು ಗೈಡ್ ಶ್ರೀಮತಿ ಬೇಬಿ ಪಡಿಯಾರ್, ಸಹಾಯಕ ರಾಜ್ಯ ಸಂಘಟನಾ ಆಯುಕ್ತರು ಶ್ರೀ ಕರಿಸಿದ್ದಪ್ಪ ಟಿ. ಹಾಗೂ ಇನ್ನಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಫೆಬ್ರವರಿ 24 ರಂದು ಜಿಲ್ಲಾ ಕಾರವಾರ ಸಂಸ್ಥೆ ವತಿಯಿಂದ ಹೊನ್ನಾವರದ ಎಂ.ಪಿ.ಇ. ಸೊಸೈಟಿಯ ಕೇಂದ್ರೀಯ ವಿದ್ಯಾಲಯದಲ್ಲಿ ತೃತೀಯ ಸೋಪಾನ ಪರೀಕ್ಷಾ ಶಿಬಿರವನ್ನು ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಮುಖ್ಯ ಆಯುಕ್ತರು ಡಾಕ್ಟರ್ ಜಿ.ಜಿ. ಸಭಾಹಿತರವರು ಕಾರ್ಯಕ್ರಮದ ಬಗ್ಗೆ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳನ್ನು ಕಂಡು ಸಂತೋಷವಾಗಿದೆ. ಇದೇ ರೀತಿ ರಾಜ್ಯ ಪುರಸ್ಕಾರ ರಾಷ್ಟ್ರಪತಿ ಪುರಸ್ಕಾರ ಪ್ರಶಸ್ತಿಗಳನ್ನು ಪಡೆದುಕೊಳ್ಳುವುದು ನಮ್ಮ ಜಿಲ್ಲೆಗೆ ಹೆಮ್ಮೆ ಪಡುವ ವಿಚಾರವಾಗಿದೆ. ಈ ಬಗ್ಗೆ ಜಿಲ್ಲೆಯಿಂದ ಎಲ್ಲ

ರೀತಿಯ ಸಹಾಯ, ಸಹಕಾರಗಳನ್ನು ನೀಡಲಾಗುವುದು ಎಂದು ತಿಳಿಸಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಕಾರ್ಯದರ್ಶಿ ಶ್ರೀ ಆರ್.ಟಿ. ಹೆಬ್ಬಾರ್, ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಶೋಭಾ ಕುಲಕರ್ಣಿ, ಜಿಲ್ಲಾ ತರಬೇತಿ ಆಯುಕ್ತರು (ಗೈಡ್) ಶ್ರೀಮತಿ ಬೇಬಿ ಪಡಿಯಾರ ಪರೀಕ್ಷಾರ್ಥಿಗಳಿಗೆ ಶುಭ ಕೋರಿದರು. ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲರು ಶ್ರೀಮತಿ ಕಾಂತಿ ಭಟ್ ಸ್ಕೌಟ್–ಗೈಡ್ ಧ್ಯೇಯ ಉದ್ದೇಶ, ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಾಧನೆ ಮಾಡಬೇಕೆಂಬ ಸಂದೇಶ ನೀಡಿದರು. ಜಿಲ್ಲಾ ಖಜಾಂಚಿ ಶ್ರೀ ಜಿ.ಆರ್. ಮಡಿವಾಳರವರು ವಂದನಾರ್ಪಣೆ ಮಾಡಿದರು. ಸುಮಾರು 181 ಕಬ್, ಬುಲ್–ಬುಲ್, ಸ್ಕೌಟ್–ಗೈಡ್ ವಿದ್ಯಾರ್ಥಿಗಳು, ಸ್ಕೌಟ್–ಗೈಡ್ ಶಿಕ್ಷಕರು ಭಾಗವಹಿಸಿದ್ದರು.

* ಮಾರ್ಚ್ 03 ರಂದು ಭಾರತ್ ಸ್ಕೌಟ್–ಗೈಡ್ಸ್ ಕರ್ನಾಟಕ ಜಿಲ್ಲಾ ಸಂಸ್ಥೆ ಕಾರವಾರದ ವತಿಯಿಂದ ಕುಮಟಾದ ಡಯಟ್ ಸಭಾಂಗಣದಲ್ಲಿ ತೃತೀಯ ಸೋಪಾನ ಪರೀಕ್ಷಾ ಶಿಬಿರವನ್ನು ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಮುಖ್ಯ ಆಯುಕ್ತರು ಡಾಕ್ಟರ್ ಜಿ.ಜಿ. ಸಭಾಹಿತರವರು ಕಾರ್ಯಕ್ರಮದ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳನ್ನು ಕಂಡು ಸಂತೋಷವಾಗಿದೆ. ಇದೇ ರೀತಿ ರಾಜ್ಯ ಪುರಸ್ಕಾರ ರಾಷ್ಟ್ರಪತಿ ಪುರಸ್ಕಾರ ಪ್ರಶಸ್ತಿಗಳನ್ನು ಪಡೆದುಕೊಳ್ಳುವುದು ನಮ್ಮ ಜಿಲ್ಲೆಗೆ ಹೆಮ್ಮೆ ಪಡುವ ವಿಚಾರವಾಗಿದೆ. ಈ ಬಗ್ಗೆ ಜಿಲ್ಲೆಯಿಂದ ಎಲ್ಲ ರೀತಿಯ ಸಹಾಯ, ಸಹಕಾರಗಳನ್ನು ನೀಡಲಾಗುವುದು ಎಂದು ತಿಳಿಸಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ತಾಲೂಕಾ ನೋಡಲ್ ಅಧಿಕಾರಿ ಶ್ರೀ ಪರಮೇಶ್ವರ ಭಂಡಾರಿ ಅಂತರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಅತ್ಯುತ್ತಮ ಗುಣಮಟ್ಟದ ವ್ಯವಸ್ಥೆ, ಸೇವೆ, ಮನರಂಜನಾ ಕಾರ್ಯಕ್ರಮ, ಪ್ರದರ್ಶನಾಮಳಿಗೆಗಳು, ಊಟ ಉಪಚಾರ, ಸ್ವಚ್ಛತೆ ಪ್ರತಿಯೊಂದು ಹಂತದಲ್ಲೂ ಅಚ್ಚುಕಟ್ಟಾಗಿ ನಡೆದ ಈ ಜಾಂಬೂರಿ ಕಾರ್ಯಕ್ರಮ ಬಹಳ ಉತ್ತಮವಾಗಿ ನಡೆಯಲು ಕಾರಣಕರ್ತರಾದ ಪ್ರತಿಯೊಬ್ಬರಿಗೂ ಅಭಿನಂದನೆ ಸಲ್ಲಿಸಿದರು. ಮಕ್ಕಳು, ಪಾಲಕರು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಈ ಜಾಂಬೂರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಹಾಗೂ ಈ ಅವಕಾಶವನ್ನು ಕಳೆದು ಕೊಂಡವರು ಬೇಸರಗೊಂಡಿದ್ದಾರೆ ಎಂದು ಹೇಳಿದರು. ಜಿಲ್ಲಾ ಕಾರ್ಯರ್ಶಿ ಶ್ರೀ ಆರ್.ಟಿ. ಹೆಬ್ಬಾರ್, ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಶೋಭಾ ಕುಲಕರ್ಣಿ, ಜಿಲ್ಲಾ ತರಬೇತಿ ಆಯುಕ್ತರು(ಗೈಡ್), ಶ್ರೀಮತಿ ಬೇಬಿ ಪಡಿಯಾರ, ಪರೀಕ್ಷಾರ್ಥಿಗಳಿಗೆ ಶುಭ ಕೋರಿದರು. ಶ್ರೀಬಾಬು ನಾಯ್ಕ, A.D.C (S), ಶ್ರೀ ವೆಂಕಟೇಶ್ ಗುಬ್ಬಿ ಹಿತ್ತಲ ಭಟ್ಕಳ ಸ್ಥಳೀಯ ಸಂಸ್ಥೆ



ಕಾರ್ಯದರ್ಶಿ, ಶ್ರೀಮತಿ ಸುನೀತಾ ನಾಯ್ಕ, ಶ್ರೀ ಜಿ.ಆರ್. ನಾಯ್ಕ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಜಿಲ್ಲಾ ಖಜಾಂಚಿ ಶ್ರೀ ಜಿ.ಆರ್. ಮಡಿವಾಳರವರು ವಂದನಾರ್ಪಣೆ ಮಾಡಿದರು. ಸುಮಾರು 106 ಕಬ್, ಸ್ಕೌಟ್–ಗೈಡ್, ರೋವರ್–ರೇಂಜರ್ ವಿದ್ಯಾರ್ಥಿಗಳು, ಸ್ಕೌಟ್–ಗೈಡ್ ಶಿಕ್ಷಕರು ಭಾಗವಹಿಸಿದ್ದರು. ಶಿಬಿರದ ನಾಯಕರಾಗಿ ಸ್ಕೌಟ್ ವಿಭಾಗದಲ್ಲಿ ಶ್ರೀ ಜಿ.ಆರ್. ಮಡಿವಾಳ, ಗೈಡ್ಸ್ ವಿಭಾಗದ ನಾಯಕಿಯಾಗಿ ಶ್ರೀಮತಿ ಬೇಬಿ ಪಡಿಯಾರ್ ಈ ಶಿಬಿರವನ್ನು ಯಶಸ್ವಿಗೊಳಿಸಿದರು.

* ಮಾರ್ಚ್ 08 ರಂದು ಕುಮಟಾ ತಾಲ್ಲೂಕಿನ ಅಘನಾಶಿನಿ ಗ್ರಾಮದಲ್ಲಿ ಬುಡಕಟ್ಟು ಜನಾಂಗದ ಹಾಲಕ್ಕಿ ಜನರಿಂದ ಮಹಿಳಾ ದಿನಾಚರಣೆ ಆಚರಿಸಲಾಯಿತು. ಈ ಸಂರ್ಭದಲ್ಲಿ ಹಾಲಕ್ಕಿ ಮುಖಂಡರಾದ ಶ್ರೀ ಬೊಮ್ಮಗೌಡರು, ಶ್ರೀ ಸೋಮನಾಥ ಗೌಡರು, ಪಂಚಾಯಿತಿ ಸದಸ್ಯರಾದ ಶ್ರೀಮತಿ ಆಗೇರ, ಕಾರ್ಯದರ್ಶಿ ಶ್ರೀ ಕೆ.ಪಿ. ಭಂಡಾರಿ, ಡಿ.ಟಿ.ಸಿ. ಶ್ರೀಮತಿ ಬೇಬಿ ಎಸ್. ಪಡಿಯಾರ ,ಗೈಡ್ಸ್ ಕ್ಯಾಪ್ಟನ್ ಸುನೀತಾ ನಾಯ್ಕ, ಊರಿನ 40 ಮಹಿಳೆಯರು 10 ಸದಸ್ಯರು ಉಪಸ್ಥಿತರಿದ್ದರು. ಮಹಿಳೆಯರಿಗಾಗಿ ಸಂಗೀತ ಕುರ್ಚಿ, ತಲೆಯ ಮೇಲೆ ಪುಸ್ತಕ ಹೊತ್ತು ನಡಿಗೆ ಸ್ಪರ್ಧೆ ನಡೆಯಿತು. ವಿಜೇತರಾದ ಮಹಿಳೆಯರಿಗೆ ಮತ್ತು ಭಾಗವಹಿಸಿದ್ದ ಎಲ್ಲರಿಗೂ ಬಹುಮಾನ ವಿತರಿಸಲಾಯಿತು. ಆರ್ಥಿಕವಾಗಿ ಬಹಳ ಹಿಂದುಳಿದ ಆರು ಮಹಿಳೆಯರಿಗೆ ಶ್ರೀಮತಿ ಬೇಬಿ ಎಸ್. ಪಡಿಯಾರ್ ಸೀರೆ ವಿತರಣೆ ಮಾಡಿದರು.



* ಮಾರ್ಚ್ 08 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಹೊನ್ನಾವರದ ಎಂ.ಪಿ.ಇ. ಸೊಸೈಟಿಯ ಕೇಂದ್ರೀಯ ವಿದ್ಯಾಲಯದಲ್ಲಿ ಪಾಲಕರಿಗೆ ಪೌಷ್ಟಿಕ ಆಹಾರದ ಮಹತ್ವದ ಕುರಿತು ಮಾಹಿತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಅತಿಥಿಗಳಾಗಿ ಆಗಮಿಸಿದ ಡಾಕ್ಟರ್ ಚೈತ್ರ ಪಂಡಿತ್, ಸಮತೋಲನ ಆಹಾರ ಮತ್ತು ಪೌಷ್ಟಿಕ ಆಹಾರ ಸೇವನೆಯ ಕುರಿತು ಪಾಲಕರಿಗೆ ಸವಿಸ್ತಾರವಾಗಿ ಮಾಹಿತಿ ನೀಡಿದರು. ಶ್ರೀಮತಿ ಶ್ವೇತಾ ಎನ್. ಸ್ವಾಗತಿಸಿದರು. ಶ್ರೀಮತಿ ರಾಜೇಶ್ವರಿ ಕಾರ್ಯಕ್ರಮ ನಿರೂಪಿಸಿದರು. ಉಪಪ್ರಾಂಶುಪಾಲರಾದ ಶ್ರೀಮತಿ ವನಿತಾ ನಾಯ್ಕ ಅತಿಥಿಗಳಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ವಿದ್ಯಾರ್ಥಿಗಳು, ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಗಳು ಈ ಸಂರ್ಭದಲ್ಲಿ ಉಪಸ್ಥಿತರಿದ್ದರು.

## ಕೋಲಾರ

* ಫೆಬ್ರವರಿ 17 ರಂದು ಕೋಲಾರ ಸ್ಕೌಟ್ ಭವನದಲ್ಲಿ ಭಾರತ್ ಸ್ಕೌಟ್ ಮತ್ತು ಗೈಡ್ಸ್ ಮತ್ತು ರೋಟರಿ ಕೋಲಾರ ನಂದಿನಿ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು.

* ಫೆಬ್ರವರಿ 20 ರಂದು ಕೋಲಾರ ಜಿಲ್ಲೆಯ ಸುಪ್ರಸಿದ್ಧ ಆವಣಿ ಜಾತ್ರಾ ಮಹೋತ್ಸವದಲ್ಲಿ ಜಿಲ್ಲಾ ಮುಖ್ಯ ಆಯುಕ್ತರ ನೇತೃತ್ವದಲ್ಲಿ ರೋವರ್ಸ್

ಮತ್ತು ರೇಂಜರ್ಸ್ ಪಾನಕ, ವೇದಿಕೆ, ಆಹಾರ ವಿತರಣೆ, ದೇವಾಲಯ ಮುಂತಾದ ಸ್ಥಳಗಳಲ್ಲಿ ಸೇವೆಯನ್ನು ಸಲ್ಲಿಸಲಾಯಿತು.

* ಫೆಬ್ರವರಿ 22 ರಂದು "ಸಂಸ್ಥಾಪಕರ ದಿನಾಚರಣೆ"ಯನ್ನು ಕೋಲಾರ ಜಿಲ್ಲಾ ಸಂಸ್ಥೆಯಿಂದ ಆಚರಿಸಲಾಯಿತು. ಮತ್ತು ಸೈಕಲ್ ಜಾಥ ಮೂಲಕ ವಿವಿಧ ನಗರಗಳಲ್ಲಿ ಅರಿವು ಮೂಡಿಸುವ ಮೂಲಕ ಕಾರ್ಯಕ್ರಮ ನಡೆಸಲಾಯಿತು.

* ಫೆಬ್ರವರಿ 22 ರಿಂದ 23ರ ವರಿಗೆ ಬಂಗಾರಪೇಟೆ ಸ್ಥಳೀಯ ಸಂಸ್ಥೆಯಿಂದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಮತ್ತು ತಾಲ್ಲೂಕು ಮಟ್ಟದ ಸಂಸ್ಥಾಪಕರ ದಿನಾಚರಣೆ ಆದರಿಸಲಾಯಿತು.



* ಫೆಬ್ರವರಿ 02 ರಂದು ಸರ್ಕಾರಿ ಮಹಿಳಾ ಕಾಲೇಜು ಕೋಲಾರ ಇಲ್ಲಿ "ಸಂಸ್ಥಾಪಕ ದಿನಾಚರಣೆ"ಯನ್ನು ರೇಂಜರ್ ಲೀಡರ್ ಡಾ. ಕೆ.ಆರ್. ಮಂಜುಳ ರವರ ನೇತೃತ್ವದಲ್ಲಿ ಅತ್ಯಂತ ಯಶಸ್ವಿಯಾಗಿ ಸಂಘಟಿಸಲಾಯಿತು. ವಿವಿಧ ಸ್ಪರ್ಧೆಗಳನ್ನು ಆಯೋಜಿಸಿ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

* ಫೆಬ್ರವರಿ 25 ರಂದು ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಶಾಲೆ ಹಂಚಾಳಗೇಟ್ ಬಂಗಾರಪೇಟೆ ಕೋಲಾರ ಇಲ್ಲಿ ನಾಯಕತ್ವ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು.

* ಮಾರ್ಚ್ 04 ಮತ್ತು 05 ರಂದು ಸಮುದಾಯ ಅಭಿವೃದ್ಧಿ ಶಿಬಿರದ ಅಡಿಯಲ್ಲಿ ಸ.ಹಿ.ಪ್ರಾ. ಶಾಲೆ. ಮಠಪುರ, ಕೋಲಾರ ತಾಲ್ಲೂಕು ಇಲ್ಲಿ ಶಾಲಾ ಕಟ್ಟಡಗಳಿಗೆ ಬಣ್ಣ ಬಳಿಯುವ ಸೇವಾ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ವಿ.ಎಂ. ನಾರಾಯಣಸ್ವಾಮಿ, ಸಹ ಕಾರ್ಯದರ್ಶಿ ವಿ.ಬಾಬು, ಜಿಲ್ಲಾ ಸಂಘಟಕ ವಿಶ್ವನಾಥ ವಿ., ಹಸಿರು ಪಡೆಯ ಶ್ರೀಯುತರಾದ ನಿರಂಜನ್, ಹರೀಶ್. ವಸಂತ್, ವೆಂಕಟೇಗೌಡ, ಕಲ್ಪನ ಹಾಗೂ ಮುಂತಾದವರು ಭಾಗವಹಿಸಿದ್ದರು.



* ಉತ್ತಮ ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ಎಂದು ಕೋಲಾರ ತಾಲ್ಲೂಕು ಆರೋಗ್ಯಾಧಿಕಾರಿಗಳಾದ ಡಾ. ನಾರಾಯಣಸ್ವಾಮಿ ಅಭಿಪ್ರಾಯ ಪಟ್ಟರು. ನಗರದ ಸ್ಕೌಟ್ ಭವನದಲ್ಲಿ ಫೆಬ್ರವರಿ 28 ರಂದು ತಾಲ್ಲೂಕು ಆರೋಗ್ಯ ಇಲಾಖೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರೋಟರಿ ನಂದಿನಿ ವತಿಯಿಂದ ಶಿಕ್ಷಕರಿಗೆ ಆಯೋಜಿಸಿದ್ದ ಆರೋಗ್ಯ ಇಲಾಖೆಯ ಪನರ್ ಮನನ ಮಾಹಿತಿ ಕಾರ್ಯಗಾರವನ್ನು ಉದ್ಘಾಟಿಸಿ ಮಾತಾನಾಡುತ್ತಾ ಶಿಕ್ಷಕರು ನಮ್ಮ ಇಲಾಖೆಯ ಕಾರ್ಯಕ್ರಮಗಳ ಸಂಪೂರ್ಣ ಮಾಹಿತಿಯನ್ನು ಪಡೆದು ತಮ್ಮ ವ್ಯಾಪ್ತಿಯ ಗ್ರಾಮ ಮತ್ತು ಪಟ್ಟಣಗಳಲ್ಲಿನ ಸಾರ್ವಜನಿಕರಿಗೆ ತಲುಪಿಸುವ ಮೂಲಕ ಉತ್ತಮ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಬಹುದು. ಆರೋಗ್ಯ ಇಲಾಖೆಯ ಕಾರ್ಯಕ್ರಮಗಳು ಸಾರ್ವಜನಿಕರಿಗೆ ಬೇಗ ತಲುಪುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಇದೇ ರೀತಿಯ ಸಹಕಾರ ಸದಾ ಸಿಗಲಿ ಎಂದು ಆಶಿಸಿದ್ದರು.

ಶಿಕ್ಷಣ ಸಂಯೋಜಕರಾದ ಕೆ. ಶ್ರೀನಿವಾಸ್ ರವರು ಮಾತನಾಡಿ ಆರೋಗ್ಯ ಇಲಾಖೆ ಮತ್ತು ಶಿಕ್ಷಣ ಇಲಾಖೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಸಮಾಜಕ್ಕೆ ಉತ್ತಮ ಸೇವೆಯನ್ನು ಸಲ್ಲಿಸುವ ಮೂಲಕ ಆರೋಗ್ಯವಂತ ಸಮಾಜದ ನಿರ್ಮಾಣ ಮಾಡಬಹುದು ಕೋವಿಡ್ ಬಂದ ಮೇಲೆ ಹೆಚ್ಚುಗಮನ ನೀಡುತ್ತಿದ್ದಾರೆ. ರೋಗ ಬಂದ ಮೇಲೆ ಕ್ರಮ ಕೈಗೊಳ್ಳುವ ಮೊದಲು ರೋಗ ಬರದಂತೆ ಇರಲು ಏನು ಅಭ್ಯಾಸಗಳನ್ನು ಮಾಡಿಕೊಳ್ಳಬೇಕು ಎಂಬುದನ್ನು ಶಾಲಾ ಹಂತದಿಂದಲೇ ನಾವು ಮಕ್ಕಳಿಗೆ ಅರಿವು ನೀಡುವುದರ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಬಹುದು ಎಂದು ತಿಳಿಸಿದರು.

ಜಿಲ್ಲಾ ಕಾರ್ಯದರ್ಶಿ ಶ್ರೀ ವಿ.ಎಂ. ನಾರಾಯಣಸ್ವಾಮಿರವರು ಮಾತನಾಡಿ "ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ 3 ವರ್ಷದ ಬಾಲಕರಿಂದ ಆರೋಗ್ಯ ಶಿಕ್ಷಣ ನೀಡುತ್ತಿದ್ದು ಈ ಸೇವೆ ಕೇವಲ ನಮ್ಮ ಸಂಸ್ಥೆಯ ಸದಸ್ಯರಿಗಲ್ಲ ತರಬೇತಿ ಪಡೆದ ಮಕ್ಕಳು ತಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳುವ ಮೂಲಕ ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳುತ್ತಿದ್ದಾರೆ" ಎಂದು ತಿಳಿಸಿದ್ದರು. ತಾಲ್ಲೂಕು ಆರೋಗ್ಯಶಿಕ್ಷಣಾಧಿಕಾರಿ ಶ್ರೀ ಸತ್ಯನಾರಾಯಣ ಗೌಡ, ಸಂಪನ್ಮೂಲವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್ ಸುರೇಶ್, ಜಿಲ್ಲಾ ಸಹ ಕಾರ್ಯದರ್ಶಿ ಶ್ರೀ ಬಾಬು, ಜಿಲ್ಲಾ ಸಂಘಟಕ ವಿಶ್ವನಾಥ ವಿ., ಶ್ರೀಯುತರಾದ ಹಾಗೂ ಪದಾಧಿಕಾರಿಗಳಾದ ವಿಠಲ್ ರಾವ್, ಶಶಿಕುಮಾರ್, ಮುನಿಸ್ವಾಮಿರೆಡ್ಡಿ, ಮುನಿನಾರಾಯಣಪ್ಪ, ಡಾ. ಕೆ.ಆರ್. ಮಂಜುಳ ಹಾಗೂ ಸ್ಕೌಟ್ಸ್ ಗೈಡ್ಸ್, ಎನ್.ಸಿ.ಸಿ, ಎನ್.ಎಸ್.ಎಸ್. ಶಿಕ್ಷಕರುಗಳು ಮುಂತಾದವರು ಉಪಸ್ಥಿತರಿದ್ದರು

* "ಸುಸ್ಥಿರ ಸಮಾಜ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಮಹತ್ವ"ದ್ದು ಎಂದು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ಅಭಿಪ್ರಾಯಪಟ್ಟರು. ಕೋಲಾರ ನಗರದ ಸ್ಕೌಟ್ ಭವನದಲ್ಲಿ ಭಾರತ್ ಸ್ಕೌಟ್ಸ್-ಗೈಡ್ಸ್, ಕೋಲಾರ, ರೋಟರಿ ಕೋಲಾರ ನಂದಿನಿ, ರತ್ನಮಾಲ

ಮಹಿಳಾ ಮಂಡಳಿ, ಚೌಡೇಶ್ವರಿ ಅರ್ಬನ್ ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್, ವತಿಯಿಂದ ಆಯೋಜನೆ ಮಾಡಿದ್ದ "ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ" ಸಾಧಕರನ್ನು ಸನ್ಮಾನಿಸಿ ಮಾತನಾಡುತ್ತಾ ನಮ್ಮ ಸಮಾಜದಲ್ಲಿ ಶಾಂತಿ ನೆಮ್ಮದಿ, ಮತ್ತು ಸಹಬಾಳ್ವೆಯನ್ನು ಸಾಧಿಸುವಲ್ಲಿ ಮಹಿಳೆಯರ ಪಾತ್ರ ಮಹತ್ವದ್ದು ನಾವು ಕಾನೂನು ಅರಿತು ಸಾಗಿದಾಗ ಸಮಾಜದಲ್ಲಿ ಕಿವಿಗೊಡದೆ ನಮ್ಮ ಕೆಲಸಕಾರ್ಯಗಳಲ್ಲಿ ತೊಡಗಿದಾಗ ಅರ್ಥಿಕವಾಗಿ ಸದೃಢರಾಗಿ ಜೀವನಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಕೋಶಾಧಿಕಾರಿ ಶ್ರೀ ಶ್ರೀನಿವಾಸ್‌ರವರು ಮಾತನಾಡಿ ಮಹಿಳೆಯರ ಸಬಲೀಕರಣಕ್ಕಾಗಿ ಪ್ರಧಾನಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ಸಾಕಷ್ಟು ಕಾರ್ಯಕ್ರಮಗಳು ನಡೆಯುತ್ತಿದೆ ಇಂತಹ ಕಾರ್ಯಕ್ರಮಗಳಲ್ಲಿ ಎಲ್ಲಾ ಮಹಿಳೆಯರು ಭಾಗವಹಿಸಿ ತರಬೇತಿ ಪಡೆದು ಸ್ವಯಂ ಉದ್ಯೋಗಿಗಳಾಗಿ ಇತರರಿಗೆ ಮಾದರಿಯಾಗಬೇಕು ಎಂದರು. ಶ್ರೇಯಾ ಆಸ್ಪತ್ರೆಯ ಡಾ. ವಂದನಾರವರು ಮಾತನಾಡಿ ಕುಟುಂಬದ ನಿರ್ವಹಣೆಯಲ್ಲಿ ಹೆಣ್ಣಿನ ಪಾತ್ರ ಮಹತ್ವದಾಗಿದ್ದು ತಾವು ತಮ್ಮ ಆರೋಗ್ಯದ ಕಡೆ ಹೆಚ್ಚಿನ ಆಸಕ್ತಿ ತೋರಬೇಕು, ನಾವು ಆರೋಗ್ಯವಾಗಿದ್ದರೆ ಮಾತ್ರ ನಮ್ಮ ಕುಟುಂಬವು ಆರೋಗ್ಯವಾಗಿರಲು ಸಾಧ್ಯ, ಆದ್ದರಿಂದ ಪ್ರತಿ ನಿತ್ಯ ಸರಳವ್ಯಾಯಾಮ ಮಾಡುವ ಮೂಲಕ ತಮ್ಮ ಆರೋಗ್ಯವನ್ನು ಸುಧಾರಿಸಿಕೊಳ್ಳಬೇಕೆಂದರು.

ಜಿಲ್ಲಾ ಸಂಸ್ಥೆ ಉಪಾಧ್ಯಕ್ಷರಾದ ಶ್ರೀಮತಿ ಚೌಡೇಶ್ವರಿರಾಮು, ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಜಯಶ್ರೀ ಮಾತನಾಡಿದ್ದರು. ಕಾರ್ಯಕ್ರಮದಲ್ಲಿ ವಿಶೇಷವಾಗಿ ಉತ್ತಮ ಸೇವೆಯನ್ನು ಸಲ್ಲಿಸಿರುವ ಹಿಂದಿನ ಕೋಲಾರ ಉತ್ತರ ಜಿಲ್ಲಾ ಸಂಸ್ಥೆಯ ಶ್ರೀಮತಿ ಪ್ರೇಮಾ ವಿನ್ಸೆಂಟ್, ಶ್ರೀಮತಿ ಮಂಜುಳಾ ಭೀಮಾರಾವ್, ತರಬೇತಿ ಆಯುಕ್ತರಾದ ಶ್ರೀಮತಿ ಗೌರಬಾಯಿ, ಎನ್. ಲಕ್ಷ್ಮೀ, ನಗರಸಭೆಯ ಶ್ರೀಮತಿ ಸುಜಾತ, ಮಹಿಳೆಯರನ್ನು 'ಆದರ್ಶ ಮಹಿಳೆ' ಎಂದು ಗುರುತಿಸಿ ಗೌರವಿಸಲಾಯಿತು ಮತ್ತು ಮಹಿಳಾ ದಿನಾಚರಣೆ ಪ್ರಯುಕ್ತ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.




* ಮಾರ್ಚ್ 01 ರಂದು ಪಟಾಲಂ ನಾಯಕರ ತರಬೇತಿ ಶಿಬಿರವನ್ನು ಸ್ಕೌಟ್ ಭವನ ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. 60 ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಮಾರ್ಚ್ 18 ಮತ್ತು 19 ರಂದು ಸಮುದಾಯ ಅಭಿವೃದ್ಧಿ ಶಿಬಿರದ ಅಡಿಯಲ್ಲಿ ಸ.ಹಿ.ಪ್ರಾ. ಶಾಲೆ. ಇರಗಸಂದ್ರ ಕೋಲಾರ ತಾಲ್ಲೂಕು, ಇಲ್ಲಿ ಶಾಲಾ ಕಟ್ಟಡಗಳಿಗೆ ಬಣ್ಣ ಬಳಿಯುವ ಸೇವಾ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಲಾ ಮುಖ್ಯ ಶಿಕ್ಷಕಿ-ಗೈಡ್ ಕ್ಯಾಪ್ಟನ್ ಶ್ರೀಮತಿ ಕೋಮಲ, ಸಹ ಕಾರ್ಯದರ್ಶಿ ಶ್ರೀ ವಿ. ಬಾಬು, ಜಿಲ್ಲಾ ಸಂಘಟಕ ವಿಶ್ವನಾಥ ವಿ., ಬಿ.ಎಸ್.ಜಿ. ಹಸಿರು ಪಡೆಯ ನಿರಂಜನ್, ಹರೀಶ್. ವಸಂತ್, ಚಂದನ್, ವೇಣು ಪ್ರಸಾದ್, ಶಿವಶಂಕರ್, ಕಲ್ಪನ ಬಿಂದು, ಚಂದನ, ದಿವ್ಯ ಹಾಗೂ ಮುಂತಾದವರು ಭಾಗವಹಿಸಿದ್ದರು.

## ರಾಮನಗರ

ಫೆಬ್ರವರಿ 9 ರಂದು ಗ್ರೀನ್ ಬೆಲ್ ಶಾಲೆಯಲ್ಲಿ ಭಾರತ್ ಸ್ಕೌಟ್ಸ್-ಗೈಡ್ಸ್ ಘಟಕಗಳನ್ನು ಪ್ರಾರಂಭಿಸಲಾಯಿತು. ಆ ದಿನದ ಅಧ್ಯಕ್ಷತೆಯನ್ನು ಶಾಲಾ ಕಾರ್ಯದರ್ಶಿಯಾದ ಶ್ರೀಮತಿ ಶಹನಾಜ್ ಅಂಜುಮ್‌ರವರು ವಹಿಸಿದ್ದರು ಹಾಗೂ ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಶಿವನಂಜಪ್ಪರವರು ನೂತನ ಘಟಕವನ್ನು ಉದ್ಘಾಟಿಸಿದರು. ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಉಮಾದೇವಿಯವರು ಉಪಸ್ಥಿತರಿದ್ದರು. ಸ್ಕೌಟ್ಸ್ ಮಾಸ್ಟರ್ ಶ್ರೀಕಾಂತ್‌ರವರು ಹಾಗೂ ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಶಿಲ್ಪರವರು ದೀಕ್ಷಾ ಸಮಾರಂಭವನ್ನು ನಡೆಸಿಕೊಟ್ಟರು.



* ಭಾರತ್ ಸ್ಕೌಟ್ಸ್-ಗೈಡ್ಸ್ ಸಂಸ್ಥೆ ಸಂಸ್ಥಾಪಕ ಲಾರ್ಡ್ ಬೇಡನ್ ಪೊವೆಲ್ ಅವರ ಜನ್ಮದಿನದ ಅಂಗವಾಗಿ ನಗರದ ಸಾತನೂರು ರಸ್ತೆಯ ವೀರೇಗೌಡನದೊಡ್ಡಿ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠ ಶಾಲೆಯ ಮಕ್ಕಳು ಇಲ್ಲಿನ ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸುವುದರ ಜೊತೆಗೆ ಶಾಲೆ ಹಾಗೂ ದೇವಾಲಯದ ಬಳಿ ಸ್ವಚ್ಛತಾ ಶ್ರಮದಾನ ನಡೆಸಿದರು. ಭಾರತ್ ಸ್ಕೌಟ್ಸ್ – ಗೈಡ್ಸ್‌ನ ಫ್ಲಾಕ್ ಲೀಡರ್ ಶಿಕ್ಷಕಿ ಶ್ರೀಮತಿ ಶಾರದಾ ನಾಗೇಶ್ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಮಕ್ಕಳು ಬಾಲ್ಯದಿಂದಲೇ ದಿನಕ್ಕೊಂದು ಉತ್ತಮ ಕೆಲಸ ಮಾಡುವುದನ್ನು ಮೈಗೂಡಿಸಿಕೊಳ್ಳಬೇಕು. ನೀರಿನ ಸಂರಕ್ಷಣೆ, ಪರಿಸರ ಸ್ವಚ್ಛತೆ, ಸುಂದರ ವಾತಾವರಣ ನಿರ್ಮಾಣ ಮಾಡುವಲ್ಲಿ ಮಕ್ಕಳು ಜಾಗೃತರಾಗಬೇಕು ಎಂದು ಕಿವಿಮಾತು ಹೇಳಿದರು. ಶಾಲೆಯ ಮುಖ್ಯೋಪಾಧ್ಯಾಯ ಎಚ್.ಸಿ. ಲಿಂಗರಾಜು ಹಾಗೂ ಹಲವಾರು ಪ್ರೊಫೆಸರ್‌ಗಳು ಪಾಲ್ಗೊಂಡಿದ್ದರು.

* ಫೆಬ್ರವರಿ 22 ರಂದು ರಾಮನಗರ ಸ್ಥಳೀಯ ಸಂಸ್ಥೆಯ ಜೆ.ವಿ.ಹೆಚ್.ಪಿ.ಎಸ್. ಬಿಡದಿ ಶಾಲೆಯಲ್ಲಿ ಬೇಡನ್ ಪೊವೆಲ್ ಮತ್ತು ಲೇಡಿ ಬೇಡನ್ ಪೊವೆಲ್‌ರವರ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಶಾಲೆ ಮುಖ್ಯ ಶಿಕ್ಷಕರು ಶ್ರೀಮತಿ ಪಾರ್ವತಮ್ಮ, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್ ಹಾಗೂ ಕಬ್ಸ್ ಮತ್ತು ಬುಲ್‌ಬುಲ್ಸ್, ದಳದ ನಾಯಕ ನಾಯಕಿಯರು ಹಾಜರಿದ್ದರು.

* ಕೋಡಿಹಳ್ಳಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಸಂಗಯ್ಯ



ಮಠಪತಿರವರು ಸ್ಥಳೀಯ ಸಂಸ್ಥೆಯ ವತಿಯಿಂದ ಫೆಬ್ರವರಿ 25 ರಂದು ಸಂಸ್ಥಾಪಕ ಜನ್ಮ ದಿನಾಚರಣೆ ಹಾಗೂ ವಿಶ್ವ ಚಿಂತನಾ ದಿನ ವಿಶ್ವ ಭ್ರಾತೃತ್ವ ದಿನಾಚರಣೆಯನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಿದರು. ಈ ಸಂದರ್ಭದಲ್ಲಿ ಶಾಲಾ ಮುಖ ಶಿಕ್ಷಕರು ಶ್ರೀ ಕುಮಾರ್ ಹಾಗೂ ಕಾರ್ಯದರ್ಶಿ ಮತ್ತು ಸ್ಕೌಟರ್ ಮತ್ತು ಗೈಡರ್ ಹಾಗೂ ರೋವರ್ ಮತ್ತು ರೇಂಜರ್ ಮತ್ತು ಕಬ್ ಮತ್ತು ಬುಲ್‌ಬುಲ್, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮೊದಲಿಗೆ ಧ್ವಜಾರೋಹಣ ನೆರವೇರಿಸಿ ನಂತರ ಲಾರ್ಡ್ ಬೇಡನ್ ಪೊವೆಲ್ ಮತ್ತು ಲೇಡಿ ಬೇಡನ್ ಪೊವೆಲ್‌ರವರ ಭಾವಚಿತ್ರ ಚಿತ್ರಕ್ಕೆ ಪೂಜೆ ಸಲ್ಲಿಸಿದರು. ಶ್ರೀ ಮಠಪತಿರವರು ಎಲ್ಲರನ್ನು ಸ್ವಾಗತಿಸಿದರು. ತಂದನಂತರ ಶ್ರೀ ಮನು ಎಸ್.ಜಿ.ವಿ. ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಕುರಿತು ಮಾಹಿತಿ ನೀಡಿದರು. ಹಾಗೂ ಬಿ.ಪಿ. ಡೇ ಅಂಗವಾಗಿ ರಾಜ್ಯ ಸಂಸ್ಥೆ ವತಿಯಿಂದ ನೀಡಲಾಗಿದ್ದ ಚಟುವಟಿಕೆ ದಿನಕ್ಕೊಂದು ಒಳ್ಳೆಯ ಕೆಲಸ ಮಾಡುವುದು. ಜಾಗೃತಿ ಜಾಥಾ, ಸ್ವಚ್ಛತೆ ಮಾಡುವ ಬಗ್ಗೆ ಮಾಹಿತಿ ನೀಡಿದರು.

## ರಾಯಚೂರು

ಫೆಬ್ರವರಿ 19 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ಮತ್ತು ಸ.ಮಾ.ಹಿ.ಪ್ರಾ.ಶಾಲೆ ಬಾಯಿದೊಡ್ಡಿ ತಾ: ರಾಯಚೂರು ಶಾಲೆಯಲ್ಲಿ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘ(ರಿ) ಕಲ್ಬುರ್ಗಿ ವಿಭಾಗ ಕಲ್ಬುರ್ಗಿ ಇವರುಗಳು ಕ.ಕ ಶಿಕ್ಷಕರಿಗೆ 2021ರಲ್ಲಿ ತರಬೇತಿ ನೀಡಿದ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ಉಚಿತವಾಗಿ ಸಮವಸ್ತ್ರಗಳನ್ನು ನೀಡಲಾಯಿತು. ಕಿರು ಚಿತ್ರದ ಮೂಲಕ ಸ್ಕೌಟಿಂಗ್–ಗೈಡಿಂಗ್ ಬಗ್ಗೆ ಶ್ರೀಮತಿ ಅಜೀಜಾ ಸುಲ್ತಾನಾ ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು, ಶ್ರೀಮತಿ ಮನುಕುಮಾರಿ ಬಿ.ಎನ್ ಗೈಡ್ ಕ್ಯಾಪ್ಟನ್ ರವರು ಸಂಪೂರ್ಣ ಮಾಹಿತಿಯನ್ನು ನೀಡಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಪದಧಿಕಾರಿಗಳು ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಮತ್ತು ಸ್ಕೌಟ್ಸ್– ಗೈಡ್ಸ್ ಮಕ್ಕಳು ಉಪಸ್ಥಿತರಿದ್ದರು.

* ಫೆಬ್ರವರಿ 19ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ವತಿಯಿಂದ ಸನ್ಮಾನ್ಯಶ್ರೀ ಡಾ॥ ಬಸವರಾಜ ಪಾಟೀಲ್ ಸೇಡಂ, ಅಧ್ಯಕ್ಷರು ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘ (ರಿ) ಕಲ್ಬುರ್ಗಿ ವಿಭಾಗ ಕಲ್ಬುರ್ಗಿ ರವರನ್ನು ಶ್ರೀಮತಿ ಅಜೀಜಾ ಸುಲ್ತಾನಾ ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು ರವರು ಸನ್ಮಾನಿಸಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳು

* ಫೆಬ್ರವರಿ 22 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ವತಿಯಿಂದ ಸಂಸ್ಥಾಪಕರ ಮತ್ತು ವಿಶ್ವ ಚಿಂತನಾ ಹಾಗೂ ವಿಶ್ವ ಭ್ರಾತೃತ್ವ ದಿನಾಚರಣೆಯ ಅಂಗವಾಗಿ ಸ್ಕೌಟ್ ಭವನ ರಾಯಚೂರು ಇಲ್ಲಿ ಸರ್ವ ಧರ್ಮ ಪ್ರಾರ್ಥನೆಯನ್ನು ಆಯೋಜನೆ ಮಾಡಲಾಯಿತು ನಂತರ ಶಾಂತಿ ಜಾಥಾ ಕಾರ್ಯಕ್ರಮವನ್ನು ಮಾನ್ಯ ಶ್ರೀ ಎಮ್. ಈರಣ್ಣ, ಅಧ್ಯಕ್ಷರು, ಜಿಲ್ಲಾ ವೀರಶೈವ ಸಮಾಜ ರಾಯಚೂರು ರವರು ಉದ್ಘಾಟಿಸಿದರು ಹಾಗೂ ಸ್ವಚ್ಛತಾ ಕಾರ್ಯವನ್ನು ಮಾಡಲಾಯಿತು. ನಂತರ ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಅಜೀಜಾ ಸುಲ್ತಾನಾ ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು ರವರ ಅಧ್ಯಕ್ಷತೆಯಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಎನ್. ಶೇಖರ್ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ರಾಯಚೂರು ರವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಸಾವಿತ್ರಿ ಪುರುಷೋತ್ತಮ್ ಉದ್ಯಮಿಗಳು ರಾಯಚೂರು ರವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶ್ರೀ ಆರ್.ಎಚ್.ಸಾಗರ್ ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರು ರವರು ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ವೇದಿಕೆ ಮೇಲೆ ಮುಖ್ಯ ಅತಿಥಿಗಳಾಗಿ ಸನ್ಮಾನ್ಯ ಶ್ರೀ ರವೀಂದ್ರ ಜಲ್ದಾರ್ ಸದಸ್ಯರು ನಗರ ಸಭೆ ರಾಯಚೂರು, ಮಾನ್ಯ ಶ್ರೀ ಚಂದ್ರಶೇಖರ ಭಂಡಾರಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ರಾಯಚೂರು, ಶ್ರೀ ಬಸವರಾಜ ಪಾಟೀಲ್ ಅತ್ತಾನೂರು ಜಿಲ್ಲಾ ಸ್ಥಾನಿಕ ಆಯುಕ್ತರು (ಸ್ಕೌ), ಶ್ರೀ ಡಿ.ಮಹಾದೇವಪ್ಪ, ಶ್ರೀ ನರಸಿಂಹ, ಶ್ರೀಮತಿ ದಾನಮ್ಮ ಜಿಲ್ಲಾ ಕೋಶಾಧಿಕಾರಿಗಳು, ಶ್ರೀ ಜಂಬಣ್ಣ ಖಜಾಂಚಿಗಳು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ರಾಜಶೇಖರ ಪಾಟೀಲ್ ಮುಖ್ಯಗುರುಗಳು ಕೆ.ಇ.ಬಿ ಪ್ರೌಢ ಶಾಲೆ ರವರು ಉಪಸ್ಥಿತರಿದ್ದರು. ನಂತರದಲ್ಲಿ ಎಲ್ಲಾ ಕಬ್ಸ್, ಬುಲ್–ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಕಬ್ ಮಾಸ್ಟರ್, ಫ್ಲಾಕ್ ಲೀಡರ್, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್ ಹಾಗೂ ಕಬ್ಸ್, ಬುಲ್–ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ (210) ರವರು ಭಾಗವಹಿಸಿದ್ದರು. ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ ಎಸ್.ಜಿ.ವಿ ರವರು ಎಲ್ಲರಿಗೂ ವಂದಿಸಿ ಕಾರ್ಯಕ್ರಮವನ್ನು ನಿರೂಪಿಸಿದರು



* ಫೆಬ್ರವರಿ 25 ರಿಂದ 27ರ ವರೆಗೆ ಕರ್ನಾಟಕ ಸರ್ಕಾರ, ಸಮಗ್ರ ಶಿಕ್ಷಣ ಕರ್ನಾಟಕ, ಜಿಲ್ಲಾ ಪಂಚಾಯತ್, ಸಾರ್ವಜನಿಕ ಶಿಕ್ಷಣ ಇಲಾಖೆ ರಾಯಚೂರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಮಾನವಿ ಇವರುಗಳ

ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ "ಕಲಿಕಾ ಹಬ್ಬ-2023 ಸರ್ಕಾರಿ ಪ್ರೌಢ ಶಾಲೆ ಪೋತ್ನಾಳ್ ತಾ: ಮಾನವಿ ಇಲ್ಲಿ ಆಯೋಜನೆ ಮಾಡಲಾಯಿತು ಈ ಸಮಾರಂಭದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ಸ್ನೇಹ ಜ್ಯೋತಿ ವಿದ್ಯಾಲಯ ಪೋತ್ನಾಳ್ ಹಾಗೂ ಲೊಯೋಲಾ ಕಾಪಿಪಲಾಡಿ ಶಾಲೆ ಜಾಗೀರ್ ಪನ್ನೂರು ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ ಎಸ್.ಎಮ್.ಸಿ, ಶ್ರೀ ಮೌನೇಶ ಸ್ಕೌಟ್ ಮಾಸ್ಟರ್, ಶ್ರೀ ವಿನಯ್ ರಾಜ್ ಸ್ಕೌಟ್ ಮಾಸ್ಟರ್ ರವರು ಸ್ವಯಂ ಸೇವಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ.

## ಶಿವಮೊಗ್ಗ

"ಶಿಕ್ಷಣ ಕೇವಲ ಅಂಕಗಳಿಗೆ ಮಾತ್ರ ಸೀಮಿತವಾಗಿರದೆ, ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸೀಮಿತವಾಗಿರಬೇಕು. ಪುಸ್ತಕದ ಕಲಿಕೆಯಿಂದ ವ್ಯಕ್ತಿ ಪರಿಪೂರ್ಣನಾಗಲು ಸಾಧ್ಯವಿಲ್ಲ, ಜೀವನದ ಪ್ರತಿಯೊಂದು ಕ್ಷಣವನ್ನು ಸದುಪಯೋಗ ಮಾಡಿಕೊಂಡು ನಮ್ಮಲ್ಲಿ ನೈತಿಕ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು" ಎಂದು ಡಾ॥ ಧನಂಜಯ ಸರ್ಜಿ ಮಕ್ಕಳತಜ್ಞರು, ಶಿವಮೊಗ್ಗ ತಿಳಿಸಿದರು. ಸಂಸ್ಥಾಪಕರಾದ ಬೇಡನ್ ಪೊವೆಲ್ ಹಾಗೂ ಲೇಡಿ ಬೇಡನ್ ಪೊವೆಲ್‌ರವರ ಜನ್ಮದಿನಾಚರಣೆ ಹಾಗೂ ಜಿಲ್ಲಾ ಪುರಸ್ಕಾರ ಪ್ರಶಸ್ತಿ ಪ್ರಧಾನ ನೇರವೇರಿಸಿ ಅವರು ಮಾತನಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶ ಶಾಸ್ತ್ರಿಯವರು ವಿದ್ಯಾರ್ಥಿ ದೆಸೆಯಲ್ಲಿ ನಿರ್ದಿಷ್ಟ ಗುರಿಯತ್ತ ಗಮನಹರಿಸಬೇಕು.



ಗುರಿ ಸಾಧನೆಗೆ ಶ್ರಮವಹಿಸಬೇಕು. ಸಂಸ್ಥಾಪಕರ ದಿನಾಚರಣೆ ಹಾಗೂ ಜಿಲ್ಲಾ ಪುರಸ್ಕಾರದ ಪ್ರಶಸ್ತಿ ಪ್ರಧಾನ ಮಾಡುವ ವಿಷಯವಾಗಿ ರಾಜ್ಯ ಸಹಾಯಕ ಸಂಘಟನಾ ಆಯುಕ್ತ ಶ್ರೀಮತಿ ಭಾರತಿ ಡಾಯಸ್ ಅವರು ತಿಳಿಸಿದರು. ಸ್ವಾಗತವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಹೆಚ್. ಪರಮೇಶ್‌ರವರು ನೆರವೇರಿಸಿದರು, ವಂದನೆಯನ್ನು ಜಿಲ್ಲಾ ಆಯುಕ್ತರು. (ಗೈ) ಶ್ರೀಮತಿ ಶಕುಂತಲಾ ಚಂದ್ರಶೇಖರ್‌ರವರು ನೆರವೇರಿಸಿದರು. ನಿರೂಪಣೆಯನ್ನು ಜಿಲ್ಲಾ ಖಜಾಂಚಿ ಶ್ರೀಮತಿ ಚೂಡಾಮಣಿ ಇ. ಪವಾರ ಅವರು ನೆರವೇರಿಸಿದರು. ಶಿಬಿರದ ವರದಿಯನ್ನು ಶ್ರೀ ಹೆಚ್. ಶಿವಶಂಕರ್ ಎಎಲ್‌ಟಿರವರು ನೀಡಿದರು. ಈ ಸಮಾರಂಭದಲ್ಲಿ ಜಿಲ್ಲಾ ಪದಾಧಿಕಾರಿಗಳು ಸ್ಕೌಟರ್ಸ್-




ಗೈಡರ್ಸ್‌ಗಳು ಹಾಗೂ 400 ಕಬ್, ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್‌ಗಳು ಹಾಜರಿದ್ದರು.

## ವಿಜಯಪುರ

ಜಿಲ್ಲಾ ಸಂಸ್ಥೆ, ವಿಜಯಪುರ, ಆಶ್ರಯದಲ್ಲಿ ರೋವರ್ಸ್-ರೇಂಜರ್ಸ್‌ಗಳಿಗೆ ಜಿಲ್ಲಾ ಪುರಸ್ಕಾರ ಪರೀಕ್ಷಾ ಶಿಬಿರವನ್ನು ಫೆಬ್ರವರಿ 11 ರಿಂದ 13ರ ವರೆಗೆ ವಾಸಂತಿಬಾಯಿ ಜಿಗಜಿನಿ ಸ್ಕೌಟ್ಸ್-ಗೈಡ್ಸ್ ಜಿಲ್ಲಾ ತರಬೇತಿ ಹಾಗೂ ಶಿಬಿರ ಕೇಂದ್ರ, ಬುರಣಾಪುರ, ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ಶಿಬಿರದ ಉದ್ಘಾಟನೆಯನ್ನು ಫೆಬ್ರವರಿ 11 ರಂದು ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಸಿದ್ದಣ್ಣ ಎಂ. ಸಕ್ರೀರವರು ನೆರವೇರಿಸಿದರು. ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು "ಇಂದಿನ ಯುವಕರಲ್ಲಿ ಶಿಸ್ತು, ದೇಶಪ್ರೇಮ ಮೂಡಿಸುವಲ್ಲಿ ಸ್ಕೌಟ್ಸ್-ಗೈಡ್ಸ್ ಪ್ರಮುಖ ಪಾತ್ರ ವಹಿಸುತ್ತದೆ" ಎಂದು ಹೇಳಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಜಿಲ್ಲಾ ಅಧ್ಯಕ್ಷರಾದ ಡಾ. ಸತೀಶ್ ಜಿಗಜಿನಿರವರು "ಸ್ಕೌಟ್ಸ್-ಗೈಡ್ಸ್ ಅಂತಾರಾಷ್ಟ್ರೀಯ ಸ್ವಯಂ ಸೇವಾ ಸಂಘಟನೆಯಾಗಿದ್ದು, ಯುವಕರ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರಿಯಾಗಿದೆ" ಎಂದು ಹೇಳಿದರು. ಸಮಾರಂಭದಲ್ಲಿ ಜಿಲ್ಲಾ ಕೋಶಾಧ್ಯಕ್ಷರಾದ ಶ್ರೀ ಸಹಜಾನಂದ ದಂಧರಗಿ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ.ಎಸ್. ಕುಂಬಾರ್ ಜಿಲ್ಲಾ ಸಹಕಾರ್ಯದರ್ಶಿಗಳಾದ ಶ್ರೀ ಶರಣು ಸಬರದ, ಸ್ಕೌಟರ್ ರಾಜ್ಯ ಪ್ರತಿನಿಧಿಗಳಾದ ಶ್ರೀ ಎಸ್.ಎಸ್. ಬೊಮ್ಮನಹಳ್ಳಿ ಮುಂತಾದವರು ಉಪಸ್ಥಿತರಿದ್ದರು. ಮೂರು ದಿನಗಳ ಕಾಲ ನಡೆದ ಶಿಬಿರದಲ್ಲಿ ಜಿಲ್ಲೆಯ ವಿವಿಧ ಕಾಲೇಜುಗಳ 105 ರೋವರ್ಸ್, 100 ರೇಂಜರ್ಸ್ ಒಟ್ಟು 205 ಮಂದಿ ಭಾಗವಹಿಸಿದ್ದರು. ರೋವರ್ ವಿಭಾಗದ ಶಿಬಿರದ ನಾಯಕರಾಗಿ ಹಾಸನ ಜಿಲ್ಲೆಯ ಶ್ರೀ ಕುಮಾರಸ್ವಾಮಿ ಹಾಗೂ ರೇಂಜರ್ ವಿಭಾಗದ ಶಿಬಿರದ ನಾಯಕಿಯಾಗಿ ಶ್ರೀಮತಿ ಅಭಿಲಾಷ್ ನಾಗಾವಿರವರು ಕಾರ್ಯನಿರ್ವಹಿಸಿದರು.

* ಫೆಬ್ರವರಿ 13 ರಂದು ಶಿಬಿರ ಮುಕ್ತಾಯ ಸಮಾರಂಭವನ್ನು ನಡೆಸಲಾಯಿತು. ಅಧ್ಯಕ್ಷತೆಯನ್ನು ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ವಿದ್ಯಾವತಿ ಅಂಕಲಗಿರವರು ವಹಿಸಿಕೊಂಡಿದ್ದರು. ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ.ಎಸ್. ಕುಂಬಾರರವರು ಸ್ಕೌಟ್ ಗೈಡ್ ಧ್ಯೇಯ ಮತ್ತು ಉದ್ದೇಶಗಳನ್ನು ವಿವರಿಸಿದರು. ಮುಖ್ಯ ಅತಿಥಿಗಳಾಗಿ ಪದವಿ ಪೂರ್ವ ಕಾಲೇಜಿನ ಉಪನಿರ್ದೇಶಕರಾದ ಶ್ರೀ ಬಿ.ಎಸ್. ಬಗಲಿ, ಬಾಲಕರ

ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಬಿ.ಬಿ. ಗಂಗನಳ್ಳಿ, ರೇಂಜರ್ ಲೀಡರ್ಸ್ ಶ್ರೀಮತಿ ಸುನಂದಾ ಬೂದಿಹಾಳ, ಡಾ. ಉಷಾದೇವಿ ಹಿರೇಮಠ, ಶ್ರೀಮತಿ ಶ್ವೇತಾ ಘಂಟಿ ರೋವರ್ ಲೀಡರ್ಸ್ ಶ್ರೀ ಎಂ.ಬಿ. ಕನ್ನೂರ, ಡಾ. ಅನಿಲ ನಾಯಕ್ ಮುಂತಾದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಶಿಬಿರದ ನಾಯಕರಾದ ಶ್ರೀ ಕುಮಾರಸ್ವಾಮಿ, ಶ್ರೀಮತಿ ಅಭಿಲಾಷ್ ನಾಗಾವಿ, ಜಾಂಚನಮಾಲಾರವರನ್ನು ಹಾಗೂ ಸ್ಕೌಟ್ಸ್–ಗೈಡ್ಸ್ ರಾಜ್ಯಪಾಲ ಪ್ರಶಸ್ತಿ ಪಡೆದ ರೇಂಜರ್ ವಿದ್ಯಾರ್ಥಿನಿ ಕು॥ ಸಾಕ್ಷಿ ಸುರೇಶ್ ಜಮಖಂಡಿ ಅವರನ್ನು ಗೌರವಿಸಲಾಯಿತು. ಕಾರ್ಯಕ್ರಮವನ್ನು ಜಿಲ್ಲಾ ಸಂಘಟಕರಾದ ಶ್ರೀ ರಾಜಶೇಖರ ಖೇಡಗಿರವರು ನಿರೂಪಣೆ ಮಾಡಿದರು.

* ಜಿಲ್ಲಾ ಸಂಸ್ಥೆ ವಿಜಯಪುರ ಹಾಗೂ ಕರ್ನಾಟಕ ಪಬ್ಲಿಕ್ ಶಾಲೆ ಹಳಗುಣಕಿ ಇವರ ಸಹಯೋಗದಲ್ಲಿ ಸ್ಕೌಟ್ಸ್–ಗೈಡ್ಸ್ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು. ಇಂಡಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಡಾ. ಮಂಜುನಾಥ ಕೋಟೆಣ್ಣವರ ಅವರು ಮಾತನಾಡಿ ಸದೃಢ ಭಾರತ ನಿರ್ಮಾಣಕ್ಕೆ ಸ್ಕೌಟ್ಸ್–ಗೈಡ್ಸ್ ಸಹಕಾರಿಯಾಗಿದೆ ಎಂದು ಹೇಳಿದರು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ.ಎಸ್. ಕುಂಬಾರ ಹಾಗೂ ಶಾಲೆಯ ಶಿಕ್ಷಕ ವೃಂದ ಮತ್ತು ಎಸ್.ಡಿ.ಎಂ.ಸಿ. ಪದಾಧಿಕಾರಿಗಳು, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.



* ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ) ಹಾಗೂ ನಿಡಗುಂಡಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಎಸ್.ವಿ. ಭಜಂತ್ರಿ ಇವರ ನೇತೃತ್ವದಲ್ಲಿ ಬಿ.ಎಂ.ಎನ್.ಪಿ. ಶಾಲೆ, ಆಲಮಟ್ಟಿ ಶಾಲೆಯಲ್ಲಿ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು. ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಶಾಲಾ ಶಿಕ್ಷಕ ವೃಂದ ಹಾಜರಿದ್ದರು. ನಂತರ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



* ಮುದ್ದೇಬಿಹಾಳ ಸ್ಥಳೀಯ ಸಂಸ್ಥೆಯ ವತಿಯಿಂದ ಸಂಸ್ಥಾಪಕರ ದಿನಾಚರಣೆ ಹಾಗೂ ಚಿಂತನಾ ದಿನಾಚರಣೆಯನ್ನು ಆಚರಿಸಲಾಯಿತು. ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರು ಶ್ರೀ ಸೋಮನಗೌಡ ಬಿರಾದಾರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಡಿ.ಬಿ. ವಡವಡಗಿ ಉಪಾಧ್ಯಕ್ಷರು. ಶ್ರೀಮತಿ ಸಹನಾ ಬಡಿಗೇರ ಉಪಾಧ್ಯಕ್ಷರು, ಶ್ರೀ ಎಸ್.ಎಸ್. ಹೂಗಾರ ಚೇರಮನ್ನರು ಹಾಗೂ ಶ್ರೀ ಗೋಪಾಲ ಹೂಗಾರ ಖಜಾಂಚಿ, ಸ್ಕೌಟರ್ಸ್–ಗೈಡರ್ಸ್, ರೋವರ್ಸ್–ರೇಂಜರ್ಸ್ ಭಾಗವಹಿಸಿದ್ದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಜಿ.ಹೆಚ್. ಚವ್ಹಾಣ್‌ರವರು ಸರ್ವರನ್ನೂ ಸ್ವಾಗತಿಸಿ ವಂದಿಸಿದರು.




* ಸಂಸ್ಥಾಪಕರ ದಿನಾಚರಣೆಯ ನಿಮಿತ್ತವಾಗಿ ಲೋಯೋಲಾ ಶಾಲೆ ಸಿಂದಗಿ ಇಲ್ಲಿ ಸರ್ವಧರ್ಮ ಪ್ರಾರ್ಥನೆ ನಡೆಸಲಾಯಿತು. ದ್ವಿತೀಯ ಹಾಗೂ ತೃತೀಯ ಸೋಪಾನ ಪ್ರಮಾಣಪತ್ರ ವಿತರಿಸಲಾಯಿತು. ಪ್ರಾಚಾರ್ಯರು ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು. ಸ್ಕೌಟ್ ಮಾಸ್ಟರ್ ಶ್ರೀ ಆರ್.ವೈ. ಸಿಂಧೆ, ಗೈಡ್ ಕ್ಯಾಪ್ಟನ್ ಶ್ರೀಮತಿ ಪುಷ್ಪಾರವರು ಕಾರ್ಯಕ್ರಮವನ್ನು ಸಂಘಟಿಸಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ಸೋಮಪುರ, ಜಿಲ್ಲಾ ಸಂಘಟಕ ಶ್ರೀ ರಾಜಶೇಖರ ಖೇಡಗಿ ಭಾಗವಹಿಸಿ ಶುಭ ಹಾರೈಸಿದರು.




* ಫೆಬ್ರವರಿ 22 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಿಂದಗಿಯಲ್ಲಿ ಸಂಸ್ಥಾಪಕ ದಿನಾಚರಣೆಯನ್ನು ಆಚರಿಸಲಾಯಿತು. ಈ ದಿನದ ಸವಿನೆನಪಿಗಾಗಿ ಎಲ್ಲಾ ರೋವರ್ಸ್–ರೇಂಜರ್ಸ್‌ಗಳಿಂದ ಮತ್ತು ದಳ ನಾಯಕರಿಂದ ಗ್ರಂಥಾಲಯದ ಸ್ವಚ್ಛತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ನಂತರ ವೇದಿಕೆ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್.ಎಸ್. ಹಳೆಮನಿ, ಐ.ಕ್ಯೂ.ಎ.ಸಿ. ಸಂಚಾಲಕರಾದ ಶ್ರೀ ಸೈಯದ್ ಸಿ. ರಾಜುದ್ದೀನ್ ಖಾದ್ರಿ, ರೋವರ್ಸ್

ದಳನಾಯಕ ಡಾ. ಸೈಯದ್ ಮುಜೀಬ್ ಅಹ್ಮದ್ ಮತ್ತು ರೇಂಜರ್ಸ್ ದಳನಾಯಕಿ ಶ್ರೀಮತಿ ನೀಲಮ್ಮ ಹತ್ತಳ್ಳಿರವರೆಲ್ಲರೂ ಉಪಸ್ಥಿತರಿದ್ದು ಮತ್ತು ಸ್ಕೌಟ್ಸ್-ಗೈಡ್ಸ್‌ನ ಪ್ರಾರಂಭ, ಬೆಳವಣಿಗೆ ಮತ್ತು ಇತಿಹಾಸವನ್ನು ಪಟಾಲಂನ ವಿದ್ಯಾರ್ಥಿಗಳಿಗೆ ತಿಳಿಸಲಾಯಿತು.

## ಯಾದಗಿರಿ

ಫೆಬ್ರವರಿ 22 ರಂದು ಸಂಸ್ಥಾಪಕರ ಮತ್ತು ವಿಶ್ವ ಚಿಂತನ ಹಾಗೂ ವಿಶ್ವ ಭ್ರಾತೃತ್ವ ದಿನಾಚರಣೆಯನ್ನು ಸರಕಾರಿ ಆಸ್ಪತ್ರೆ ಶಹಾಪುರದಲ್ಲಿ ಆಚರಿಸಲಾಯಿತು. ಶ್ರೀ ಶಿವಶೇಖರಪ್ಪ ಗೌಡ ಶಿರವಾಳ ಫೌಂಡೇಶನ್ ಟ್ರಸ್ಟ್ (ರಿ.) ಹಾಗೂ ಜಿಲ್ಲಾ ಅಂಧತ್ವ ನಿವಾರಣ ಸಂಸ್ಥೆ ಯಾದಗಿರಿ ಇವರ ಸಂಯೋಗದಲ್ಲಿ ಕಣ್ಣಿನ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸೆ ಶಿಬಿರವನ್ನು ಸರ್ಕಾರಿ ಆಸ್ಪತ್ರೆ ಶಹಾಪುರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದಲ್ಲಿ ರೋವರ್ಸ್-ರೇಂಜರ್ಸ್‌ಗಳು ಮಾಸ್ಕ್‌ಗಳನ್ನು ನೀಡಿ ಸೇವೆಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಸಹಾಯಕ ಜಿಲ್ಲಾ ಆಯುಕ್ತರಾದ ಶ್ರೀ ಸುಧಾಕರ್ ಗುಡಿ, ಶಹಾಪುರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶಿವರಾಜ್ ದೇಶ್‌ಮುಖ್, ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಗುಂಡಪ್ಪ ತುಂಬಗಿ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ಗೋಗಿ, ಸ್ಕೌಟ್ ಮಾಸ್ಟರ್ ಶ್ರೀರಂಗಣ್ಣ ಜಿಲ್ಲೆ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೋವರ್ಸ್, ರೇಂಜರ್ಸ್‌ಗಳು ಹಾಗೂ ಸ್ಕೌಟ್-ಗೈಡ್ಸ್ ಸಹಾಯಕ ಶ್ರೀ ಮಹಮ್ಮದ್ ಶರ್ಫುದ್ದೀನ್‌ರವರು ಉಪಸ್ಥಿತರಿದ್ದರು.



* ಫೆಬ್ರವರಿ 15 ರಂದು ಶ್ರೀ ಬಸವೇಶ್ವರ ಕಲ್ಯಾಣ ಮಂಟಪ ಯಾದಗಿರಿಯಲ್ಲಿ ಅಂತರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯ ಯಶಸ್ಸಿನ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಸಹಕರಿಸಿದ ದಾನಿಗಳಿಗೆ ಹಾಗೂ ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡು ಕಾರ್ಯನಿರ್ವಹಿಸಿದಂತಹ ಜಿಲ್ಲಾ ಪದಾಧಿಕಾರಿಗಳಿಗೆ ಮತ್ತು ತಾಲ್ಲೂಕು ಪದಾಧಿಕಾರಿಗಳಿಗೆ ಮತ್ತು ಕಂಟಿಜೆಂಟ್ ಲೀಡರ್‌ಗಳಿಗೆ ಹಾಗೂ ಡಿಡಿಪಿಐ (ಆಡಳಿತ) ಮತ್ತು ಡಿಡಿಪಿಐ (ಅಭಿವೃದ್ಧಿ)ರವರಿಗೆ ಮಾನ್ಯ ರಾಜ್ಯ ಪ್ರಧಾನ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಮತ್ತು ರಾಜ್ಯ ಸಹಾಯಕ ಆಯುಕ್ತರಾದ ಶ್ರೀ ಸಿ.ಬಿ. ಪಾಟೀಲ್ ಓಕಳಿ (ಸ್ಕೌ) ಹಾಗೂ ಕಲ್ಯಾಣ ಕರ್ನಾಟಕ ವಿಭಾಗ ಉಸ್ತುವಾರಿಗಳಾದ ಶ್ರೀಮತಿ ಮಲ್ಲೇಶ್ವರಿ ಜೂಜಾರೆರವರು ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ಸುರೇಶ್ ಸಜ್ಜನ್, ಉಪನಿರ್ದೇಶಕರಾದ ಸಾ.ಶಿ.ಇ. ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ



ಶ್ರೀ ಶಾಂತಗೌಡ ಪಾಟೀಲ್, ಜಿಲ್ಲಾ ಆಯುಕ್ತರಾದ ಶ್ರೀ ಸಿ.ಎಂ. ಪಟ್ಟೆದಾರ್ (ಸ್ಕೌ) ಡಯಟ್ ಪ್ರಾಂಶುಪಾಲರಾದ ಶ್ರೀ ಶೈಲ್ ಬಿರಾದಾರ್, ಜಿಲ್ಲಾ ಆಯುಕ್ತರಾದ ಶ್ರೀಮತಿ ನಾಗರತ್ನ ಅನುಪೂರ್ (ಗೈ), ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಸುಭಾಷ್ ಚಂದ್ರ ಕೌಲಗಿ, ಮಹಾತ್ಮ ಗಾಂಧಿ ಆಂಗ್ಲ ಮಾಧ್ಯಮ ಶಾಲೆಯ ಅಧ್ಯಕ್ಷರಾದ ಶ್ರೀ ನಾಸಿರ್ ಅಹಮದ್, ಜಿಲ್ಲಾ ಪದಾಧಿಕಾರಿಗಳು ಹಾಗೂ ತಾಲ್ಲೂಕಿನ ಪದಾಧಿಕಾರಿಗಳು, ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು, ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್ಸ್ ಹಾಗೂ ರೋವರ್ಸ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಪ್ರಕಾಶ್ ಅಂಗಡಿ ಕನ್ನಳ್ಳಿರವರು ನಿರ್ವಹಿಸಿದರು. ನಂತರ ಯಾದಗಿರಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿಗೆ ಭೇಟಿ ನೀಡಿ ಜಿಲ್ಲಾಧಿಕಾರಿ ಶ್ರೀಮತಿ ಆರ್. ಸ್ನೇಹಲ್‌ರವರನ್ನು ಸನ್ಮಾನಿಸಿ ಗೌರವಿಸಲಾಯಿತು. ಜಿಲ್ಲಾಡಳಿತ ವತಿಯಿಂದ ಜಿಲ್ಲಾ ತರಬೇತಿ ಕೇಂದ್ರಕ್ಕಾಗಿ ಮಂಜೂರು ಆಗಲಿರುವ ಯಾದಗಿರಿ ನಗರದಿಂದ 8 ಕಿಲೋ ಮೀಟರ್ ಅಂತರದಲ್ಲಿರುವ ಕೊಯ್ಲೂರು ಗ್ರಾಮದ 5 ಎಕರೆ ನಿವೇಶನವನ್ನು ರಾಜ್ಯ ಮುಖ್ಯ ಆಯುಕ್ತರಾದ ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ವೀಕ್ಷಿಸಿದರು.

* ಫೆಬ್ರವರಿ 17 ರಂದು ಸ್ಥಳೀಯ ಸಂಸ್ಥೆ ಶಹಾಪುರ ತಾಲ್ಲೂಕು ಮಟ್ಟದಿಂದ ಸ್ಕೌಟರ್ಸ್-ಗೈಡರ್ಸ್ ಒಂದು ದಿನದ ಸಮಾವೇಶ, ಸ್ಕೌಟ್ ಕ್ಯಾಲೆಂಡರ್ ಬಿಡುಗಡೆ, ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ ಶಾಲೆಯ ಮಕ್ಕಳಿಗೆ ಸ್ಕಾರ್ಫ್, ಪ್ರಮಾಣ ಪತ್ರ ವಿತರಣೆ ಹಾಗೂ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಂಬೂರಿಯಲ್ಲಿ ಭಾಗವಹಿಸಿದ ಶಿಕ್ಷಕರಿಗೆ ಸನ್ಮಾನ ಹಮ್ಮಿಕೊಳ್ಳಲಾಗಿತ್ತು. ನಂತರ ಈ ಸಮಾವೇಶದಲ್ಲಿ ಸೇವೆಯನ್ನು ಸಲ್ಲಿಸಿದಂತಹ ರೋವರ್ಸ್‌ಗಳಿಗೆ ಜಿಲ್ಲಾಡಳಿತ ವತಿಯಿಂದ ನೀಡಿರುವಂತಹ ಫೆಬ್ರವರಿ ತಿಂಗಳ ಮಾಸಿಕ ಪತ್ರಿಕೆಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ತಾಲ್ಲೂಕು ಅಧ್ಯಕ್ಷರಾದ ಶ್ರೀ ಶಿವರಾಜ ದೇಶಮುಖ, ಉಪಾಧ್ಯಕ್ಷರಾದ ಶ್ರೀ ಗುರುಬಸಯ್ಯ ಗದ್ದುಗಿ, ಶ್ರೀ ಮರೆಪ್ಪ ಚಂಡು, ಶ್ರೀಮತಿ ಸುರಯ್ಯ ಬೇಗಮ್ ಉಪಸ್ಥಿತರಿದ್ದರು, ಈ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಚಂದ್ರಕಲಾ ಗೂಗಲ್‌ರವರು ನಿರ್ವಹಿಸಿದರು, ಶ್ರೀ ಮಲ್ಲಯ್ಯ ಬೆಳಗುಂದಿ ಸರ್ವರನ್ನು ವಂದಿಸಿದರು.



# ಎಂ.ಆರ್.ಶ್ರೀ

**ನಮ್ಮ ಸಂಸ್ಥೆಯ**
**ವಾರ್ತಾ ಪತ್ರಿಕೆಯ ಕನ್ನಡ ಅವತರಿಣಿಯ**
**ಪ್ರಥಮ ಸಂಪಾದಕರು – 1922**

**ಎಂ.ಆರ್. ಶ್ರೀನಿವಾಸಮೂರ್ತಿ**
ನಮ್ಮ ಸಂಸ್ಥೆಯ ವಾರ್ತಾ ಪತ್ರಿಕೆಯ,
ಕನ್ನಡ ಅವತರಿಣಿಯ ಪ್ರಥಮ ಸಂಪಾದಕರು–1922

**ಸಿ.ವಿ. ತಿರುಮಲರಾವ್**
ನಿವೃತ್ತ ಜಂಟಿ ನಿರ್ದೇಶಕರು ಶಿಕ್ಷಣ ಇಲಾಖೆ,
ಸದಸ್ಯರು, ಸ್ಕೌಟ್–ಗೈಡ್ ಮಾಸಪತ್ರಿಕೆಯ ಸಂಪಾದಕ ಮಂಡಳಿ

ಇತಿಹಾಸ: ಭಾರತ ಸರ್ಕಾರವು 23ನೇ ಅಕ್ಟೋಬರ್ 1917ರಲ್ಲಿ ನಮ್ಮ ದೇಶದ ಮಕ್ಕಳಿಗಾಗಿ ಸ್ಕೌಟ್ ಕಾರ್ಯಾಚರಣೆಯನ್ನು ಪ್ರಾರಂಭಿಸಲು ಅನುಮತಿಯನ್ನು ಕೊಟ್ಟ ಕೂಡಲೇ ಮೊದಲಿಗೆ ಈ ಪದ್ಧತಿಯನ್ನು ನಮ್ಮ ಶಿಕ್ಷಣ ಪದ್ಧತಿಯೊಂದಿಗೆ ಅಳವಡಿಸಲು ಮುಂದಾದುದು ನಮ್ಮ ಮೈಸೂರು ಸಂಸ್ಥಾನ. ಫ್ರಾಂಕ್ ಸಿ. ಇರ್ವಿನ್ನರು 1918ರ ಪ್ರಾರಂಭ ದಿನಗಳಲ್ಲಿ ಮೈಸೂರು ಸ್ಕೌಟ್ ದಳದ ನಿರ್ದೇಶಕರಾಗಿ ನೇಮಕಗೊಂಡು. ಸ್ಕೌಟ್ ಕಾರ್ಯಾಚರಣೆಯನ್ನು ಪ್ರಾರಂಭಿಸಿದರು. The Mysore School and Scout Magazine ಎಂಬ ಮಾಸಪತ್ರಿಕೆಯು ಕೇವಲ ಇಂಗ್ಲಿಷಿನಲ್ಲಿತ್ತು. ಒಂದು ನಾಡಿನ ಜನತೆಗೆ ತಿಳಿಯಪಡಿಸಬೇಕಾಗುವ ಯಾವುದೇ ವಿಷಯವನ್ನು ಆಯಾ ನಾಡನುಡಿಯಲ್ಲಿ ತಿಳಿಸಿದರೆ ವಿಷಯವು ಸುಲಭವಾಗಿ ಗ್ರಾಹ್ಯವಾಗುತ್ತದೆ. ಅದರಲ್ಲಿಯೂ ಈ ಮಾಸಪತ್ರಿಕೆಯು ಶಾಲಾ ವಿದ್ಯಾರ್ಥಿಗಳಿಗೆ ಹೆಚ್ಚು ಸಂಬಂಧಪಟ್ಟದ್ದು. ಆದಕಾರಣ ಸರಳವಾದ ಕನ್ನಡ ಭಾಷೆಯಲ್ಲಿ ಸ್ಕೌಟ್ ಧ್ಯೇಯಗಳನ್ನು ನೈತಿಕ ವಿಷಯಗಳ ಬೋಧನೆಗೆ ಯೋಗ್ಯವಾದ ಸಾಹಿತ್ಯವನ್ನು ರಚಿಸಲು ಶ್ರೀನಿವಾಸಮೂರ್ತಿಯವರನ್ನು ಪ್ರೇರೇಪಿಸಿದರು. 1921 ಜೂನ್ ಸಂಚಿಕೆಯಿಂದಲೇ ಎಂ.ಆರ್. ಶ್ರೀನಿವಾಸಮೂರ್ತಿಯವರು ಪತ್ರಿಕೆಯ ಕನ್ನಡ ವಿಭಾಗದ ಸಹಾಯಕ ಸಂಪಾದಕರಾದರು. ಕನ್ನಡದಲ್ಲಿ ಲೇಖನಗಳನ್ನು ಪ್ರಕಟಿಸಿದ ಮೇಲೆ ಪತ್ರಿಕೆಯು ಹೆಚ್ಚು ಹೆಚ್ಚು ಜನಪ್ರಿಯವಾಯಿತು. ಈ ಪತ್ರಿಕೆಯು ಶ್ರೀನಿವಾಸಮೂರ್ತಿಯವರ ಸಹಾಯಕ ಸಂಪಾದಕತ್ವದಲ್ಲಿ, 1922ರ ಅಕ್ಟೋಬರ್ ಸಂಚಿಕೆಯಿಂದೀಚೆಗೆ ಕನ್ನಡ ವಿಭಾಗಕ್ಕೆ ಅವರು ಸಂಪಾದಕರಾಗಿ ನೇಮಕರಾದರು. ಹೀಗಾಗಿ ಈ ಪತ್ರಿಕೆಯ ಕನ್ನಡ ಅವತರಣಿಕೆಗೆ ನೂರು ವರುಷಗಳ ಸಂಭ್ರಮ.

ಎಂ.ಆರ್. ಶ್ರೀ ಅವರ ಕೊಡುಗೆ: ಶಿವಮೊಗ್ಗ ಪ್ರೌಢಶಾಲೆಯಲ್ಲಿ ಅವರು ಉಪಾಧ್ಯಾಯರಾಗಿದ್ದರು ಆ ಶಾಲೆಯಿಂದ ಇವರೂ, ಇವರ ನೆಚ್ಚಿನ ಗೆಳೆಯರೂ, ಸಹೋದ್ಯೋಗಿಗಳೂ ಆಗಿದ್ದ ಸಿ. ಸುಬ್ಬರಾಯರೆಂಬುವರು ಮೊದಲ ಸ್ಕೌಟ್ ಶಿಬಿರದಲ್ಲಿಯೇ ತರಬೇತಿಯನ್ನು ಪಡೆದು ಸ್ಕೌಟ್ ಶಿಕ್ಷಕರಾದರು. ಈ ಶಿಕ್ಷಣದ ಅವಧಿಯಲ್ಲಿ ಇವರುಗಳು ತೋರಿದ ಶ್ರದ್ಧೆ, ಉತ್ಸಾಹಗಳಿಂದಾಗಿ ಸ್ಕೌಟ್ ಅಧಿಕಾರಿಯ ಮೆಚ್ಚಿಗೆಗೆ ಪಾತ್ರರಾದರು. ಅಲ್ಲಿಂದ ಮುಂದಕ್ಕೆ ಸುಮಾರು ಒಂದೂವರೆ ವರುಷಗಳ ಕಾಲ ಶಿವಮೊಗ್ಗೆಯಲ್ಲಿ ಇವರಿಬ್ಬರೂ ಜೊತೆ ಜೊತೆಗೇ ಸ್ಕೌಟ್ ಪದ್ಧತಿಯನ್ನೂ ಬೆಳೆಸಿದರು. ಮಕ್ಕಳಲ್ಲಿ ಸಾಹಸ, ಸಹಕಾರ, ಸ್ವಾವಲಂಬನೆ, ನಿಯಮ ಪಾಲನೆ ಮುಂತಾದ ಸ್ವಭಾವಗಳು ಬೆಳೆಯಲು ಸ್ಕೌಟ್ ಪದ್ಧತಿಯಲ್ಲಿ ಅನುಸರಿಸಬೇಕಾಗುವ ಎಲ್ಲ ಕ್ರಮಗಳನ್ನು ಇವರುಗಳು ನಡೆಸುತ್ತಿದ್ದರು. ಶ್ರೀನಿವಾಸಮೂರ್ತಿಯವರು ಮುಂದೆ ಬರೆದ "ಸ್ಕೌಟ್ ಮಾಸ್ಟರು ಬಾಲಕರ ದೊಡ್ಡ ಸಹೋದರನು; ಮಾರ್ಗದರ್ಶಿಯು, ದೂರದಲ್ಲಿ ನಿಂತು ಆಜ್ಞೆಮಾಡಿ ಕೆಲಸ ಮಾಡಿಸುವ ಅಧಿಕಾರಿಯಲ್ಲ" ಎಂದು ಪ್ರಾರಂಭದಲ್ಲಿಯೇ ಸೂಚಿಸಿದ್ದಾರೆ. ಇದರಂತೆಯೇ ಇವರು ವಿದ್ಯಾರ್ಥಿಗಳೊಡನೆ ಸಂಬಂಧವನ್ನಿಟ್ಟುಕೊಂಡಿದ್ದರು. ಇವರಿಗೆ ಅಪಾರವಾದ ಶಿಷ್ಯ ವಾತ್ಸಲ್ಯವಿತ್ತು. ಮಕ್ಕಳೊಡನೆ ಆಟದಲ್ಲಿ, ಮಾತುಕತೆಗಳಲ್ಲಿ ಅಣ್ಣಂದಿರಂತೆಯೇ ಬೆರೆಯುತ್ತಿದ್ದರು. ಇವರುಗಳು ನಡೆಸಬೇಕಾಗಿದ್ದ ಕರ್ತವ್ಯ ನಿರ್ವಹಣೆಯ ವಿಷಯದಲ್ಲಿ ಎಚ್ಚರಿಕೆಯನ್ನು ವಹಿಸುತ್ತಿದ್ದರು. ವಿಷಯಗಳನ್ನು ಕಥೆಯ ರೂಪದಲ್ಲಿ ಮಕ್ಕಳಿಗೆ ಹೇಳಿ ಕೊಡುತ್ತಿದ್ದರು. ಮೂರ್ತಿಯವರು ವಿಜ್ಞಾನದ ವಿಷಯದ ತಿಳಿವಳಿಕೆಯನ್ನು ಕೊಡುತ್ತಿದ್ದರು. ಶಿವಮೊಗ್ಗೆಯಲ್ಲಿ ಸ್ಕೌಟ್ ಚಟುವಟಿಕೆಗಳನ್ನು ಮುಂದುವರಿಸಿದರು. ಸ್ಕೌಟ್ ಪದ್ಧತಿಯನ್ನು ಜನಪ್ರಿಯಗೊಳಿಸಲೆಂದೂ, ಅದರ ಧ್ಯೇಯೋದ್ದೇಶಗಳನ್ನು ಪ್ರಚುರಪಡಿಸಲೆಂದೂ ಪ್ರಕಟಿಸಲಾಗುತ್ತಿದ್ದ ಅನೇಕ ಮೆಚ್ಚುಗೆಯ ಪತ್ರಗಳು ಓದುಗರಿಂದ ಬಂದವು. ಈ "ಸುಳ್ಳುಕಾಗದವೇ" ಎಂ.ಆರ್.ಶ್ರೀ.ಯವರ ಮೊಟ್ಟಮೊದಲ ಸ್ಕೌಟ್ ಸಾಹಿತ್ಯ ಕೃತಿ. ಇದು ಒಂದು ನೀತಿ ಬೋಧಕವಾದ ಸಣ್ಣ ಕಥೆ. ಇದಾದನಂತರ ಸ್ಕೌಟ್ ತತ್ವಗಳ ಆಧಾರದ ಮೇಲೆ ರಚಿಸಿದ ಇನ್ನೂ ಅನೇಕ ಕಥೆಗಳೂ ಲೇಖನಗಳೂ ಪ್ರಕಟವಾಗಿವೆ. ಮಂಜಯ್ಯನ ಚೇಷ್ಟೆ ಅದರ ಪರಿಣಾಮಗಳು, 'ಕೃಷ್ಣಮೂರ್ತಿ' 'ಪರೀಕ್ಷೆಯ ಫಲ', 'ಸ್ಕೂಲ್ ಡೇ', ಬೆಟ್ಟದಲ್ಲಿನ ಕಥೆ, ಇವು ದೊರೆತಿರುವ ಕಥೆಗಳು ಮತ್ತು ಇವರ ಲೇಖನಗಳೆಂದರೆ – "ನಾವು ಕಲಿತಿರುವುದೇನು", "ಸ್ಕೌಟ್‌ಗಳ ಪ್ರಥಮ ಕರ್ತವ್ಯ", "ಸ್ಕೌಟ್ ಗುಂಪಿಗೆ ಏಕೆ ಸೇರಬೇಕು?", "ದೇಶವಾತ್ಸಲ್ಯ ಉಳ್ಳವರು ಬೇಕಾಗಿದ್ದಾರೆ", ಸ್ತ್ರೀಜನ ರಕ್ಷಣೆ ಇತ್ಯಾದಿ.

ಎಂ.ಆರ್.ಶ್ರೀ.ಯವರು ಓದುಗರ ಆಶಯದಂತೆ ಪತ್ರಿಕೆಯ ಕನ್ನಡ ವಿಭಾಗದ ಉಪಯುಕ್ತತೆಯನ್ನು ಹೆಚ್ಚಿಸಿದವರು. ಅಲ್ಲದೆ ಬಾಲಕರ ಅರಳು ಪ್ರತಿಭೆಯನ್ನು ಪ್ರಕಾಶ ಪಡಿಸಲು ಪ್ರಾರಂಭಿಸಿ ಪತ್ರಿಕೆಯನ್ನು ಇನ್ನೂ ಹೆಚ್ಚು ಆಕರ್ಷಣೀಯವಾಗಿ ಮಾಡಿದರು. ಹೀಗೆ ಮಕ್ಕಳ ಸರ್ವತೋಮುಖವಾದ ಪ್ರಗತಿಯನ್ನೂ ಬಯಸುತ್ತಿದ್ದ ಶ್ರೀನಿವಾಸಮೂರ್ತಿಯವರು ಯಾವ ಅವಕಾಶ ಸಿಕ್ಕಿದರೂ ಅದನ್ನು ಇಂಥ ಉದ್ದೇಶ ಸಾಧನೆಗೇ ಬಳಸುತ್ತಿದ್ದರು ಎಂಬುದಕ್ಕೆ ಇದು ಹಿರಿಯ ನಿದರ್ಶನಗಳಲ್ಲೊಂದು.

ಈ ರೀತಿಯಲ್ಲಿ ಬಾಲಕರಲ್ಲಿ ಇರುತ್ತಿದ್ದ ಪ್ರತಿಭೆಯನ್ನು ಗುರುತಿಸಿ ಅವರ ಬೆಳವಣಿಗೆಗೆ ಅವಕಾಶ ಮಾಡಿಕೊಡುತ್ತಿದ್ದರು. ಮಕ್ಕಳಿನ ಒಳ್ಳೆಯ ಗುಣಗಳನ್ನು ಶ್ಲಾಘಿಸಿ ಅವರನ್ನು ಹುರಿದುಂಬಿಸುತ್ತಿದ್ದರು. ಎಂ.ಆರ್.ಶ್ರೀ ಯವರು ಸ್ಕೌಟ್ ಪತ್ರಿಕೆಗಾಗಿ ಬರೆದ ಅನೇಕ ಕಥೆ, ಲೇಖನಗಳ ಜೊತೆಗೆ ಇನ್ನೂ ಅನೇಕ 'ಸ್ಕೌಟ್' ಸಾಹಿತ್ಯ ಕೃತಿಗಳನ್ನೂ ಕನ್ನಡದಲ್ಲಿ ರಚಿಸಿದರು.

ಸಾಮಾಜಿಕ ಚಟುವಟಿಕೆ: ಇಂಥ ಹೊಸ ರೀತಿಯಲ್ಲಿ ಸಾಮಾಜಿಕ ಚಟುವಟಿಕೆಯ ಸುಭದ್ರವಾದ ತಳಹದಿಯ ಮೇಲೆ ನಿಂತು, ವ್ಯಾಪಕವಾಗಿ ಬೆಳೆಯಲು ಶ್ರಮಿಸಿದ ಮೂರ್ತಿಯವರು ತಮ್ಮ ಸ್ಕೌಟ್ ಸಂಬಂಧದ ಸೇವೆಯನ್ನು ಮುಂದುವರಿಸಿ ಅಸಿಸ್ಟೆಂಟ್ ಡಿಸ್ಟ್ರಿಕ್ಟ್ ಸ್ಕೌಟ್ ಕಮಿಷನರ್ ಹಂತವನ್ನೂ ಮುಟ್ಟಿದರು. ಮಕ್ಕಳೊಡನೆ ಬೆರೆತು, ಅವರೊಡನೆ ಆಡಿ ತಮ್ಮಲ್ಲಿದ್ದ ನಿಯಮ ಪಾಲನೆ, ಸರಳತೆ, ನಿಷ್ಠೆ ಮೊದಲಾದ ಸದ್ಗುಣಗಳಿಗೆ ಮಾದರಿಯಾಗಿದ್ದ ಈ ಬಾಲಕರ ನಾಯಕ ನಂತರ ಸಮವಸ್ತ್ರ ಧರಿಸಿ ದೊಡ್ಡ ಸ್ಕೌಟ್ ಮೇಳಗಳಲ್ಲಿ ಭಾಗವಹಿಸುತ್ತಿದ್ದರು. ಸ್ಫುರದ್ರೂಪಿಯಾದ, ಎತ್ತರದ ನಿಲುವಿನ, ಮೂರ್ತಿಯವರು ಮೊದಲೇ ಆಕರ್ಷಕ ವ್ಯಕ್ತಿ. ಬಾಲದ ರುಮಾಲು, ಕಂಠವಸ್ತ್ರ, ಖಾಕಿ ಚಡ್ಡಿ, ಷರಟು ಧರಿಸಿ ಸಮವಸ್ತ್ರದಲ್ಲಿ ಸ್ಕೌಟ್ ದಳದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದ ಸ್ಕೌಟ್ ನಾಯಕ, ಸ್ಕೌಟ್ ಬಾಲಕರಿಗೂ ಉಪಾಧ್ಯಾಯರುಗಳಿಗೂ ಸ್ಫೂರ್ತಿಯ ಕೇಂದ್ರವಾಗಿದ್ದರು.

ನಿಸ್ವಾರ್ಥ ಕಾರ್ಯ ತತ್ಪರತೆ: ತುಂಬು ಉತ್ಸಾಹ, ಶ್ರದ್ಧೆಯಿಂದ ಧ್ಯೇಯೋದ್ದೇಶಕ್ಕಾಗಿ ದೀರ್ಘಕಾಲ ಶ್ರಮಿಸಿದ ಶ್ರೀನಿವಾಸಮೂರ್ತಿಯವರು ಸ್ಕೌಟ್ ಚಟುವಟಿಕೆಗಳಲ್ಲಿ ಬಹಳ ಆಸಕ್ತಿಯುಳ್ಳವರಾಗಿದ್ದರು. ಕೊನೆಯವರೆವಿಗೂ ಸ್ಕೌಟಿನ ಯಾವ ಕಾರ್ಯಕ್ರಮದಲ್ಲಿಯೂ ಉತ್ಸಾಹದಿಂದ ಭಾಗವಹಿಸಲು ಪ್ರೋತ್ಸಾಹಿಸುತ್ತಿದ್ದರು. ಪುರುಷ ಕಾಲದಲ್ಲಿ ಬಹಳ ಕಾಲ ಬಳಸುತ್ತಿದ್ದ ಶ್ರೀಯುತರಿಗೆ ಅಭಿಮಾನಕ್ಕೆ ಸಾಕ್ಷಿಯಾಗಿದೆ. ಪುರುಷ ಪಾತ್ರಗಳನ್ನೊಳಗೊಂಡ ಕಂಠೀರವ ವಿಜಯ ನಾಟಕವನ್ನು ನೋಡದೆ ಕೇಳದ ಕನ್ನಡ ಜನತೆಯೇ ಇಲ್ಲ. ಅನೇಕ ಸ್ಕೌಟ್ ದಳಗಳ ಹಿರಿಯ ಮಹನೀಯರು ಪ್ರೀತಿ ಪೂರ್ವಕವಾಗಿ ನೀಡುತ್ತಿದ್ದ ಬುದ್ಧಿವಾದ ದಿಗ್ದರ್ಶನ ಜವಾಬ್ದಾರಿಯ ಕೆಲಸಗಳು, ಮರ್ಯಾದೆಗಳನ್ನು ಸ್ಕೌಟ್‌ಗಳೂ ದಳಗಳೂ ಹಲವಾರು ಸಲ ಪಡೆದು ಮುಂದುವರೆದಿದ್ದರು. ಶ್ರೀ ಮೂರ್ತಿಗಳಲ್ಲಿದ್ದ ಸ್ಪರ್ಶ ಗುಣಗಳೂ, ನಿಸ್ವಾರ್ಥ ಕಾರ್ಯತತ್ಪರತೆಯೂ ನಾಡಿನ ತರುಣರಲ್ಲಿ ಹರಡಿ ತನ್ಮೂಲಕ ಭದ್ರವಾಗುವ ಜಗತ್ಕಲ್ಯಾಣವು ಎಂ.ಆರ್. ಶ್ರೀನಿವಾಸಮೂರ್ತಿಯವರು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಪರಿಚಿತರಾದುದು ಇವರ ಭಾಷಣದ ಮೂಲಕವೆಂದೇ ಹೇಳಬೇಕು. ಇವರಿಗಿದ್ದ ಪಾಂಡಿತ್ಯದ ಆಗಾಧತೆಯ ಜೊತೆಗೆ ಇವರಲ್ಲಿ ಭಾಷಣ ಕಲೆಯೂ ಸಿದ್ಧಿಸಿತ್ತು. ಇವರು ಭಾರತ್ ಸ್ಕೌಟ್ ಮತ್ತು ಗೈಡ್ಸ್ ಕರ್ನಾಟಕಕ್ಕೆ ಅಡಿಗಲ್ಲಿನ್ನು ಹಾಕಿದ ಪ್ರಮುಖರಲ್ಲಿ ಒಬ್ಬರು. ಅವರ ನೆನಪೇ ನಂದಾದೀಪ.

ಆಕರ ಗ್ರಂಥ: "ಎಂ.ಆರ್.ಶ್ರೀ. ಜೀವನ ಮತ್ತು ಕಾರ್ಯ" – ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

□



# ಯುಗಾದಿ


– ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ

ಮಕ್ಕಳ ಹೃದಯ ತಜ್ಞರು, ಬೆಂಗಳೂರು


"ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ" ಎಂದು ಹಾಡುವ ಕನ್ನಡಿಗರಿಗೆ, ಯುಗಾದಿ ಹಬ್ಬದ ಶುಭಾಶಯಗಳು. ಯುಗಾದಿ ನಮ್ಮ ಭಾರತೀಯರಿಗೆ ಹೊಸ ವರ್ಷದ ಪ್ರಾರಂಭದ ಹಬ್ಬ, ಸಂಭ್ರಮದ ದಿನ. ಪರಬ್ರಹ್ಮ ವಿಶ್ವನಿರ್ಮಿಸಲು ಪ್ರಾರಂಭಿಸಿದ ದಿನ. ಜಗತ್ತಿನ ಉಗಮದ ದಿನ, ಆದ್ದರಿಂದ ಉಗಾದಿ ಎಂದು ಕೂಡ ಕರೆಯುತ್ತೇವೆ. ವಿಶೇಷವೆಂದರೆ ಮರ್ಯಾದಾ ಪುರುಷೋತ್ತಮ, ಶ್ರೀ ರಾಮಚಂದ್ರ 14 ವರ್ಷ ವನವಾಸ ಮುಗಿಸಿ ಮರಳಿ ಅಯೋಧ್ಯೆಗೆ ಬಂದ ದಿನ ಕೂಡ. ಹಾಗಾಗಿ ನಮ್ಮ ಹಬ್ಬದಲ್ಲಿ ಆಚರಣೆ ಇದೆ. ಸಂಭ್ರಮ ಸಂತಸ ಇದೆ, ಜೊತೆಗೆ ಬದುಕಿಗೆ ಅದ್ಭುತ ಸಂದೇಶ ಕೂಡ ಇದೆ. ಯುಗಾದಿಯ ದಿನ ನಾವು "ಶತಾಯುರ್ ವಜ್ರ ದೇಹಾಯ, ಸರ್ವ ಸಂಪತ್ ಕರಾಯಚ, ಸರ್ವಾರಿಷ್ಟ ವಿನಾಶಾಯ ನಿಂಬಕಂ ದಳಭೀಷಣಂ" ಎಂದು ಭಕ್ತಿಯಿಂದ ಕಣ್ಣಿಗೆ ಒತ್ತಿಕೊಂಡು ಬೇವು ಬೆಲ್ಲ ತಿನ್ನುತ್ತೇವೆ. ಇತರರಿಗೆ ಹಂಚುತ್ತೇವೆ. ಕಾರಣ ಜೀವನದಲ್ಲಿ ನಗು, ನೋವು, ಸಿಹಿ–ಕಹಿ, ಸುಖ–ದುಃಖ, ಇಷ್ಟ–ಕಷ್ಟಗಳು ಕೂಡ ಹಗಲು–ರಾತ್ರಿಗಳಂತೆ ಬರುತ್ತವೆ. ಎರಡನ್ನು ಸಮನಾಗಿ ಬೇವು ಬೆಲ್ಲದ ರೂಪದಲ್ಲಿ ಸಾಂಕೇತಿಕವಾಗಿ ಸಮಾನವಾಗಿ ತೆಗೆದುಕೊಳ್ಳಬೇಕೆಂಬ ಮಹತ್ತರವಾದ ಸಂದೇಶವಿದೆ. ಮಕ್ಕಳಾಗಿದ್ದಾಗ ಅಮ್ಮ ಕಾಳು ಕಡಿ ಡಬ್ಬದಲ್ಲಿ ಹುಳು ಹತ್ತಬಾರದೆಂದು ಬೇವಿನ ಎಲೆಗಳನ್ನು ನೈಸರ್ಗಿಕ 'ಕೀಟನಾಶಕ' ತರಹ ಬಳಸಿದ್ದನ್ನು ಕಂಡಿದ್ದೇವೆ. ಆದರೆ ಇಂದು ವೈಜ್ಞಾನಿಕವಾಗಿ ಬೇವು, ಅರಿಶಿಣ ಲೇಪ ಚರ್ಮಕ್ಕೆ ಹಚ್ಚಿಕೊಂಡರೆ ಢೇಂಘಿ, ಮಲೇರಿಯ, ಚಿಕನ್‌ಗುನ್ಯಾ ತರಹದ ಸೊಳ್ಳೆಗಳಿಂದ ಬರುವ ಕಾಯಿಲೆ ತಡೆಗಟ್ಟಬಹುದೆಂದು ತಿಳಿದು ಬಂದಿದೆ. ಬೇವಿನ ಎಲೆ ಅಗಿದು ತಿಂದರೆ ಕೆಂಪುರಕ್ತ ಕಣದೊಳಗಿದ್ದ ಮಲೇರಿಯಾ ಪರಾವಲಂಬಿ ಜೀವಾಣುಗಳು ಸಾಯುತ್ತವೆ ಎಂದು ತಿಳಿದು ಬಂದಿದೆ. ಚರ್ಮ ರೋಗಗಳಾದ ಕಜ್ಜಿ, ಗಜಕರ್ಣ, ಹೊಟ್ಟೆಯಲ್ಲಿಯ ಹುಳನಿಯಂತ್ರಿಸಬಹುದು. ರಕ್ತ ಶುದ್ಧೀಕರಣಗೊಂಡು ವಜ್ರದಂತೆ ದೇಹ ಗಟ್ಟಿಯಾಗಿಸಿಕೊಳ್ಳಬಹುದು. ಇನ್ನು ಬದುಕಿನಲ್ಲಿ ಕಹಿ ಎಂದು ಕಡೆಗಣಿಸದೆ ಆರೋಗ್ಯಕ್ಕೆ ಉತ್ತಮ ಎಂದು ಅರಿಯಬೇಕು. ಬೆಲ್ಲ ಆರೋಗ್ಯಕ್ಕೆ ಉತ್ತಮ. ಅದರಲ್ಲಿರುವ ಕಬ್ಬಿಣ Copper, Selenium, Magnesium, ನಂತರ trace elements ಆರೋಗ್ಯಕರ. ವಿದೇಶಿಯರ ಹೊಸ ವರ್ಷದ ಕುಡಿತ ಅಸಭ್ಯ, ಕುಣಿತ ಅನಾರೋಗ್ಯಕರ. ಆದರೆ ನಮ್ಮ ಯುಗಾದಿ ಅತ್ಯಂತ ಆರೋಗ್ಯಕರ, 100 ವರ್ಷ ಸಾರ್ಥಕ ಬದುಕು ನಡೆಸಲು ಸಾಧನ ಎಲ್ಲರಿಗೂ ಶುಭವಾಗಲಿ.

# ಶ್ರದ್ಧಾಂಜಲಿ



ಕರ್ನಾಟಕ ಸರ್ಕಾರದ ಮಾಜಿ ಸಚಿವರೂ ಹಾಗೂ ವಿಧಾನಸಭೆಯ ಮಾಜಿ ಉಪಸಭಾಪತಿಗಳಾಗಿದ್ದ **ಶ್ರೀ ಅಂಜನಮೂರ್ತಿ ರವರು** ಮಾರ್ಚ್ 22 ರಂದು ನಿಧನರಾದರು. ಇವರಿಗೆ 72 ವರ್ಷ ವಯಸ್ಸಾಗಿತ್ತು. ಇವರು ಮೂರು ಅವಧಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದ ಶ್ರೀಯುತರು, ಜಿಲ್ಲೆಯಲ್ಲಿ ಸ್ಕೌಟ್ಸ್-ಗೈಡ್ಸ್ ಬೆಳವಣಿಗೆಗೆ ನೀಡಿರುವ ಸಹಕಾರ ಮತ್ತು ಪ್ರೋತ್ಸಾಹವನ್ನು ನಮ್ಮ ಸಂಸ್ಥೆ ಕೃತಜ್ಞತೆಯಿಂದ ಸ್ಮರಿಸುತ್ತೇವೆ.



**ಶ್ರೀ ಎನ್.ಆರ್. ಜಗದೀಶ್,** ಖ್ಯಾತ ಉದ್ಯಮಿಗಳು ಹಾಗೂ ಅಧ್ಯಕ್ಷರು, ತುಮಕೂರು ಗ್ರೈನ್ ಮಚೆಂಟರ್ಸ್ ಕೋ-ಆಪರೇಟಿವ್ ಬ್ಯಾಂಕ್, ತುಮಕೂರು ಇವರು 22 ಮಾರ್ಚ್ 2023 ರಂದು ನಿಧನರಾದರು. ಇವರಿಗೆ 90 ವರ್ಷ ವಯಸ್ಸಾಗಿತ್ತು. ಇವರು 1948ರಲ್ಲಿ ತುಮಕೂರು ಜಿಲ್ಲೆಯಲ್ಲಿ "First Maharaja Cub" ಪ್ರಶಸ್ತಿಯನ್ನು ಪಡೆದಿದ್ದರು. ಶ್ರೀ ಸಿದ್ಧಗಂಗಾಮಠದ ಆಪ್ತರಾಗಿದ್ದ ಇವರು ತುಮಕೂರು ನಗರದ ಉದ್ಯಮ, ಸಹಕಾರ, ಶಿಕ್ಷಣ, ಧಾರ್ಮಿಕ ಹಾಗೂ ರಾಜಕೀಯ ರಂಗದಲ್ಲಿ ಉತ್ತಮ ಸೇವೆ ಸಲ್ಲಿಸಿರುತ್ತಾರೆ. ಸಹಕಾರ ಕ್ಷೇತ್ರದಲ್ಲಿ ಅವರು ಸಲ್ಲಿಸಿದ ಸೇವೆಗಾಗಿ 2013-14ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಇವರಿಗೆ "ಸಹಕಾರ ರತ್ನ" ಪ್ರಶಸ್ತಿ ಪಡೆದಿದ್ದರು. ಇವರು ತಮ್ಮ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮ, ಹಿರಿಯ ಮಗ ಉದ್ಯಮಿ ಶ್ರೀ ಎನ್.ಜೆ. ರುದ್ರಪ್ರಕಾಶ್ ಸೇರಿ ಮೂವರು ಮಕ್ಕಳ ಬಹುದೊಡ್ಡ ಕುಟುಂಬ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.




**ಶ್ರೀ ಗಂಗಾಧರ,** ಸ್ಕೌಟ್ಸ್ ಮಾಸ್ಟರ್, ಸ್ನೇಹ ಜ್ಯೋತಿ ವಿದ್ಯಾಲಯ, ಪೋತ್ನಾಳ್, ರಾಯಚೂರು ಜಿಲ್ಲೆ ಇವರು 07 ಮಾರ್ಚ್ 2023 ರಂದು ರಾಯಚೂರಿನಲ್ಲಿ ನಿಧನರಾದರು. ಇವರಿಗೆ 31 ವರ್ಷ ವಯಸ್ಸಾಗಿತ್ತು. ಇವರು ದೈಹಿಕ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದು ಸ್ಕೌಟ್ ವಿಭಾಗದಲ್ಲಿ ಮೂಲ ತರಬೇತಿಯನ್ನು ಪಡೆದು ಐದು ವರ್ಷಗಳಿಂದ ಸೇವೆ ಮಾಡುತ್ತಿದ್ದರು. ಸುಮಾರು 20 ಸ್ಕೌಟ್ಸ್ ಮಕ್ಕಳಿಗೆ ತೃತೀಯ ಸೋಪಾನದವರೆಗೆ ತರಬೇತಿ ನೀಡಿದ್ದರು. ಇವರು ತಮ್ಮ ಧರ್ಮಪತ್ನಿ ಶ್ರೀಮತಿ ಸುಜಾತ ಜಿ., ತಳವಾರ ಮತ್ತು ಇಬ್ಬರು ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.



**ಕುಮಾರ ಶಶಾಂಕ್,** ಸ್ಕೌಟ್, 9ನೇ ತರಗತಿ, ವಾಗ್ದೇವಿ ಇಂಟರ್ನ್ಯಾಷನಲ್ ಸ್ಕೂಲ್, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ ಇವರು ದಿನಾಂಕ 28 ಮಾರ್ಚ್ 2023ರಂದು ನಿಧನರಾದರು. ಇವರಿಗೆ 14 ವರ್ಷ ವಯಸ್ಸಾಗಿತ್ತು. ಇವರು ಸ್ಕೌಟಿಂಗ್‌ನಲ್ಲಿ ತೃತೀಯ ಸೋಪಾನ ಮುಗಿಸಿದ್ದರು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ

**22 ಫೆಬ್ರವರಿ 2023ರಂದು ವಿವಿಧ ಜಿಲ್ಲೆಗಳಲ್ಲಿ ನಡೆದ 'ಸಂಸ್ಥಾಪಕರ ದಿನಾಚರಣೆ' ಪ್ರಯುಕ್ತ ಕಬ್ಸ್-ಬುಲ್‌ಬುಲ್ಸ್ ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು ಸ್ವಚ್ಛತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುದು**


ಬೆಂಗಳೂರು ಗ್ರಾಮಾಂತರ


ಚಿತ್ರದುರ್ಗ


ದಕ್ಷಿಣ ಕನ್ನಡ


ಕೋಲಾರ


ರಾಮನಗರ


ರಾಯಚೂರು


ವಿಜಯಪುರ


ಯಾದಗಿರಿ



ಮಾರ್ಚ್ 08 ರಂದು ರಾಜ್ಯ ಕೇಂದ್ರ ಕಾರ್ಯಾಲಯದಲ್ಲಿ ಜರುಗಿದ 'ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ' ಕಾರ್ಯಕ್ರಮದ ಉದ್ಘಾಟನೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ನೆರವೇರಿಸಿದರು, ರಾಜ್ಯ ಗೈಡ್ಸ್ ಆಯುಕ್ತೆ ಶ್ರೀಮತಿ ಗೀತಾನಟರಾಜ್, ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪಗೌಡ, ಜಂಟಿ ರಾಜ್ಯ ಕಾರ್ಯದರ್ಶಿ ಶ್ರೀಮತಿ ಬಿ.ವಿ. ರಾಮಲತಾ, ಕೇಂದ್ರ ಸ್ಥಾನಿಕ ಆಯುಕ್ತೆ ಶ್ರೀಮತಿ ಮುಕ್ತಾ ಕಾಗಲಿ, ಶ್ರೀಮತಿ ಪೃಥ್ವಿ ಸಿಂಧ್ಯ, ಶ್ರೀಮತಿ ಭುವನೇಶ್ವರಿ ಬಿ.ಬಿ.ಎಂ.ಪಿ. ಗೈಡ್ಸ್ ಆಯುಕ್ತೆ ಚಿತ್ರದಲ್ಲಿದ್ದಾರೆ.

ಮಾರ್ಚ್ 28ರಂದು ರಾಜ್ಯ ಕೇಂದ್ರ ಕಛೇರಿಯಲ್ಲಿ ನಡೆದ ವಿಶ್ವ ಮಹಿಳಾ ದಿನಾಚರಣೆಯ ಕಾರ್ಯಕ್ರಮವನ್ನು ಸಂಸ್ಥೆಯ ಉಪಾಧ್ಯಕ್ಷರು ಹಾಗೂ ತುಮಕೂರು ಜಿಲ್ಲಾ ಮುಖ್ಯ ಆಯುಕ್ತೆ ಶ್ರೀಮತಿ ಆಶಾ ಪ್ರಸನ್ನಕುಮಾರ್ ಉದ್ಘಾಟಿಸಿದರು. ಶ್ರೀ ಪಿ.ಜಿ.ಆರ್. ಸಿಂಧ್ಯ, ಶ್ರೀ ಕೊಂಡಜ್ಜಿ ಬಿ. ಷಣ್ಮುಖಪ್ಪ, ಶ್ರೀಮತಿ ಗೀತಾ ನಟರಾಜ್, ಶ್ರೀ ಕೆ. ಗಂಗಪ್ಪಗೌಡ, ಶ್ರೀಮತಿ ರೇಖಾ ನಿರಂಜನ್, ಅಧ್ಯಕ್ಷರು, ಇನ್ನರ್ ವೀಲ್ ಕ್ಲಬ್ ಆಫ್ ಬೆಂಗಳೂರು ಬ್ಲಾಸಮ್ಸ್ ಡಿಸ್ಟ್ರಿಕ್ಟ್ 319, ಶ್ರೀಮತಿ ವಿನುತಾ ಹರೀಶ್, ಛೇರ್ ಮ್ಯಾನ್ ಇನ್ನರ್ ವೀಲ್ ಕ್ಲಬ್ ಆಫ್ ಬೆಂಗಳೂರು ಬ್ಲಾಸಮ್ಸ್ ಡಿಸ್ಟ್ರಿಕ್ಟ್ 319 ಮತ್ತು ಡಾ. ಗುರು ಸುಹಾಸ್, ಕ್ಯಾನ್ಸರ್ ರೋಗ ತಜ್ಞರು, ಇಂಡಿಯನ್ ಕ್ಯಾನ್ಸ್ರ ಸೊಸೈಟಿ ಭಾಗವಹಿಸಿದ್ದರು.





ಮಾರ್ಚ್ 08 ರಂದು ಬಳ್ಳಾರಿ ಜಿಲ್ಲಾ ಸ್ಕೌಟ್ ಭವನದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷರೂ ಮತ್ತು ವಕೀಲರಾದ ಶ್ರೀಮತಿ ಗಿರಿಜಾ, ಶ್ರೀಮತಿ ಸಂಧ್ಯಾ ಕೋಲಾಚಲಂ, ಶ್ರೀಮತಿ ವಿಜಯಲಕ್ಷ್ಮಿ, ವಕೀಲರು, ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎ.ಎಸ್.ಓ.ಸಿ., ಶ್ರೀಮತಿ ಸತ್ಯವಾಣಿ, ಗೈಡ್ ಕ್ಯಾಪ್ಟನ್, ಶ್ರೀಮತಿ ಪದ್ಮಾವತಿ, ಗೈಡ್ ಕ್ಯಾಪ್ಟನ್ ಇತರರು ಭಾಗವಹಿಸಿದ್ದರು.

ಮಾರ್ಚ್ 08ರಂದು ಕೋಲಾರ ಸ್ಕೌಟ್ ಭವನದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಮುಖ್ಯಸ್ಥ ಶ್ರೀ ಶ್ರೀನಿವಾಸ್, ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಕೆ.ಆರ್. ಜಯಶ್ರೀ, ಡಾ. ವಂದನಾ, ಶ್ರೇಯ ಆಸ್ಪತ್ರೆ, ಕೋಲಾರ, ಜಿಲ್ಲಾ ಸ್ಕೌಟ್ ಆಯುಕ್ತ ಶ್ರೀ ಕೆ.ಆರ್. ಸುರೇಶ್ ಇತರರು ಭಾಗವಹಿಸಿದ್ದರು.



Regd. as News Paper (Magazine) RNI No: 13348/1959. Postal Regd. No. KA/BGGPO/2580/2021-23
Licensed to Post Without Prepayment License No. PMG/BG/WPP-340/2021-2023.
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 40)

JAMIAT OPEN SCHOOL

MADRASA+
10000 STUDENTS
5000 HUFFAZ + 5000 MADRASA STUDENTS

SHAHEEN GROUP OF INSTITUTIONS

## Mainstreaming 10,000 Madrasa Students through modern education

We have designed a programme to provide mainstream education to 5000 Huffaz plus 5000 Madrasa students in 50 Madrasas across India. Madrasa plus is an 18-month programme specially designed for dropouts or those who have never been to school, wherein these Huffaz are provided with an opportunity to enter and pass Class X. The project of providing modern education to Huffaz and Madrasa students aims primarily to integrate the Madrasa-educated students into mainstream education.

The project started will be aimed at helping Huffaz in the age group of 14–18 be made to enter and pass Class X with the NIOS Board.

In collaboration with Maulana Azad National Urdu University, we are organizing a campus recruitment drive to hire 500 teachers for this project. Teaching salaries and other academic administration costs will be covered by the Shaheen Group of Institutions. Quality residential arrangements with food and the provision of quality education have been ensured by madrasa management. Free education will be provided to students who come from economically weaker sections of society (Zakat Eligible). Interested Students can register at www.shaheengroup.org. For more details contact 1800 121 6235.

### 52 Madrasas

| Sl. | Madrasas Name | Contact |
|---|---|---|
| 1 | Madrasa Farooqiya, Sambhal U.P | 8445619993 |
| 2 | Jamia Syed Ahmed Shaheed, Lucknow, U.P | 8050020345 |
| 3 | Jamia Sharqia Islamia Azamgrah U.P | 9506286357 |
| 4 | Jamea Tus Salehat for Girls Rampur U.P | 9319010766 |
| 5 | Maulana Hussain Ahmad Madani Madarsa Ambehta Peer Saharanpur U.P | 9084484786 |
| 6 | Jamia Rahmat Ghaghroli, Saharanpur U.P | 9761434313 |
| 7 | Darul Uloom Hasanpur, Amroha U.P | 9927195560 |
| 8 | Jamia tul Faisal, Bijnor U.P | 9758219175 |
| 9 | Madrasa Faizan-e-Raheemi, Saharanpur U.P | 9719771741 |
| 10 | Darul Quran, Lucknow, U.P | 9415462284 |
| 11 | Tanzimul Maktab Campus, Lucknow, U.P | 8521446295 |
| 12 | Madrasa Arabiya Quraniya, Etawah, U.P | 9412349879 |
| 13 | Maulana Hussain Ahmad Madani Charitable Trust, Deoband, Saharanpur, U.P | 9412233770 |
| 14 | Jamia Arifia, Syed Sarwan, Elahabad, U.P | 9026981216 |
| 15 | Jamiatul Banat, Azamgarh, U.P | 9838023939 |
| 16 | Jamia Qasamia Darul Uloom Zakariya, Moradabad. | 9410818220 |
| 17 | Madrasa Islamia, Jama Masjid, Amroha U.P | 945753338 |
| 18 | Madrasa Islamia Hifzul Quran, Muzaffarnaga, U.P | 9897532266 |
| 19 | Madrasa Darul Uloom Husaini, Muzaffarnagr U.P | 9012609595 |
| 20 | Madrasa Arabia Darul Quran, Deari U.P | 9838252630 |
| 21 | Jamia Shaikhul Islam, Fatahpur, U.P | 7007971055 |
| 22 | Jamiatut Tayyibat, Saharanpur U.P | 9319067469 |
| 23 | Darul Uloom Sabilul Falah Jale, Darbhanga, Bihar | 8294540350 |
| 24 | Imamul Hind Academy Araria, Bihar | 9471077786 |
| 25 | Jamia Hussainia Madni Nagar, Bihar | 9973014786 |
| 26 | Madrasa Reyazul Uloom, Sathi, Bihar | 9472955544 |
| 27 | Jamia Jafaria Madani Nagar, Bihar | 9006022559 |
| 28 | Jamia Islamia Ali Ibn Abi Talib, Jharkhand | 7992498409 |
| 29 | Fatima Academy (Girls & Boys) Ranchi, Jharkhand | 9431361714 |
| 30 | Jamia Faizul Quran, Jharkhand | 8789400170 |
| 31 | Darul-uloom Mohammadia, Nanded, MH. | 9764717111 |
| 32 | Madrasa Arabiya Darul Uloom Muhammadia, MH. | 9422878384 |
| 33 | Darul Uloom Siddiqiya, Latur, Maharastra | 9766786788 |
| 34 | Jamaea Riyazul Uloom, Indore, M.P | 7000581481 |
| 35 | Al Jamia Abu Hurairah Education & welfare Trust, Sundergrah Bisra, Odisha | 8917485620 |
| 36 | Jamia Arabia Barkatul Islam, Sikar, Rajasthan | 9950354212 |
| 37 | Shaheen Millat Hifzul Quran Academy, Rajasthan | 9694052240 |
| 38 | Madrasa Islamia Ihyaul Uloom Bap, Jodhpur, Rajasthan | 9414703320 |
| 39 | Al-Amin School, Salakhapur Siddipet, Telangana | 9966297434 |
| 40 | Understand Al-Quran Academy, Telengana | 7989747243 |
| 41 | Shaheen Hifzul Quran Plus Academy, Rangareddy, T.S | 8977783890 |
| 42 | Jamia Alhuda Al-Islamia Munshidanga, Howrah W.B | 7838022418 |
| 43 | Madrasa Ashraful Uloom, Shlaukpara, Howrah, W.B | 8017071981 |
| 44 | Madrasa Hashimia, Kolkata, W.B | 7008532467 |
| 45 | Darul Uloom Imdadia, Haryana | 9991388999 |
| 46 | Jamia Imam Abu Hanifa, Kanakapura, K.A | 7795240197 |
| 47 | Jameul Uloom, Bannikuppa, K.A | 9642063766 |
| 48 | Dar-ul Umoor Shaheen Academy, Srirangapatna, K.A | 7411739563 |
| 49 | Shaheen Learn Academy, Hassan, K.A | 9035908731 |
| 50 | Jamia Arabia Hussainia, Tumkur, K.A | 988088136 |
| 51 | Riyazul Uloom Aljadeed Arabic College, Hubbali, K.A | 7379526824 |
| 52 | Shaheen Group of Institutions, Bidar, K.A | 18001216235 |

At the Bidar Center, we are providing Huffaz/Ulama who have completed class X with the opportunity to enrol in classes XI-XII, Huffaz/Ulama who have completed class XII with the opportunity to enrol in BA and Bsc programmes that are integrated with UPSC, and degree-passed students with the opportunity to enrol in 1-year competitive exam course.

For more details visit our website www.shaheengroup.org

Appeal | We request that you spread the message through Friday sermons.

Hifzul Quran Plus — Scan Here
Huffaz Success Story — Scan Here
For Admission — Scan Here
50 Administrators/Ulama are Required — Scan Here
500 Teachers are Required — Scan Here

Partner Organisations

An Initiative of

Islamic Centre of India, Lucknow
Parvaaz Foundation
Bearys Group Since 1981 Delivering Excellence Consistently
KKECT
SHERIFF FOUNDATION
SAHAYATA TRUST
JAMIAT OPEN SCHOOL
SHAHEEN GROUP OF INSTITUTIONS

If not delivered, please return to :
**THE EDITOR, Karnataka Scout & Guide**
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
shanthigruha@scout.org.in
www.bsgkarnataka.org

Published by: The Bharat Scouts & Guides, Karnataka, State Headquarters
Shanthi Gruha #39, Palace Road, Bengaluru - 560 001. Publisher & Editor: K. Gangappa Gowda
Printed by: L. Lingappa, M.D. Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Rd, Bengaluru 26